ಸಂಪುಟ 1, ಸಂಚಿಕೆ 18

# ನ್ಯೂ ಇಂಡಿಯಾ ಸಮಾಚಾರ

ಮಾರ್ಚ್ 16–31, 2021
ಉಚಿತ ವಿತರಣೆಗಾಗಿ



## ಸ್ಥಳೀಯ ಆಟಿಕೆಗಳು ಜಾಗತಿಕ ಅವಕಾಶಗಳು

ದೇಶದ ಪ್ರತಿ ಮೂಲೆಯಲ್ಲೂ ವೈವಿಧ್ಯಮಯ ಆಟಿಕೆಗಳು ತಯಾರಾಗುತ್ತಿರುವುದರಿಂದ ಭಾರತೀಯ ಆಟಿಕೆ ಉದ್ಯಮವು ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ತನ್ನ ಕೊಡುಗೆಯನ್ನು ವೃದ್ಧಿಸುವ ಸಾಮರ್ಥ್ಯವನ್ನು ಹೊಂದಿದೆ. ಸರ್ಕಾರದ ಉಪಕ್ರಮಗಳಿಂದಾಗಿ ಭಾರತವು ಪ್ರಮುಖ ಆಟಿಕೆ ತಯಾರಕ ರಾಷ್ಟ್ರವಾಗಲು ಸನ್ನದ್ಧವಾಗಿದೆ.



# ಸ್ವಾವಲಂಬಿ ಭಾರತಕ್ಕೆ ವಿಜ್ಞಾನ, ಹೊಸ ಶೋಧನೆ ಮುಖ್ಯ

**ಪ್ರಧಾನಿ ನರೇಂದ್ರ ಮೋದಿಯವರ 'ಮನ್ ಕಿ ಬಾತ್' ನಲ್ಲಿ ಸ್ವಾವಲಂಬಿ ಭಾರತ ಕೇಂದ್ರಬಿಂದುವಾಗಿತ್ತು. ಅನುಶೋಧನೆ ಮತ್ತು ನೀರಿನ ಸಂರಕ್ಷಣೆಗೆ ಆದ್ಯತೆ ನೀಡುವಂತೆ ಅವರು ಜನರಿಗೆ ಮನವಿ ಮಾಡಿದರು. ಅವರ ಮನ್ ಕಿ ಬಾತ್ ನ ಆಯ್ದ ಭಾಗಗಳು ಇಲ್ಲಿವೆ**

**ನೀರು ಜೀವಾಮೃತ:** ಮಾಘ ಮಾಸವು ನದಿ, ಸರೋವರ ಮತ್ತು ಇತರ ಜಲಮೂಲಗಳೊಂದಿಗೆ ಸಂಬಂಧ ಹೊಂದಿದೆ. ಭಾರತದಲ್ಲಿ, ನೀರಿಗೆ ಸಂಬಂಧಿಸಿದಂತೆ ಪ್ರತೀ ದಿನ ಯಾವುದಾದರೊಂದು ಪ್ರದೇಶದಲ್ಲಿ ಹಬ್ಬ ನಡೆಯುತ್ತದೆ. ನಮಗೆ, ನೀರೇ ಜೀವನ, ನಂಬಿಕೆ ಮತ್ತು ಅಭಿವೃದ್ಧಿಯ ಹರಿವು. ಈ ವರ್ಷ ಕುಂಭಮೇಳವನ್ನು ಹರಿದ್ವಾರದಲ್ಲಿ ಆಯೋಜಿಸಲಾಗುತ್ತಿದೆ. ನಮ್ಮ ಸುತ್ತಲಿನ ಜಲಮೂಲಗಳನ್ನು ಸ್ವಚ್ಛಗೊಳಿಸಲು ಮತ್ತು ಮಳೆನೀರನ್ನು ಸಂರಕ್ಷಿಸಲು 100 ದಿನಗಳ ಅಭಿಯಾನವನ್ನು ನಾವು ಈಗಿನಿಂದಲೇ ಪ್ರಾರಂಭಿಸಬಹುದೇ? ಇದೇ ಚಿಂತನೆಯೊಂದಿಗೆ, ಜಲ ಶಕ್ತಿ ಸಚಿವಾಲಯವು ಸದ್ಯದಲ್ಲೇ 'ಕ್ಯಾಚ್ ದಿ ರೇನ್' (ಮಳೆ ನೀರು ಸಂರಕ್ಷಣೆ) ಎಂಬ ಜಲ ಶಕ್ತಿ ಅಭಿಯಾನವನ್ನು ಪ್ರಾರಂಭಿಸಲಿದೆ.

**ಸಂತ ರವಿದಾಸ್ ಜಯಂತಿ:** ಮಾಘ ಪೂರ್ಣಿಮೆಯಂದು ಸಂತ ರವಿದಾಸ್ ಅವರ ಜಯಂತಿ. ಸಂತ ರವಿದಾಸ್ ಅವರ ಚಿಂತನೆ ಮತ್ತು ಜ್ಞಾನ ನಮಗೆ ಇಂದಿಗೂ ಮಾರ್ಗದರ್ಶಕ.

**ಸಿ ವಿ ರಾಮನ್ ಸ್ಮರಣೆ:** ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು (ಫೆಬ್ರವರಿ 28) ಮಹಾನ್ ವಿಜ್ಞಾನಿ ಡಾ.ಸಿ.ವಿ.ರಾಮನ್ ಅವರ 'ರಾಮನ್ ಎಫೆಕ್ಟ್' ಸಂಶೋಧನೆಗೆ ಸಮರ್ಪಿಸಲಾಗಿದೆ. ವಿಶ್ವದ ಇತರ ವಿಜ್ಞಾನಿಗಳ ಬಗ್ಗೆ ತಿಳಿದುಕೊಂಡಿರುವ ರೀತಿಯಲ್ಲೇ ಭಾರತದ ವಿಜ್ಞಾನಿಗಳ ಬಗ್ಗೆಯೂ ನಾವು ತಿಳಿದುಕೊಳ್ಳಬೇಕು.

**ಹೊಸ ಸಂಶೋಧನೆಗಳು:** 'ಆತ್ಮನಿರ್ಭರ ಭಾರತ' ಅಭಿಯಾನಕ್ಕೆ ವಿಜ್ಞಾನವು ಸಾಕಷ್ಟು ಕೊಡುಗೆಗಳನ್ನು ನೀಡಿದೆ. 'ಲ್ಯಾಬ್ ಟು ಲ್ಯಾಂಡ್' (ಪ್ರಯೋಗಾಲಯದಿಂದ ಜಮೀನಿಗೆ) ಮಂತ್ರದೊಂದಿಗೆ ನಾವು ಮುಂದುವರಿಯಬೇಕಾಗಿದೆ. ಹೈದರಾಬಾದ್‌ನ ಚಿಂತಾಲ ವೆಂಕಟ ರೆಡ್ಡಿ ಅವರು ವಿಟಮಿನ್ ಡಿ ಪೋಷಕಾಂಶ ಒಳಗೊಂಡಿರುವ ವಿವಿಧ ರೀತಿಯ ಗೋಧಿ ಮತ್ತು ಅಕ್ಕಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ತಿಂಗಳು ಅವರು ಜಿನೀವಾದ ವಿಶ್ವ ಬೌದ್ಧಿಕ ಆಸ್ತಿ ಸಂಘಟನೆಯಿಂದ ಪೇಟೆಂಟ್ ಪಡೆದಿದ್ದಾರೆ. ಅದೇ ರೀತಿ ಗುಜರಾತ್‌ನ ಪಟಾಣ್ ಜಿಲ್ಲೆಯ ಕಾಮರಾಜ್ ಭಾಯ್ ಚೌಧರಿ ಅವರು ನುಗ್ಗೇಕಾಯಿಯ ಉತ್ತಮ ಬೀಜಗಳನ್ನು ಅಭಿವೃದ್ಧಿಪಡಿಸಿದ್ದಾರೆ.

**ಸ್ವಾವಲಂಬಿ ಭಾರತ:** ಸ್ವಾವಲಂಬಿ ಭಾರತ ಎನ್ನುವುದು ಒಂದು ರಾಷ್ಟ್ರೀಯ ಮನೋಭಾವ. ಮೇಡ್ ಇನ್ ಇಂಡಿಯಾ ಯುದ್ಧ ವಿಮಾನ ತೇಜಸ್, ಮೇಡ್ ಇನ್ ಇಂಡಿಯಾ ಯುದ್ಧ ಟ್ಯಾಂಕ್‌ಗಳು, ಮೇಡ್ ಇನ್ ಇಂಡಿಯಾ ಕ್ಷಿಪಣಿಗಳು, ಶ್ರೀಮಂತ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮೇಡ್ ಇನ್ ಇಂಡಿಯಾ ಮೆಟ್ರೊ ರೈಲು ಬೋಗಿಗಳು ಮತ್ತು ಮೇಡ್ ಇನ್ ಇಂಡಿಯಾ ಕೊರೊನಾ ವೈರಸ್ ಲಸಿಕೆಗಳು ಡಜನ್ ಗಟ್ಟಲೆ ದೇಶಗಳನ್ನು ತಲುಪುತ್ತಿರುವುದನ್ನು ನೋಡಿದಾಗ ನಾವು ಹೆಮ್ಮೆಯಿಂದ ಬೀಗಬಹುದು. ಈ ಹೆಮ್ಮೆಯನ್ನು ನಾವು ಜವಳಿ, ಕರಕುಶಲ ವಸ್ತುಗಳು, ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಮತ್ತು ಇತರ ಕೆಲವು ಕ್ಷೇತ್ರಗಳಿಗೆ ವಿಸ್ತರಿಸಬೇಕಾಗಿದೆ. ಸ್ವಾವಲಂಬಿ ಭಾರತದ ಮಂತ್ರವು ದೇಶದ ಹಳ್ಳಿಗಳನ್ನೂ ತಲುಪುತ್ತಿದೆ.

**ಪರೀಕ್ಷಾ ಯೋಧ:** ಕೊರೊನಾ ವೈರಸ್ ಸಮಯದದಲ್ಲಿ, ನಾನು ಸ್ವಲ್ಪ ಸಮಯ ತೆಗೆದುಕೊಂಡು ಪರೀಕ್ಷಾ ಯೋಧರ ಪುಸ್ತಕದಲ್ಲಿ ಅನೇಕ ಹೊಸ ಮಂತ್ರಗಳನ್ನು ಸೇರಿಸಿದೆ. ಈ ಮಂತ್ರಗಳಿಗೆ ಸಂಬಂಧಿಸಿದ ಹಲವಾರು ಆಸಕ್ತಿದಾಯಕ ಚಟುವಟಿಕೆಗಳನ್ನು ನರೇಂದ್ರ ಮೋದಿ ಆಪ್‌ನಲ್ಲಿ ನೀಡಲಾಗಿದೆ ಅದು ನಿಮ್ಮಲ್ಲಿರುವ ಪರೀಕ್ಷಾ ಯೋಧನಿಗೆ ಕಿಡಿ ಹೊತ್ತಿಸಲು ಸಹಾಯ ಮಾಡುತ್ತದೆ.

**ಕೊರೊನಾ ವೈರಸ್ ವಿರುದ್ಧ ಅಲಕ್ಷ್ಯ ಬೇಡ:** ಮಾರ್ಚ್ ಆರ್ಥಿಕ ವರ್ಷದ ಕೊನೆಯ ತಿಂಗಳು. ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ತೀವ್ರಗೊಳ್ಳುತ್ತಿವೆ. ನಮ್ಮ ವ್ಯಾಪಾರ ಮತ್ತು ಉದ್ಯಮ ಸ್ನೇಹಿತರ ಚಟುವಟಿಕೆಗಳು ಕೂಡ ಹೆಚ್ಚುತ್ತಿವೆ. ಕೊರೊನಾ ವೈರಸ್ ವಿರುದ್ಧ ನಾವು ನಮ್ಮ ರಕ್ಷಣಾ ಕ್ರಮಗಳನ್ನು ಅನುಸರಿಸದೇ ಇರಬಾರದು.

ಮನ್ ಕಿ ಬಾತ್ ಕೇಳಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನ್ಯೂ ಇಂಡಿಯಾ
# ಸಮಾಚಾರ

ಸಂಪುಟ 1, ಸಂಚಿಕೆ 18 ಮಾರ್ಚ್ 16-31, 2021

**ಸಂಪಾದಕ**
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

**ಸಲಹಾ ಸಂಪಾದಕರು**
ವಿನೋದ್ ಕುಮಾರ್
ಸಂತೋಷ್ ಕುಮಾರ್

**ವಿನ್ಯಾಸಕ**
ರವೀಂದ್ರ ಕುಮಾರ್ ಶರ್ಮ

**ಮುದ್ರಕರು ಮತ್ತು ಪ್ರಕಾಶಕರು**
ಸತ್ಯೇಂದ್ರ ಪ್ರಕಾಶ್
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್ ಪರವಾಗಿ

**ಮುದ್ರಣಾಲಯ**
ಇನ್‌ಫಿನಿಟಿ ಅಡ್ವರ್ಟೈಸಿಂಗ್
ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ–ಒನ್ ಕಾರ್ಪೋರೇಟ್
ಪಾರ್ಕ್, 10ನೇ ಮಹಡಿ,
ನವದೆಹಲಿ–ಫರೀದಾಬಾದ್ ಬಾರ್ಡರ್
ಎನ್‌ಹೆಚ್–1 ಫರೀದಾಬಾದ್–121003

**ಪ್ರಕಾಶಕರು**
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್
2ನೇ ಮಹಡಿ, ಸೂಚನಾ ಭವನ,
ನವದೆಹಲಿ–110003

ನ್ಯೂ ಇಂಡಿಯಾ ಸಮಾಚಾರ

RNI No. : DELKAN/2020/78828

response-nis@pib.gov.in

## ಒಳಗೆ

| | | |
|---|---|---|
| 1 | ಸಂಪಾದಕೀಯ | ಪುಟ. 02 |
| 2 | ಅಂಚೆ ಪೆಟ್ಟಿಗೆ | ಪುಟ. 03 |
| 3 | ಸುದ್ದಿ ತುಣುಕುಗಳು | ಪುಟ.04-05 |
| 4 | ವ್ಯಕ್ತಿತ್ವ | ಪುಟ. 06 |
| 5 | ಅಂತರರಾಷ್ಟ್ರೀಯ ಸಂತಸದ ದಿನ | ಪುಟ. 07 |
| 6 | ಒಟಿಟಿ, ಸಾಮಾಜಿಕ ಮಾಧ್ಯಮ ಮಾರ್ಗಸೂಚಿ | ಪುಟ.08-09 |
| 7 | ಮುಖಪುಟ ಲೇಖನ | ಪುಟ.10-25 |
| 8 | ನೀತಿ ಆಯೋಗ | ಪುಟ. 26 |
| 9 | ಸಂಪುಟದ ನಿರ್ಣಯಗಳು | ಪುಟ. 27 |
| 10 | ಪಿಎಂಜಿಕೆವೈಗೆ ಒಂದು ವರ್ಷ | ಪುಟ.28-29 |
| 11 | ಬಜೆಟ್ ಅನುಷ್ಠಾನ | ಪುಟ.30-31 |
| 12 | ಅಂತರರಾಷ್ಟ್ರೀಯ ಅರಣ್ಯ ಮತ್ತು ಜಲ ದಿನ | ಪುಟ.32-33 |
| 13 | ಶಿಕ್ಷಣ | ಪುಟ.34-35 |
| 14 | ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ | ಪುಟ.36-37 |
| 15 | ಕೊರೊನಾ ವಿರುದ್ಧ ಸಮರ | ಪುಟ.38 |
| 16 | ವಿಶ್ವಭಾರತಿ, ಐಐಟಿ ಖರಗ್‌ಪುರದಲ್ಲಿ ಪ್ರಧಾನಿ | ಪುಟ.39 |
| 17 | ಸಕಾರಾತ್ಮಕ ಕ್ರಮ | ಪುಟ.40 |

# ಸಂಪಾದಕೀಯ

ನಮಸ್ಕಾರ

ಆಟಿಕೆಯು ಮಕ್ಕಳಿಗೆ ಅಪರಿಮಿತ ಸಂತೋಷವನ್ನು ಕೊಡುತ್ತದೆ ಮತ್ತು ಅವರ ಎಳೆ ಮನಸ್ಸಿನ ಮೇಲೆ ಅಳಿಸಲಾಗದ ಛಾಪು ಮೂಡಿಸುತ್ತದೆ. ಆಟಿಕೆಗಳಿಗೆ ಸಂಬಂಧಿಸಿದ ನೆನಪುಗಳು ಮಕ್ಕಳಿಗೆ ಅವರ ಜೀವನಮಾನದುದ್ದಕ್ಕೂ ಸ್ಫೂರ್ತಿ ನೀಡುತ್ತವೆ. ಭಾರತವು ಸ್ಥಳೀಯ ಆಟಿಕೆಗಳ ಶ್ರೀಮಂತ ಸಂಪ್ರದಾಯವನ್ನು ಹೊಂದಿತ್ತು. ಆದರೆ ವಿದೇಶಿ ಉತ್ಪನ್ನಗಳ ಮಹಾಪೂರವು ಭಾರತದ ಮಾರುಕಟ್ಟೆಗಳನ್ನು ಆಕ್ರಮಿಸಿಕೊಂಡಿತು. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಆಟಿಕೆಗಳ ಗ್ರಾಹಕ ದೇಶವಾಗಿದ್ದರೂ, ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಅದರ ಪಾಲು ಕೇವಲ ಶೇ. 0.5 ರಷ್ಟಿದೆ. ಇಂತಹ ಸನ್ನಿವೇಶದಲ್ಲಿ ಸರ್ಕಾರವು ವಿವಿಧ ಕ್ರಮಗಳ ಮೂಲಕ ಆಟಿಕೆ ಉದ್ಯಮವನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸುತ್ತಿದೆ.

ಆಟಿಕೆಗಳ ನೆರವಿನಿಂದ, ಭಾರತೀಯ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಮಕ್ಕಳಿಗೆ ಪರಿಚಯಿಸಲು ಸರ್ಕಾರ ಬಯಸಿದೆ. ಆಟಿಕೆ ಉದ್ಯಮವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಮತ್ತು ಮಕ್ಕಳಿಗೆ ರಾಸಾಯನಿಕ ಮುಕ್ತ ಆಟಿಕೆಗಳನ್ನು ಒದಗಿಸಲು ಸಹ ಸರ್ಕಾರ ಮುಂದಾಗಿದೆ. ಇಂತಹ ನಡೆಗಳು ಭಾರತೀಯ ಆರ್ಥಿಕತೆಗೆ ಪ್ರಯೋಜನ ನೀಡುವುದಲ್ಲದೆ ಮಕ್ಕಳನ್ನು ಹಾನಿಕಾರಕ ಆಟಿಕೆಗಳಿಂದ ರಕ್ಷಿಸುತ್ತವೆ. ಆಟಿಕೆ ಉದ್ಯಮವನ್ನು ಸ್ವಾವಲಂಬಿಯನ್ನಾಗಿ ಮಾಡುವ ಸರ್ಕಾರದ ಕ್ರಿಯಾ ಯೋಜನೆಯನ್ನು ಆಧರಿಸಿ ನ್ಯೂ ಇಂಡಿಯಾ ಸಮಾಚಾರದ ಈ ಸಂಚಿಕೆಯಲ್ಲಿ ಮುಖಪುಟ ಲೇಖನವಿದೆ.

ಇದರೊಂದಿಗೆ, ಈ ಸಂಚಿಕೆಯಲ್ಲಿ ಕೊರೊನಾ ನಂತರ ಶಾಲೆಗಳಿಗೆ ಬಂದಿರುವ ಮಕ್ಕಳ ಬಗ್ಗೆ ವರದಿ ಇದೆ. ಅಲ್ಲದೆ, ಲಕ್ಷಾಂತರ ಜನರಿಗೆ ಪ್ರಯೋಜನವಾಗುವ ವಿವಿಧ ಅಭಿವೃದ್ಧಿ ಕ್ರಮಗಳ ಬಗ್ಗೆಯೂ ಈ ಸಂಚಿಕೆಯಲ್ಲಿ ಚರ್ಚಿಸಲಾಗಿದೆ. 'ಆತ್ಮನಿರ್ಭರ ಭಾರತ' ಅಭಿಯಾನವು ರಾಷ್ಟ್ರ ಸ್ಫೂರ್ತಿಯಾಗಲು ಇದು ಆರಂಭವೇ ಹೊರತು ಅಂತ್ಯವಲ್ಲ.

ನಿಮ್ಮ ಪ್ರತಿಕ್ರಿಯೆಗಳನ್ನು ಅದೇ ಪ್ರೀತಿ ಮತ್ತು ವಿಶ್ವಾಸದಿಂದ ನಮಗೆ ಕಳುಹಿಸಿ.

ವಿಳಾಸ: ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್, ಎರಡನೇ ಮಹಡಿ,
ಸೂಚನಾ ಭವನ, ನವದೆಹಲಿ – 110003
ಇ-ಮೇಲ್: response-nis@pib.gov.in

(ಜೈದೀಪ್ ಭಟ್ನಾಗರ್)

# ಅಂಚೆ ಪೆಟ್ಟಿಗೆ




ನ್ಯೂ ಇಂಡಿಯಾ ಸಮಾಚಾರದಂತಹ ಉಪಯುಕ್ತ ಪತ್ರಿಕೆಯನ್ನು ಪ್ರಕಟಿಸಿದ್ದಕ್ಕಾಗಿ ಅಭಿನಂದನೆಗಳು. ನಾನು ಫೆಬ್ರವರಿ ಸಂಚಿಕೆಯ ಆನ್‌ಲೈನ್ ಆವೃತ್ತಿಯನ್ನು ಓದಿದ್ದೇನೆ. ವಿಷಯಗಳನ್ನು ಅತ್ಯಂತ ನಿಖರವಾಗಿ, ಸರಳ ಭಾಷೆಯಲ್ಲಿ ಪ್ರಸ್ತುತಪಡಿಸಲಾಗಿದೆ.. ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಎಲ್ಲಿಂದ ಪಡೆಯಬಹುದು ಎಂಬುದನ್ನು ದಯವಿಟ್ಟು ತಿಳಿಸಿ. ಪತ್ರಿಕೆಯ ಇಂಗ್ಲಿಷ್ ಮತ್ತು ಹಿಂದಿ ಆವೃತ್ತಿಗಳನ್ನು ನಿಯಮಿತವಾಗಿ ನನ್ನ ಇಮೇಲ್ ಐಡಿಗೆ ದಯಮಾಡಿ ಕಳುಹಿಸಿ.

**ಜಾಗೃತಿ ಪಾಂಡೆ**
**ಎಂ.ಕಾಂ., ಎಲ್‌ಎಲ್‌ಬಿ, ಎಸಿಎಸ್.**
**ಲಕ್ನೋ**
**csjagritipandey@gmail.com**

## ಡಿಜಿಟಲ್ ಕ್ಯಾಲೆಂಡರ್




**ಭಾರತ ಸರ್ಕಾರದ ಡಿಜಿಟಲ್ ಕ್ಯಾಲೆಂಡರ್ ಮತ್ತು ದಿನಚರಿಯು ಅಧಿಕೃತ ರಜಾದಿನಗಳ ಪಟ್ಟಿ ಮತ್ತು ವಿವಿಧ ಪ್ರಮುಖ ದಿನಾಂಕಗಳ ಜೊತೆಗೆ ಸರ್ಕಾರದ ವಿವಿಧ ಯೋಜನೆಗಳು, ಘಟನೆಗಳು ಮತ್ತು ಪ್ರಕಟಣೆಗಳ ಬಗ್ಗೆ ಇತ್ತೀಚಿನ ಮಾಹಿತಿಯನ್ನು ಒದಗಿಸುತ್ತದೆ**

ಇದನ್ನು ಗೂಗಲ್ ಪ್ಲೇ ಸ್ಟೋರ್ ಮತ್ತು ಐಒಎಸ್‌ನಿಂದ ಡೌನ್ಲೋಡ್ ಮಾಡಬಹುದು

| ಗೂಗಲ್ ಪ್ಲೇ ಸ್ಟೋರ್ ಲಿಂಕ್ | ಐಒಎಸ್ ಲಿಂಕ್ |
|---|---|
| https://play.google.com/store/apps/details?id=in.gov.calendar | https://apps.apple.com/in/app/goi-calendar/id1546365594 |

**https://goicalendar.gov.in/**

ಪತ್ರಿಕೆಯಲ್ಲಿ ಹೆಚ್ಚು ಹೆಚ್ಚು ವಿಷಯಗಳನ್ನು ನೀಡಲು ಮಾಡುತ್ತಿರುವ ಅಪಾರ ಪ್ರಯತ್ನಗಳ ಬಗ್ಗೆ ಮೆಚ್ಚುಗೆಯಾಯಿತು. ಚಿತ್ರಾತ್ಮಕ ಪ್ರಸ್ತುತಿ, ಅಕ್ಷರಗಳ ಉತ್ತಮವಾದ ಫಾಂಟ್‌ಗಳು ಮತ್ತು ಚಿತ್ರಗಳು ಪತ್ರಿಕೆಯ ಕೊನೆಯ ಪುಟದವರೆಗೂ ಪ್ರತಿಯೊಬ್ಬ ಓದುಗರ ಆಸಕ್ತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಒಳ್ಳೆಯ ಕೆಲಸ ಹೀಗೆಯೇ ಮುಂದುವರಿಸಿ.
ಧನ್ಯವಾದಗಳು.

**ಋತುರಾಜ್ ಮೊಹಂತಿ**
**ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗ**
**ಭಾರತೀಯ ತಂತ್ರಜ್ಞಾನ ಸಂಸ್ಥೆ, ದೆಹಲಿ**
**"Ruturaj Mohanty mcs18" <Ruturaj.Mohanty.mcs18@cse.iitd.ac.in>;**

ಮೊದಲನೆಯದಾಗಿ, ನವ ಭಾರತ ನಿರ್ಮಾಣಕ್ಕೆ ಭಾರತ ಸರ್ಕಾರ ಕೈಗೊಂಡಿರುವ ಉಪಕ್ರಮದ ಕನ್ನಡಿಯಂತಿರುವ ಈ ಅದ್ಭುತ ಪತ್ರಿಕೆಯನ್ನು ಹೊರತಂದಿದ್ದಕ್ಕಾಗಿ ನನ್ನ ಅಭಿನಂದನೆಗಳು. ನಾನು ಫೆಬ್ರವರಿ 16-28, 2021 ರ ಆನ್‌ಲೈನ್ ಆವೃತ್ತಿಯನ್ನು ಓದಿದ್ದೇನೆ. ಈ ಪತ್ರಿಕೆಯ ಮುದ್ರಿತ ಆವೃತ್ತಿಯ ವಾರ್ಷಿಕ ಚಂದಾದಾರನಾಗಲು ನಾನು ಬಯಸಿದ್ದೇನೆ. ಪ್ರತಿಯೊಬ್ಬರಿಗೂ ನನ್ನ ಶುಭಾಶಯಗಳು.

**ಅಭಯ್ ಕಾಂತ್ .ಝಾ**
**ಇಮೇಲ್ ID - avypur@gmail.com**

ನನ್ನನ್ನು ನಿಮ್ಮ ಪ್ರಯಾಣದ ಭಾಗವಾಗಿಸಿಕೊಂಡಿದ್ದಕ್ಕಾಗಿ ಹಾಗೂ ನ್ಯೂ ಇಂಡಿಯಾ ಸಮಾಚಾರದ ಮೂಲಕ ವ್ಯವಸ್ಥೆ ಮತ್ತು ಸುದ್ದಿಯ ಇತ್ತೀಚಿನ ಮಾಹಿತಿಗಾಗಿ ತುಂಬು ಧನ್ಯವಾದಗಳು. ಗೌರವಾನ್ವಿತ ಪ್ರಧಾನಿ ಮತ್ತು ಅವರ ಸಚಿವ ಸಂಪುಟವು ಕಳೆದ ಕೆಲವು ವರ್ಷಗಳಲ್ಲಿ ಅನುಕರಣೀಯ ಸಮರ್ಪಣೆ ಮತ್ತು ಸಹಿಷ್ಣುತೆಯೊಂದಿಗೆ ಅತ್ಯುತ್ತಮ ಕೆಲಸ ಮಾಡಿದೆ. 370 ನೇ ವಿಧಿ ರದ್ದು, ನೋಟು ಅಮಾನ್ಯೀಕರಣ ಮತ್ತು ಜಿಎಸ್ಟಿಯಂತಹ ಕೆಲವು ಕ್ರಮಗಳು ಸರ್ಕಾರದ ಸಮರ್ಪಣೆ ಮತ್ತು ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ.

**ಸತ್ಯ ಪ್ರಕಾಶ್ ಪಟ್ನಾಯಕ್**
**ಪಂಚಗೋಚಿಯಾ, ಮೊರಾಡಾ,**
**ಮಯೂರ್ಭಂಜ್**
**pattnayaksp80@gmail.com**

# ಭಾರತದಲ್ಲೀಗ ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ



ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಗುಜರಾತ್‌ನ ಅಹಮದಾಬಾದ್‌ನಲ್ಲಿ ಫೆಬ್ರವರಿ 24, 2021 ರಂದು ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವನ್ನು ಉದ್ಘಾಟಿಸಿದರು. ಈ ಕ್ರೀಡಾಂಗಣವು ಪರಿಸರ ಸ್ನೇಹಿ ಪ್ರಮಾಣೀಕರಣದ ಗೋಲ್ಡನ್ ರೇಟಿಂಗ್ ಹೊಂದಿದೆ ಮತ್ತು ಪರಿಸರ ಸ್ನೇಹಿ ಅಭಿವೃದ್ಧಿಗೆ ಒಂದು ಉದಾಹರಣೆಯಾಗಿದೆ. ಈ ಹಿಂದೆ ಮೊಟೇರಾ ಕ್ರೀಡಾಂಗಣ ಎಂದು ಕರೆಯಲಾಗುತ್ತಿದ್ದ ಈ ಕ್ರೀಡಾಂಗಣವನ್ನು ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣ ಎಂದು ಮರುನಾಮಕರಣ ಮಾಡಲಾಯಿತು. ಇದು 1.32 ಲಕ್ಷ ಪ್ರೇಕ್ಷಕರಿಗೆ ಸ್ಥಳಾವಕಾಶ ಕಲ್ಪಿಸುತ್ತದೆ. ಕ್ರೀಡಾಂಗಣವು ಜಾಗತಿಕ ಮಟ್ಟದ ಸೌಲಭ್ಯಗಳನ್ನು ಹೊಂದಿದೆ. 800 ಕೋಟಿ ರೂ. ವೆಚ್ಚದಲ್ಲಿ 63 ಎಕರೆ ಪ್ರದೇಶದಲ್ಲಿ ಈ ಕಂಬಗಳಿಲ್ಲದ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಕ್ರೀಡಾಂಗಣದಲ್ಲಿ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗಿದೆ. ಈ ದೀಪಗಳು ಆಟಗಾರನ ನೆರಳು ಪಿಚ್‌ನಲ್ಲಿ ಬೀಳಲು ಬಿಡುವುದಿಲ್ಲ ಮತ್ತು ಶೇಕಡಾ 40 ರಿಂದ 50 ರಷ್ಟು ವಿದ್ಯುತ್ ಉಳಿಸುತ್ತವೆ. ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವು ಸರ್ದಾರ್ ವಲ್ಲಭಭಾಯ್ ಪಟೇಲ್ ಕ್ರೀಡಾ ಸಂಕೀರ್ಣದ ಒಂದು ಭಾಗವಾಗಿದೆ. ಸರ್ದಾರ್ ಪಟೇಲ್ ಕ್ರೀಡಾ ಸಂಕೀರ್ಣದಲ್ಲಿ ಕನಿಷ್ಠ 20 ಕ್ರೀಡಾಂಗಣಗಳನ್ನು ನಿರ್ಮಿಸಲಾಗುವುದು, ಪ್ರತಿಯೊಂದಕ್ಕೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಗೌರವ ತಂದ ಆಟಗಾರರ ಹೆಸರನ್ನು ಇಡಲಾಗುವುದು. 233 ಎಕರೆ ವಿಸ್ತೀರ್ಣದ ಈ ಮಹತ್ವಾಕಾಂಕ್ಷೆಯ ಈ ಕ್ರೀಡಾ ಸಂಕೀರ್ಣವು ಭಾರತದ ಅತಿದೊಡ್ಡ ಕ್ರೀಡಾ ಸಂಕೀರ್ಣ ಆಗಲಿದೆ.

## ಯೋಗ ದಿನಕ್ಕಾಗಿ ತರಬೇತಿ ಕಾರ್ಯಕ್ರಮ

2015 ರಿಂದ, ಪ್ರತಿವರ್ಷ ಜೂನ್ 21 ರಂದು ವಿಶ್ವದಾದ್ಯಂತ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಭಾರತ ಮತ್ತು ವಿದೇಶಗಳಲ್ಲಿ ಯೋಗಾಭ್ಯಾಸವನ್ನು ಸ್ವೀಕರಿಸುವುದು ಮತ್ತು ಅಳವಡಿಸಿಕೊಳ್ಳುವುದನ್ನು ಹೆಚ್ಚಿಸುವ ಉದ್ದೇಶದಿಂದ ಆಯುಷ್ ಸಚಿವಾಲಯವು ವಿವಿಧ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಅಂತಹುದೇ ಒಂದು ಕ್ರಮ, ಸಾಮಾನ್ಯ ಯೋಗ ಶಿಷ್ಟಾಚಾರ (ಸಿವೈಪಿ) ತರಬೇತಿ ಕಾರ್ಯಕ್ರಮ. ಇದನ್ನು ಯೋಗ ತಜ್ಞರ ತಂಡವು ಅಭಿವೃದ್ಧಿಪಡಿಸಿದ್ದು, ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಧಾರಿಸಲು ಸುರಕ್ಷಿತ ಅಭ್ಯಾಸಗಳನ್ನು ಒಳಗೊಂಡಿದೆ. ಆಯುಷ್ ಸಚಿವಾಲಯವು ಯೋಗದ ಜ್ಞಾನ ಮತ್ತು ಅಭ್ಯಾಸವನ್ನು ಉತ್ತೇಜಿಸಲು ಮತ್ತು ಪ್ರಸಾರ ಮಾಡಲು ಸಿವೈಪಿಯ ಆನ್‌ಲೈನ್ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕಾರ್ಯಕ್ರಮಗಳನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ನಡೆಸಲಾಗುತ್ತದೆ. ಫೆಬ್ರವರಿ 2021 ರಿಂದ ಪ್ರಾರಂಭವಾಗಿರುವ ಈ ತರಬೇತಿ ಪ್ರತಿ ತಿಂಗಳ ಮೊದಲ ದಿನ ಬೆಳಗ್ಗೆ 7 ಗಂಟೆಗೆ ಪ್ರಾರಂಭವಾಗುತ್ತವೆ. ಜೂನ್ 2021 ರವರೆಗೆ ಈ ಕಾರ್ಯಕ್ರಮಗಳು ಮುಂದುವರಿಯುತ್ತವೆ.

## ಸರ್ಕಾರದಿಂದ ಭೂ ಮೇಲ್ಮೈ ದತ್ತಾಂಶಕ್ಕೆ ಉದಾರೀಕೃತ ಮಾರ್ಗಸೂಚಿ ಪ್ರಕಟ

ಭೂ ಮೇಲ್ಮೈ (ಜಿಯೋಸ್ಪೇಷಿಯಲ್) ದತ್ತಾಂಶಕ್ಕೆ ಸಂಬಂಧಿಸಿದಂತೆ ಉದಾರೀಕೃತ ಮಾರ್ಗಸೂಚಿಗಳನ್ನು ಸರ್ಕಾರ ಪ್ರಕಟಿಸಿದೆ. ಭೂಮಿಯ ಮೇಲ್ಮೈನ ವೈಶಿಷ್ಟ್ಯಗಳು ಅಥವಾ ವಸ್ತುಗಳನ್ನು ವಿವರಿಸಲು ಈ ದತ್ತಾಂಶವನ್ನು ಬಳಸಲಾಗುತ್ತದೆ. ಸಂಪೂರ್ಣ ಅನಿಯಂತ್ರಣವು ಭಾರತೀಯ ಸಂಸ್ಥೆಗಳಿಗೆ ವರದಾನವಾಗಲಿದೆ. ಇನ್ನು ಮುಂದೆ ಅವರಿಗೆ ನಕ್ಷೆಗಳು ಸೇರಿದಂತೆ ಜಿಯೋಸ್ಪೇಷಿಯಲ್ ಡೇಟಾ ಮತ್ತು ಜಿಯೋಸ್ಪೇಷಿಯಲ್ ಡೇಟಾ ಸೇವೆಗಳ ಸ್ವಾಧೀನ ಮತ್ತು ಉತ್ಪಾದನೆಗೆ ಯಾವುದೇ ಪೂರ್ವ ಅನುಮೋದನೆ, ಭದ್ರತಾ ಅನುಮತಿ ಅಥವಾ ಪರವಾನಗಿಗಳ ಅಗತ್ಯವಿರುವುದಿಲ್ಲ. ಹೊಸ ಉದಾರೀಕರಣ ಮಾರ್ಗಸೂಚಿಗಳು ಭಾರತೀಯ ಕಾನೂನು ಜಾರಿ ಸಂಸ್ಥೆಗಳು ಸಂಗ್ರಹಿಸಿದ ವರ್ಗೀಕೃತ ಜಿಯೋಸ್ಪೇಷಿಯಲ್ ಡೇಟಾವನ್ನು ಹೊರತುಪಡಿಸಿ, ಸಾರ್ವಜನಿಕ ಹಣವನ್ನು ಬಳಸಿಕೊಂಡು ಉತ್ಪಾದಿಸುವ ಎಲ್ಲಾ ಜಿಯೋಸ್ಪೇಷಿಯಲ್ ಡೇಟಾದ ಲಭ್ಯತೆಯನ್ನು ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಂತಹ ಭಾರತೀಯ ಸಂಸ್ಥೆಗಳಿಗೆ ಸುಲಭವಾಗಿಸುತ್ತವೆ. ಅವರು ಈ ಡೇಟಾವನ್ನು ಯಾವುದೇ ನಿರ್ಬಂಧಗಳಿಲ್ಲದೆ ವೈಜ್ಞಾನಿಕ, ಆರ್ಥಿಕ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಬಳಸಬಹುದು. ಈ ನಿರ್ಧಾರವು ದೇಶದಲ್ಲಿ 1 ಲಕ್ಷ ಕೋಟಿ ರೂ.ಗಳ ಜಿಯೋಸ್ಪೇಷಿಯಲ್ ಆರ್ಥಿಕತೆಗೆ ಕಾರಣವಾಗಲಿದೆ.

# ಚೇತರಿಕೆಯ ಹಳಿಯಲ್ಲಿ ಭಾರತದ ಆರ್ಥಿಕತೆ; ಸಕಾರಾತ್ಮಕವಾದ ಜಿಡಿಪಿ



Interview | Cover Story

**"We are cautiously optimistic with our long-term approach"**

From *Jaan Hai to Jahan Hai* to *Jaan Bhi Aur Jahan Bhi*, India has come a long way from not only saving lives but also bringing the economy on track. The country with 137 Crore population is not only faring better in terms of dealing with COVID-19 pandemic onslaught but also its impact on the economy. The upturn in the economy is visible by various indicators which has been made possible due to proper planning, better execution and a decisive leadership. In an exclusive conversation, Chief Economic Advisor Dr K V Subramanian spoke to Consulting Editors of New India Samachar Vinod Kumar and Santosh Kumar on various issues including future roadmap of the economy. Excerpts:

**Q India's preparation to check COVID-19 pandemic not only saved lives but also gave a new impetus to the economy. How did the Government's plan work effectively, which is taking the country towards a new hope?**

A When cases of COVID-19 started increasing in other countries around March, we studied the pattern of Spanish Flu pandemic that struck around 102 years ago. The one thing that came out of it that countries where lockdown was properly implemented with lesser mortality rate, the economic recovery was much better. The inference came out from this that we have to chalk out a long term strategy. The Government's priority was to save lives first and then to take care of the GDP. The Prime Minister said it correctly, '*Jaan Hai to Jahan Hai*'. After people followed his words and the nation was recovering fast, the slogan of '*Jaan*

New India Samachar | 27

2020-21ರ ಮೂರನೇ ತ್ರೈಮಾಸಿಕದಲ್ಲಿ ಭಾರತದ ಆರ್ಥಿಕತೆಯು ಶೇಕಡಾ 0.4 ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಕೊರೊನಾ ವೈರಸ್ ಸಾಂಕ್ರಾಮಿಕ ಮತ್ತು ವೈರಸ್ ತಡೆಗಟ್ಟಲು ರಾಷ್ಟ್ರವ್ಯಾಪಿ ಲಾಕ್‌ಡೌನ್ ಹಿನ್ನೆಲೆ ಆರ್ಥಿಕತೆಯು ಮೊದಲ ತ್ರೈಮಾಸಿಕದಲ್ಲಿ ಶೇಕಡಾ 23.9 ರಷ್ಟು ಕುಸಿತ ಕಂಡಿತ್ತು. ಎರಡನೇ ಅಥವಾ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಶೇಕಡಾ 7.5 ರಷ್ಟು ಸಂಕುಚಿತಗೊಂಡಿತ್ತು. ಒಟ್ಟು ದೇಶೀಯ ಉತ್ಪನ್ನವು (ಜಿಡಿಪಿ) ಸತತ ಎರಡು ತ್ರೈಮಾಸಿಕಗಳಲ್ಲಿ ಕುಸಿತ ಕಂಡರೆ ಅದನ್ನು ಆರ್ಥಿಕ ಹಿಂಜರಿತ ಎಂದು ಕರೆಯಲಾಗುತ್ತದೆ. ಮುಖ್ಯ ಆರ್ಥಿಕ ಸಲಹೆಗಾರ ಕೆ ವಿ ಸುಬ್ರಮಣಿಯನ್ ಅವರು ನ್ಯೂ ಇಂಡಿಯಾ ಸಮಾಚಾರ್ (ಡಿಸೆಂಬರ್ 16-31 ಸಂಚಿಕೆ) ಗೆ ನೀಡಿದ ಸಂದರ್ಶನದಲ್ಲಿ, ಮೂರನೇ ತ್ರೈಮಾಸಿಕದಲ್ಲಿ ಆರ್ಥಿಕತೆಯು ಸಕಾರಾತ್ಮಕ ಚೇತರಿಕೆ ಪಡೆಯಲಿದೆ ಎಂದು ಹೇಳಿದ್ದರು. ಮೂರನೇ ತ್ರೈಮಾಸಿಕದ ಅಂಕಿ ಅಂಶದ ಪ್ರಕಾರ, ಜಿಡಿಪಿ ಶೇಕಡಾ 0.4 ರಷ್ಟು ಬೆಳವಣಿಗೆಯನ್ನು ತೋರಿಸಿದೆ. ಕೃಷಿಯಲ್ಲಿ ಶೇಕಡಾ 3.9, ಉತ್ಪಾದನೆಯಲ್ಲಿ ಶೇಕಡಾ 1.6 ಮತ್ತು ನಿರ್ಮಾಣ ಕ್ಷೇತ್ರದಲ್ಲಿ ಶೇಕಡಾ 6.2 ರಷ್ಟು ಹೆಚ್ಚಳವಾಗಿದೆ ಎಂದು ಅಂಕಿಅಂಶ ಹೇಳಿದೆ.

## ಇಎಸ್‌ಐಸಿ ಪಟ್ಟಿಯಲ್ಲಿರುವ ಹತ್ತಿರದ ಯಾವುದೇ ಆಸ್ಪತ್ರೆಯಲ್ಲಿ ಫಲಾನುಭವಿಗಳಿಗೆ ವೈದ್ಯಕೀಯ ಸೌಲಭ್ಯ

ಇಎಸ್‌ಐಸಿ ಫಲಾನುಭವಿಗಳಿಗೆ ಉತ್ತಮ ವೈದ್ಯಕೀಯ ಸೇವೆಗಳನ್ನು ಒದಗಿಸಲು ಸರ್ಕಾರ ನಿರಂತರವಾಗಿ ಪ್ರಯತ್ನಿಸುತ್ತಿದೆ. ಈಗ, ಫಲಾನುಭವಿಗಳು ತಮ್ಮ ನಿವಾಸದಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಇಎಸ್‌ಐಸಿ ಆಸ್ಪತ್ರೆ ಅಥವಾ ಚಿಕಿತ್ಸಾಲಯ ಇಲ್ಲದಿದ್ದಲ್ಲಿ, ಹತ್ತಿರದ ಯಾವುದೇ ಇಎಸ್‌ಐಸಿ ಪಟ್ಟಿಯಲ್ಲಿರುವ ಆಸ್ಪತ್ರೆಯಿಂದ ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು. ಹೊಸ ಪ್ರದೇಶಗಳಲ್ಲಿ ಇಎಸ್‌ಐಸಿ ಯೋಜನೆಯ ವಿಸ್ತರಣೆಯ ನಂತರ ಹೆಚ್ಚುತ್ತಿರುವ ಇಎಸ್‌ಐಸಿ ಫಲಾನುಭವಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ. ವೈದ್ಯಕೀಯ ಸೇವೆಗಳನ್ನು ಪಡೆಯಲು, ಫಲಾನುಭವಿಗಳಿಗೆ ಇಎಸ್‌ಐಸಿ ಚಿಕಿತ್ಸಾಲಯದಿಂದ ಯಾವುದೇ ಉಲ್ಲೇಖದ ಅಗತ್ಯವಿರುವುದಿಲ್ಲ. ಅವರು ತಮ್ಮ ಹತ್ತಿರದ ಪಟ್ಟಿಯಲ್ಲಿರುವ ಆಸ್ಪತ್ರೆಗೆ ಇಎಸ್ಐ ಇ-ಪೆಹ್ಚಾನ್ ಕಾರ್ಡ್ / ಹೆಲ್ತ್ ಪಾಸ್‌ಬುಕ್ ಜೊತೆಗೆ ಸರ್ಕಾರ ನೀಡುವ ಯಾವುದೇ ಗುರುತಿನ ಚೀಟಿಯೊಂದಿಗೆ ಭೇಟಿ ನೀಡಬಹುದು. ಅವರು ಹೊರರೋಗಿ ಸೇವೆಗಳಲ್ಲಿ ಹಣರಹಿತ ವೈದ್ಯಕೀಯ ಸಮಾಲೋಚನೆ ಸೇವೆಯನ್ನು ಪಡೆಯಬಹುದು.




## ಭಾರತದ ಮೊದಲ ವನ್ಯಜೀವಿ ಸಂರಕ್ಷಣಾ ಕಾರಿಡಾರ್ ಹೆದ್ದಾರಿ



ಭಾರತವು ಮೊದಲ ಎತ್ತರಿಸಿದ ವನ್ಯಜೀವಿ ಸಂರಕ್ಷಣಾ ಕಾರಿಡಾರ್ ಹೆದ್ದಾರಿ ಹೊಂದಲಿದೆ. ದೆಹಲಿ-ಸಹರಾನ್‌ಪುರ ಡೆಹ್ರಾಡೂನ್ ಆರ್ಥಿಕ ಕಾರಿಡಾರ್, ವನ್ಯಜೀವಿಗಳ ರಕ್ಷಣೆಗಾಗಿ 12 ಕಿ.ಮೀ ಉದ್ದದ ಎತ್ತರಿಸಿದ ಕಾರಿಡಾರ್ ಹೊಂದಿರುವ ದೇಶದ ಮೊದಲ ಹೆದ್ದಾರಿಯಾಗಲಿದೆ. 13,000 ಕೋಟಿ ರೂ.ಗಳ ಹೆದ್ದಾರಿ ಯೋಜನೆಯು ದೆಹಲಿ ಮತ್ತು ಡೆಹ್ರಾಡೂನ್ ನಡುವಿನ ಅಂತರವನ್ನು 235 ಕಿ.ಮೀ.ನಿಂದ 210 ಕಿ.ಮೀ.ಗೆ ಮತ್ತು ಪ್ರಯಾಣದ ಸಮಯವನ್ನು 6.5 ಗಂಟೆಯಿಂದ 2.5 ಗಂಟೆಗೆ ಕಡಿಮೆ ಮಾಡುತ್ತದೆ. ಸಂಪೂರ್ಣ ಕಾರಿಡಾರ್ ಅನ್ನು ಕನಿಷ್ಠ 100 ಕಿ.ಮೀ ವೇಗದಲ್ಲಿ ವಾಹನ ಚಾಲನೆಗೆ ವಿನ್ಯಾಸಗೊಳಿಸಲಾಗಿದೆ. ಪ್ರತಿ 25-30 ಕಿ.ಮೀ ನಂತರವೂ ಇದು ಮಾರ್ಗಮಧ್ಯದ ಸೌಲಭ್ಯಗಳನ್ನು ಹೊಂದಿರುತ್ತದೆ. ಅನುಷ್ಠಾನವನ್ನು ಸುಲಭವಾಗಿಸಲು ಹೆದ್ದಾರಿಯ ಸಂಪೂರ್ಣ ಉದ್ದವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಇದು ಭಾಗ್‌ಪತ್, ಸಹರಾನ್‌ಪುರ ಮುಂತಾದ ನಗರಗಳ ಮೂಲಕ ಹಾದುಹೋಗುತ್ತದೆ. ಹೆದ್ದಾರಿಯ 4 ನೇ ಹಂತವು ಕಾಯ್ದಿರಿಸಿದ ಅರಣ್ಯದ ಮೂಲಕ ಹಾದುಹೋಗುತ್ತದೆ. ಆದ್ದರಿಂದ ಇಲ್ಲಿ ಎತ್ತರಿಸಿದ ವನ್ಯಜೀವಿ ಕಾರಿಡಾರ್ ಇರುತ್ತದೆ. ಯೋಜನೆಯ ಕಾಮಗಾರಿಗೆ ಮಾರ್ಚ್ 2021 ರೊಳಗೆ ಅನುಮೋದನೆ ನೀಡುವ ಗುರಿ ಇದೆ. ■

# ಶಹನಾಯಿ ಮಾಂತ್ರಿಕ

# ಉಸ್ತಾದ್ ಬಿಸ್ಮಿಲ್ಲಾ ಖಾನ್

**ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ತಮ್ಮ ಶಹನಾಯಿಯಿಂದ ಮೋಡಿಮಾಡುವ ಮಧುರ ಗೀತೆಗಳನ್ನು ನುಡಿಸುವ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುತ್ತಿದ್ದರು. ತಮ್ಮ ವಾದ್ಯದ ಮೇಲೆ ಅವರಿಗಿದ್ದ ಪ್ರೀತಿಯಿಂದಾಗಿ ಅದನ್ನು ಅವರು ಪ್ರೀತಿಯಿಂದ ತಮ್ಮ 'ಬೇಗಂ' (ಹೆಂಡತಿ) ಎಂದು ಕರೆಯುತ್ತಿದ್ದರು. ಇಂದಿಗೂ, ಶಹನಾಯಿ ಬಿಸ್ಮಿಲ್ಲಾ ಖಾನ್ ಅವರಿಗೆ ಸಮಾನಾರ್ಥಕವಾಗಿದೆ.**

**ಜನನ: ಮಾರ್ಚ್ 21, 1916 ನಿಧನ: ಆಗಸ್ಟ್ 21, 2006**



ಶಹನಾಯಿ ಅಥವಾ ಅದರ ಧ್ವನಿ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರನ್ನು ನೆನಪಿಸುತ್ತದೆ. ಶಹನಾಯಿ ಎಂಬ ಗಾಳಿ ಸಂಗೀತ ವಾದ್ಯವನ್ನು ಜನಪ್ರಿಯಗೊಳಿಸಿದ ವ್ಯಕ್ತಿ ಇವರು. ಅವರು ಭಾರತೀಯ ಶಾಸ್ತ್ರೀಯ ಸಂಗೀತದ ಮುಖ್ಯವಾಹಿನಿಗೆ ಈ ವಾದ್ಯವನ್ನು ತಂದರು. ಅವರಿಗಿಂತ ಮೊದಲು, ಈ ವಾದ್ಯವನ್ನು ಹೆಚ್ಚಾಗಿ ಸಮಾರಂಭಗಳಲ್ಲಿ ಮಾತ್ರ ನುಡಿಸಲಾಗುತ್ತಿತ್ತು. ಅವರು ಶಹನಾಯಿಯನ್ನು ಜಾಗತಿಕ ಪ್ರೇಕ್ಷಕರ ಬಳಿಗೆ ಕೊಂಡೊಯ್ದರು. ಪ್ರಪಂಚದಾದ್ಯಂತ ಅನುಯಾಯಿಗಳನ್ನು ಹೊಂದಿದ್ದರೂ, ಅವರು ಬನಾರಸ್ (ಈಗ ವಾರಾಣಸಿ) ನಲ್ಲೇ ಉಳಿಯಲು ಇಷ್ಟಪಟ್ಟರು. ಬಿಹಾರದ ಡುಮರಾವ್‌ನಲ್ಲಿ ಆಸ್ಥಾನ ಸಂಗೀತಗಾರರ ಕುಟುಂಬದಲ್ಲಿ ಅಮರೂದ್ದೀನ್ ಖಾನ್ ಆಗಿ ಅವರು ಜನಿಸಿದರು. ಪೈಗಂಬರ್ ಖಾನ್ ಮತ್ತು ಮಿತ್ತನ್ ಅವರ ಎರಡನೆಯ ಮಗ ಇವರು. ತಂದೆ ಡುಮರಾವ್‌ನ ಮಹಾರಾಜ ಕೇಶವ ಪ್ರಸಾದ್ ಸಿಂಗ್ ಅವರ ಆಸ್ಥಾನದಲ್ಲಿ ಸಂಗೀತಗಾರರಾಗಿದ್ದರು. ಖಾನ್ ಆರು ವರ್ಷದವರಾಗಿದ್ದಾಗ, ಉತ್ತರ ಪ್ರದೇಶದ ವಾರಣಾಸಿಗೆ ತೆರಳಿದರು, ಅಲ್ಲಿ ಅವರ ಮಾವ ಅಲಿ ಬಕ್ಷ್ ವಿಶ್ವನಾಥ ದೇವಸ್ಥಾನದಲ್ಲಿ ಅಧಿಕೃತ ಶಹನಾಯಿ ವಾದಕರಾಗಿದ್ದರು. ಖಾನ್‌ಗೆ ಶಹನಾಯಿ ಮೇಲಿರುವ ಪ್ರೀತಿಯನ್ನು ಗಮನಿಸಿದ ಬಕ್ಷ್ ಅವರನ್ನು ತಮ್ಮ ಶಿಕ್ಷಣದ ಗರಡಿಯಲ್ಲಿ ಪಳಗಿಸಿದರು.

ಖಾನ್ ಶ್ರದ್ಧೆಯಿಂದ ಅಭ್ಯಾಸ ಮಾಡಿ, ಅಲ್ಪಾವಧಿಯಲ್ಲಿಯೇ ಪಾಂಡಿತ್ಯವನ್ನು ಗಳಿಸಿದರು. ಈ ಹಿಂದೆ ಶಹನಾಯಿಯಲ್ಲಿ ಸಾಧ್ಯವಾಗದ ಎಂದು ಪರಿಗಣಿಸಲಾಗಿದ್ದ 'ರಾಗಗಳನ್ನು' ಅವರು ನಿರಂತರವಾಗಿ ಸುಧಾರಿಸಿದರು ಮತ್ತು ಆವಿಷ್ಕರಿಸಿದರು.

ಖಾನ್ ಅವರು ತಮ್ಮ ಜೀವಮಾನದುದ್ದಕ್ಕೂ ವಾರಾಣಾಸಿಯಲ್ಲಿಯೇ ನೆಲೆಸಿದ್ದು ಅವರಿಗೆ ಈ ನಗರದ ಮೇಲಿದ್ದ ಪ್ರೀತಿಯನ್ನು ಸ್ಪಷ್ಟವಾಗಿ ಹೇಳುತ್ತದೆ. ಕಾಶಿಯಂತಹ ಬೇರೊಂದು ನಗರವಿಲ್ಲ ಎಂದು ಅವರು ಹೇಳುತ್ತಿದ್ದರು. ಇದು ಅವರಿಗೆ ಎಲ್ಲವನ್ನೂ ನೀಡಿತು - ಸ್ನಾನ ಮಾಡಲು ಗಂಗಾ ನದಿ, ನಮಾಜ್ ನೀಡಲು ಮಸೀದಿ ಮತ್ತು ಅಭ್ಯಾಸಕ್ಕಾಗಿ ಬಾಲಾಜಿ ದೇವಸ್ಥಾನ. ಕೋಮು ಸೌಹಾರ್ದ ಅಥವಾ ವಾರಾಣಸಿಯಲ್ಲಿ ಪ್ರಸಿದ್ಧವಾಗಿರುವ 'ಗಂಗಾ ಜಮುನಿ ತೆಹ್ಜೀಬ್' ಗೆ ಶಹನಾಯಿ ಮಾಂತ್ರಿಕರು ಅತ್ಯುತ್ತಮ ಉದಾಹರಣೆಯಾದರು. ಅವರು ತಮ್ಮ ಎಲ್ಲಾ ಸಾಧನೆಗಳನ್ನು ಅಲ್ಲಾಹ್, ಸರಸ್ವತಿ ದೇವಿ ಮತ್ತು ವಿಶ್ವನಾಥನಿಗೆ ಒಟ್ಟಾಗಿ ಸಮರ್ಪಿಸಿದ್ದಾರೆ.

ಹಲವಾರು ಸಂದರ್ಭಗಳಲ್ಲಿ ಅವರಿಗೆ ದೊಡ್ಡ ಮೊತ್ತದ ಹಣ ಮತ್ತು ವಿದೇಶದಲ್ಲಿ ನೆಲೆಸುವ ಅವಕಾಶಗಳು ಬಂದವು. ಆದರೆ ಅವೆಲ್ಲವನ್ನೂ ತಿರಸ್ಕರಿಸಿದ ಅವರು ವಾರಾಣಸಿ ತಮ್ಮ ಮನೆ ಎಂದು ಹೇಳಿದರು. ಒಮ್ಮೆ ವಾರಾಣಸಿಯಂತಹುದೇ ತದ್ರೂಪು ನಗರವನ್ನು ನಿರ್ಮಿಸುವ ಭರವಸೆಯನ್ನೂ ನೀಡಲಾಯಿತು. ಅದಕ್ಕೆ ಅವರು: "ಒಂದು ಚಿತ್ರವು ಎಂದಿಗೂ ವಾಸ್ತವವಾಗಲಾರದು. ಗಂಗೆಯು ಹರಿಯುವ ಸ್ಥಳ ವಾರಾಣಸಿ, ಅಲ್ಲಿ ನಾನು ಭಗವಾನ್ ಬಾಲಾಜಿಗೆ ಶಹನಾಯಿ ನುಡಿಸಬಹುದು. ಇದು ನನ್ನ ಮನೆ. ನಾನು ನನ್ನ ಮನೆಯಲ್ಲಿರುತ್ತೇನೆ, ಅದು ಭಾರತವಲ್ಲದೇ ಬೇರೆಲ್ಲೂ ಅಲ್ಲ." ಎಂದು ಹೇಳಿದ್ದರು.

1937 ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ನೀಡಿದ ಸಂಗೀತ ಕಚೇರಿ ಅವರ ವೃತ್ತಿಜೀವನದ ಮಹತ್ವದ ತಿರುವಾಯಿತು. ಅದರ ನಂತರ ಅವರು ಹಿಂತಿರುಗಿ ನೋಡಲಿಲ್ಲ. 1947ರಲ್ಲಿ ಭಾರತದ ಸ್ವಾತಂತ್ರ್ಯದ ಮುನ್ನಾದಿನದಂದು ಕೆಂಪು ಕೋಟೆಯಲ್ಲಿ ಶಹನಾಯಿ ನುಡಿಸುವ ಅಪರೂಪದ ಗೌರವವನ್ನು ಖಾನ್ ಪಡೆದರು.

ಅವರು 2006ರಲ್ಲಿ ನಿಧನರಾದಾಗ, ಅವರು ಬಳಸುತ್ತಿದ್ದ ಶಹನಾಯಿಯನ್ನೂ ಸಹ ಅವರೊಂದಿಗೆ ಸಮಾಧಿ ಮಾಡಲಾಯಿತು. ಅವರು ಭಾರತದ ಎಲ್ಲ ಅಗ್ರ ನಾಲ್ಕು ನಾಗರಿಕ ಪ್ರಶಸ್ತಿಗಳನ್ನು- ಪದ್ಮಶ್ರೀ (1961), ಪದ್ಮಭೂಷಣ (1968), ಪದ್ಮವಿಭೂಷಣ (1980) ಮತ್ತು ಭಾರತ ರತ್ನ (2001). ಪಡೆದರು. ■

ಅಂತರರಾಷ್ಟ್ರೀಯ ಸಂತಸದ ದಿನ
ಮಾರ್ಚ್ 20, 2021

# ಕೋಟ್ಯಂತರ ನಗು ಮೊಗಗಳಿಗಾಗಿ!

ವಿಷಯ:
ಪ್ರಶಾಂತವಾಗಿರಿ
ವಿವೇಕವಂತರಾಗಿರಿ
ದಯಾಳುವಾಗಿರಿ

ನಿಮ್ಮ ಮುಖದ ಮೇಲಿನ ಮಂದಹಾಸವೊಂದು ಜೀವನವನ್ನು ಸುಲಭಗೊಳಿಸಬಹುದು ಮತ್ತು ಇದು ಯಾವುದೇ ಅಡೆತಡೆಗಳನ್ನು ದಾಟಲು ಸಹಾಯ ಮಾಡುತ್ತದೆ. ಅಂತರರಾಷ್ಟ್ರೀಯ ಸಂತಸದ ದಿನವು ಆ ಸತ್ಯವನ್ನು ಗುರುತಿಸುತ್ತದೆ. ಸಂತೋಷವನ್ನು ಆಚರಿಸಲು ಕೇವಲ ಒಂದು ದಿನವು ಸಾಕಾಗುವುದಿಲ್ಲ ಏಕೆಂದರೆ ಪ್ರತಿಯೊಬ್ಬರೂ ಜೀವನದ ಪ್ರತಿ ಕ್ಷಣವನ್ನು ಆನಂದಿಸಬಹುದು ಮತ್ತು ಸಂತೋಷಪಡಬಹುದು. ಈ ದಿನವು ನಿರಂತರ ಅಭಿವೃದ್ಧಿ, ಬಡತನ ನಿವಾರಣೆ, ಸಂತೋಷ ಮತ್ತು ಎಲ್ಲರಿಗೂ ಒಳ್ಳೆಯದನ್ನು ಖಚಿತಪಡಿಸಿಕೊಳ್ಳಲು ಎಲ್ಲರನ್ನೂ ಒಳಗೊಂಡ, ಸಮತೆ ಮತ್ತು ಸಮತೋಲಿತ ಆರ್ಥಿಕ ಬೆಳವಣಿಗೆಯ ಮಹತ್ವವನ್ನು ಒತ್ತಿಹೇಳುತ್ತದೆ.

## ಜಲ ಜೀವನ್ ಮಿಷನ್

ಜಲ ಜೀವನ್ ಮಿಷನ್ ಅಡಿಯಲ್ಲಿ ಕೇವಲ 17 ತಿಂಗಳಲ್ಲಿ ನಲ್ಲಿ ನೀರು 3.53 ಕೋಟಿ ಗ್ರಾಮೀಣ ಕುಟುಂಬಗಳನ್ನು ತಲುಪಿದೆ

## ಪಿಎಂ ಉಜ್ವಲ

ಹೊಗೆ ಮುಕ್ತ ಅಡುಗೆಮನೆಗಾಗಿ 8.3 ಕೋಟಿ ಮಹಿಳೆಯರಿಗೆ ಉಚಿತ ಅನಿಲ ಸಂಪರ್ಕ

## ಪಿಎಂ ಜೀವನಜ್ಯೋತಿ ವಿಮಾ ಯೋಜನೆ

ಕೈಗೆಟುಕುವ ಮತ್ತು ನವೀಕರಿಸಬಹುದಾದ 2 ಲಕ್ಷ ರೂ. ಜೀವ ವಿಮಾ ರಕ್ಷಣೆ ವಾರ್ಷಿಕವಾಗಿ ಕೇವಲ 330 ರೂ. ನಲ್ಲಿ. ಇದುವರೆಗೆ 9.88 ಕೋಟಿ ಜನರನ್ನು ನೋಂದಾಯಿಸಲಾಗಿದೆ



## ಜನೌಷಧಿ

700 ಜಿಲ್ಲೆಗಳ 6,600 ಪಿಎಂ ಜನೌಷಧಿ ಕೇಂದ್ರಗಳಲ್ಲಿ ದೊರೆಯುವ ಕೈಗೆಟುಕುವ ಮತ್ತು ಗುಣಮಟ್ಟದ ಔಷಧಿಗಳು ಬಡವರ ಜೀವನವನ್ನು ಬದಲಾಯಿಸುತ್ತಿವೆ

## ಉಜಾಲಾ

ಇಂಧನ ಉಳಿತಾಯ ಮತ್ತು ಪರಿಸರ ರಕ್ಷಣೆ. 36.71 ಕೋಟಿ ಎಲ್‌ಇಡಿ ದೀಪಗಳ ವಿತರಿಸಲಾಗಿದ್ದು, ಇದರಿಂದ ವಾರ್ಷಿಕವಾಗಿ 18,000 ಕೋಟಿ ರೂ. ಉಳಿತಾಯ

## ಆಯುಷ್ಮಾನ್ ಭಾರತ

ಆರೋಗ್ಯಕರ ಜೀವನವನ್ನು ನಡೆಸಲು 50 ಕೋಟಿ ಜನರಿಗೆ 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುವುದು. ಇದುವರೆಗೆ 1.63 ಕೋಟಿಗೂ ಹೆಚ್ಚು ಜನರು ಇದರ ಲಾಭವನ್ನು ಪಡೆದುಕೊಂಡಿದ್ದಾರೆ

## ಪಿಎಂ ಆವಾಸ್

ಮನೆ ಹೊಂದುವ ಕನಸು ಈಗ ಈಡೇರಿದೆ. ಇದುವರೆಗೆ 1.68 ಕೋಟಿ ಜನರು ಪಿಎಂ ಆವಾಸ್ ಯೋಜನೆಯಡಿ ಸ್ವಂತ ಮನೆ ಪಡೆದಿದ್ದಾರೆ

## ಪಿಎಂ ಕಿಸಾನ್

ಪಿಎಂ ಕಿಸಾನ್ ಸಮ್ಮಾನ್ ನಿಧಿಯಿಂದ 11.64 ಕೋಟಿ ಕುಟುಂಬಗಳಿಗೆ ಲಾಭ. ಇದುವರೆಗೆ, 1.13 ಲಕ್ಷ ಕೋಟಿ ರೂ.ಗಳನ್ನು ರೈತರಿಗೆ ವರ್ಗಾಯಿಸಲಾಗಿದೆ

## ಉಡಾನ್

ಕೇವಲ 2,500 ರೂ. ಗಳನ್ನು ಖರ್ಚು ಮಾಡುವ ಮೂಲಕ 53 ಲಕ್ಷಕ್ಕೂ ಹೆಚ್ಚು ಜನರು ವಿಮಾನದಲ್ಲಿ ಪ್ರಯಾಣಿಸುವುದರೊಂದಿಗೆ ಕೈಗೆಟುಕುವ ವಿಮಾನ ಪ್ರಯಾಣವು ನನಸಾಗಿದೆ

## ಪಿಎಂ ಸ್ವನಿಧಿ

ಕೊರೊನಾ ಅವಧಿಯಲ್ಲಿ ಪರಿಹಾರವನ್ನು ಒದಗಿಸಲು 2.76 ಕೋಟಿ ಬೀದಿ ಬದಿ ವ್ಯಾಪಾರಿಗಳಿಗೆ ಇದುವರೆಗೆ 2.071 ಕೋಟಿ ರೂ.ಗಳ ಸಾಲ ನೀಡಲಾಗಿದೆ



# ಸಾಮಾಜಿಕ ಮಾಧ್ಯಮ ನಿಯಂತ್ರಣಕ್ಕೆ ಹೊಸ ನಿಯಮಗಳು, ವಿಷಯಗಳಿಗೆ ಒಟಿಟಿ ಹೊಣೆಗಾರಿಕೆ



**ಡಿಜಿಟಲ್ ಇಂಡಿಯಾ ಕಾರ್ಯಕ್ರಮವು ಜನಸಾಮಾನ್ಯರನ್ನು ಸಬಲೀಕರಣಗೊಳಿಸಿದೆ. ಮೊಬೈಲ್ ಫೋನ್‌ಗಳು ಮತ್ತು ಇಂಟರ್‌ನೆಟ್‌ಗಳ ವ್ಯಾಪಕತೆಯಿಂದಾಗಿ ಅನೇಕ ಸಾಮಾಜಿಕ ಮಾಧ್ಯಮ ವೇದಿಕೆಗಳು ಭಾರತದಲ್ಲಿ ತಮ್ಮ ವ್ಯವಹಾರ ವಿಸ್ತರಿಸಲು ಸಹಕಾರಿಯಾಗಿದೆ. ಆದಾಗ್ಯೂ, ಸಾಮಾಜಿಕ ಜಾಲತಾಣಗಳು, ಸುದ್ದಿ ಪೋರ್ಟಲ್ ಮತ್ತು ಓವರ್-ದಿ-ಟಾಪ್ (ಒಟಿಟಿ) ಪ್ಲಾಟ್‌ಫಾರ್ಮ್‌ಗಳನ್ನು ಕ್ರಮಬದ್ಧಗೊಳಿಸಬೇಕೆಂಬ ಬೇಡಿಕೆ ಇತ್ತು. ಈ ಬೇಡಿಕೆಗಳಿಗೆ ಅನುಗುಣವಾಗಿ ಸರ್ಕಾರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.**

ಭಾರತದಲ್ಲಿ ವಿವಿಧ ಸಾಮಾಜಿಕ ಮಾಧ್ಯಮ ವೇದಿಕೆಗಳು ಲಭ್ಯವಿವೆ ಮತ್ತು ಇವುಗಳನ್ನು ದೇಶದ ಜನರು ಬಳಸುತ್ತಿದ್ದಾರೆ. ಇವುಗಳು ಈಗ ಜನಸಾಮಾನ್ಯನ ಜೀವನದ ಒಂದು ಮಹತ್ವದ ಭಾಗವಾಗಿವೆ. ಭಾರತದಲ್ಲಿ ಸಾಮಾಜಿಕ ಜಾಲತಾಣಗಳ ವಿಸ್ತರಣೆಯು ಜನರು ತಮ್ಮ ಸೃಜನಶೀಲತೆಯನ್ನು ತೋರಿಸಲು, ಪ್ರಶ್ನೆಗಳನ್ನು ಕೇಳಲು, ಮಾಹಿತಿ ಪಡೆಯಲು ಮತ್ತು ಸರ್ಕಾರ ಮತ್ತು ಅದನ್ನು ನಡೆಸುವವರ ಬಗೆಗಿನ ಟೀಕೆಗಳನ್ನು ಒಳಗೊಂಡಂತೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅನುವು ಮಾಡಿಕೊಟ್ಟಿದೆ. ಪ್ರತಿಯೊಬ್ಬ ಭಾರತೀಯನ ಟೀಕಿಸುವ ಮತ್ತು ಅಸಮ್ಮತಿಯ ಹಕ್ಕನ್ನು ಸರ್ಕಾರ ಒಪ್ಪುತ್ತದೆ ಮತ್ತು ಗೌರವಿಸುತ್ತದೆ. ಆದಾಗ್ಯೂ, ಡಿಜಿಟಲ್ ಮಾಧ್ಯಮಕ್ಕೆ ಸಂಬಂಧಿಸಿದ ಬಳಕೆದಾರರ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಹಕ್ಕುಗಳ ಕೊರತೆಯ ಬಗ್ಗೆ ಆತಂಕಗಳು ಹೆಚ್ಚಾಗುತ್ತಿದ್ದವು. ಸಾಮಾಜಿಕ ಜಾಲತಾಣದ ಪ್ರಸರಣವು ಒಂದು ಕಡೆ ನಾಗರಿಕರನ್ನು ಸಬಲೀಕರಣಗೊಳಿಸಿದರೆ, ಮತ್ತೊಂದೆಡೆ ಕೆಲವು ಗಂಭೀರ ಕಳವಳ ಮತ್ತು ಪರಿಣಾಮಗಳಿಗೆ ಕಾರಣವಾಗುತ್ತದೆ, ಇದು

**53** ಕೋಟಿ ಭಾರತದಲ್ಲಿ ವಾಟ್ಸ್ ಆಪ್ ಬಳಕೆದಾರರು

**1.75** ಕೋಟಿ ಭಾರತದಲ್ಲಿ ಟ್ವಿಟ್ಟರ್ ಬಳಕೆದಾರರು

**44.8** ಕೋಟಿ ಭಾರತದಲ್ಲಿ ಯೂಟ್ಯೂಬ್ ಬಳಕೆದಾರರು

**41** ಕೋಟಿ ಭಾರತದಲ್ಲಿ ಫೇಸ್ ಬುಕ್ ಬಳಕೆದಾರರು

**21** ಕೋಟಿ ಭಾರತದಲ್ಲಿ ಇನ್ಸ್ಟಾಗ್ರಾಂ ಬಳಕೆದಾರರು

## ಸಾಮಾಜಿಕ ಜಾಲತಾಣಗಳಿಗೆ ಹೊಸ ಮಾರ್ಗಸೂಚಿಗಳು:

- ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳು, 2021 ಸರ್ಕಾರದಿಂದ ಅಧಿಸೂಚನೆ
- ಹೊಸ ನಿಯಮಗಳು ಸಾಮಾಜಿಕ ಜಾಲತಾಣಗಳ ಸಾಮಾನ್ಯ ಬಳಕೆದಾರರನ್ನು ಸಶಕ್ತಗೊಳಿಸುತ್ತವೆ.
- ಪ್ಲಾಟ್‌ಫಾರ್ಮ್‌ಗಳು ಸಂತ್ರಸ್ತರಿಂದ ದೂರುಗಳನ್ನು ಸ್ವೀಕರಿಸಲು ಮತ್ತು ಪರಿಹರಿಸಲು ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಸ್ಥಾಪಿಸಬೇಕು.
- ಅಂತಹ ದೂರುಗಳನ್ನು ಪರಿಹರಿಸಲು ಪ್ಲಾಟ್‌ಫಾರ್ಮ್‌ಗಳು ಕುಂದುಕೊರತೆ ಅಧಿಕಾರಿಯನ್ನು ನೇಮಿಸಬೇಕು ಮತ್ತು ಆ ಅಧಿಕಾರಿಯ ಹೆಸರು ಮತ್ತು ಸಂಪರ್ಕ ವಿವರಗಳನ್ನು ಹಂಚಿಕೊಳ್ಳಬೇಕು.
- ಸ್ವೀಕರಿಸಿದ ದೂರುಗಳ ವಿವರಗಳು ಮತ್ತು ದೂರುಗಳ ಮೇಲೆ ಕೈಗೊಂಡ ಕ್ರಮಗಳು ಮತ್ತು ತೆಗೆದುಹಾಕಲಾದ ವಿಷಯಗಳ ವಿವರಗಳನ್ನು ತಿಳಿಸುವ ಮಾಸಿಕ ಪಾಲನಾ ವರದಿಯನ್ನು ಪ್ಲಾಟ್‌ಫಾರ್ಮ್‌ಗಳು ಪ್ರಕಟಿಸಬೇಕು.
- ಪ್ಲಾಟ್‌ಫಾರ್ಮ್‌ಗಳು ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಸಂಬಂಧಿಸಿದ ಅಪರಾಧಗಳು ಅಥವಾ ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಬಹುದಾದ ಅಪರಾಧಗಳ ಸಂದೇಶಗಳ ಮೂಲವನ್ನು ಕಂಡುಹಿಡಿಯಬೇಕು.
- ದೂರುಗಳನ್ನು ಸ್ವೀಕರಿಸಿದ 24 ಗಂಟೆಗಳ ಒಳಗೆ ಪ್ಲಾಟ್‌ಫಾರ್ಮ್ ಅಪಮಾನಕರ ವಿಷಯವನ್ನು ತೆಗೆದುಹಾಕಬೇಕು.

# ಡಿಜಿಟಲ್ ಮಾಧ್ಯಮ, ಒಟಿಟಿಗಳಿಗೆ ಹೊಸದೇನಿದೆ

- ಸರ್ಕಾರವು ಒಟಿಟಿ ಪ್ಲಾಟ್‌ಫಾರ್ಮ್‌ಗಳಿಗೂ ನಿಯಮಗಳನ್ನು ತರುತ್ತದೆ.
- ಇದುವರೆಗೆ, ಒಟಿಟಿ ಪ್ಲಾಟ್‌ಫಾರ್ಮ್‌ಗಳಿಗೆ ಯಾವುದೇ ನಿರ್ಬಂಧವಿಲ್ಲ.
- ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ್ ನಿಯಂತ್ರಣ ಕಾಯ್ದೆಯಡಿ ಕಾರ್ಯಕ್ರಮ ಸಂಹಿತೆ ಮತ್ತು ಭಾರತೀಯ ಪತ್ರಿಕಾ ಮಂಡಳಿಯ ಪತ್ರಿಕೋದ್ಯಮ ನಡವಳಿಕೆಯ ಮಾನದಂಡಗಳನ್ನು ಡಿಜಿಟಲ್ ಮಾಧ್ಯಮದ ಸುದ್ದಿ ಪ್ರಕಾಶಕರು ಗಮನಿಸಬೇಕಾಗುತ್ತದೆ.
- ಆನ್‌ಲೈನ್ ಸುದ್ದಿ, ಒಟಿಟಿ ಪ್ಲಾಟ್‌ಫಾರ್ಮ್‌ಗಳು ಮತ್ತು ಡಿಜಿಟಲ್ ಮಾಧ್ಯಮಕ್ಕಾಗಿ ನೀತಿ ಸಂಹಿತೆಯನ್ನು ಸೂಚಿಸಲಾಗಿದೆ.
- ಒಟಿಟಿ ಪ್ಲಾಟ್‌ಫಾರ್ಮ್‌ಗಳು ವಿಷಯವನ್ನು ವಯಸ್ಸಿಗನುಗುಣವಾಗಿ ಐದು ವಿಭಾಗಗಳಾಗಿ - ಯು (ಯುನಿವರ್ಸಲ್), ಯು / ಎ 7+, ಯು / ಎ 13+, ಯು / ಎ 16+ ಮತ್ತು ಎ (ವಯಸ್ಕರು) ಎಂದು ಸ್ವಯಂ-ವರ್ಗೀಕರಿಸಬೇಕಾಗುತ್ತದೆ. ಪ್ಲಾಟ್‌ಫಾರ್ಮ್‌ಗಳು ಯು / ಎ 13+ ಅಥವಾ ಅದಕ್ಕಿಂತ ಹೆಚ್ಚಿನ ವರ್ಗದ ವಿಷಯಗಳಿಗೆ ಪೋಷಕರ ಲಾಕ್ ವ್ಯವಸ್ಥೆಗಳನ್ನು ಕಾರ್ಯಗತಗೊಳಿಸಬೇಕಾಗುತ್ತದೆ.
- ಈ ಪ್ಲಾಟ್‌ಫಾರ್ಮ್‌ಗಳಿಗಾಗಿ ನಿಯಮಗಳ ಅಡಿಯಲ್ಲಿ, ವಿವಿಧ ಹಂತದ ಸ್ವಯಂ ನಿಯಂತ್ರಣದೊಂದಿಗೆ ಮೂರು ಹಂತದ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು.
- ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು ಅಥವಾ ಹೆಸರಾಂತ ಸ್ವತಂತ್ರ ವ್ಯಕ್ತಿ ನೇತೃತ್ವದಲ್ಲಿ ಪ್ರಕಾಶಕರ ಒಂದು ಅಥವಾ ಹೆಚ್ಚಿನ ಸ್ವಯಂ ನಿಯಂತ್ರಣ ಸಂಸ್ಥೆಗಳು ಇರಬಹುದು.
- ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸುತ್ತದೆ.

### ಹೊಸ ನಿಯಮಗಳನ್ನು ಹೇಗೆ ಮತ್ತು ಏಕೆ ರೂಪಿಸಲಾಯಿತು:

- ಕಂಟೆಂಟ್ ಹೋಸ್ಟಿಂಗ್ ಪ್ಲಾಟ್‌ಫಾರ್ಮ್‌ಗಳು ಮತ್ತು ಇತರ ಅಪ್ಲಿಕೇಶನ್‌ಗಳಲ್ಲಿ ಮಕ್ಕಳ ಅಶ್ಲೀಲ ಚಿತ್ರಗಳು, ಅತ್ಯಾಚಾರ ಮತ್ತು ಸಾಮೂಹಿಕ ಅತ್ಯಾಚಾರ ಚಿತ್ರಣಗಳು, ವೀಡಿಯೊಗಳನ್ನು ನಿರ್ಮೂಲನೆ ಮಾಡಲು ಸರ್ಕಾರವು ಅಗತ್ಯವಾದ ಮಾರ್ಗಸೂಚಿಗಳನ್ನು ರೂಪಿಸಬಹುದು ಎಂದು ಸುಪ್ರೀಂ ಕೋರ್ಟ್ 2018 ರಲ್ಲಿ ಸ್ವಯಂ ರಿಟ್ ಅರ್ಜಿಯೊಂದರಲ್ಲಿ ಅಭಿಪ್ರಾಯಪಟ್ಟಿತು.
- ಹೊಸ ನಿಯಮಗಳನ್ನು ಪ್ರಕಟಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಘಟನಾವಳಿಗಳನ್ನು ತಿಳಿಸುವಂತೆ 2019 ರಲ್ಲಿ ಸುಪ್ರೀಂ ಕೋರ್ಟ್ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ನಿರ್ದೇಶನ ನೀಡಿತು.
- 2020 ರಲ್ಲಿ, ರಾಜ್ಯಸಭೆಯ ತಾತ್ಕಾಲಿಕ ಸಮಿತಿಯು ಸಾಮಾಜಿಕ ಮಾಧ್ಯಮದಲ್ಲಿ ಅಶ್ಲೀಲತೆಯ ಆತಂಕಕಾರಿ ವಿಷಯ ಮತ್ತು ಒಟ್ಟಾರೆಯಾಗಿ ಮಕ್ಕಳು ಮತ್ತು ಸಮಾಜದ ಮೇಲೆ ಅದರ ಪರಿಣಾಮವನ್ನು ಅಧ್ಯಯನ ಮಾಡಿದ ನಂತರ ತನ್ನ ವರದಿಯನ್ನು ನೀಡಿತು ಮತ್ತು ಅಂತಹ ವಿಷಯಗಳ ಮೂಲವನ್ನು ಗುರುತಿಸಲು ಅನುವು ಮಾಡಿಕೊಡಲು ಶಿಫಾರಸ್ಸು ಮಾಡಿತು.



- ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಕರಡು ನಿಯಮಗಳನ್ನು ಸಿದ್ಧಪಡಿಸಿ, ಡಿಸೆಂಬರ್ 2018 ರಲ್ಲಿ ಸಾರ್ವಜನಿಕ ಅಭಿಪ್ರಾಯಗಳನ್ನು ಆಹ್ವಾನಿಸಿತು. ಇದು 171 ಅಭಿಪ್ರಾಯಗಳು ಮತ್ತು 80 ಪ್ರತಿ ಅಭಿಪ್ರಾಯಗಳನ್ನು ಸ್ವೀಕರಿಸಿತು. ಈ ಅಭಿಪ್ರಾಯಗಳನ್ನು ವಿವರವಾಗಿ ವಿಶ್ಲೇಷಿಸಲಾಯಿತು ಮತ್ತು ಅಂತರ ಸಚಿವಾಲಯ ಸಭೆಯ ನಂತರ ನಿಯಮಾವಳಿಯನ್ನು ಅಂತಿಮಗೊಳಿಸಲಾಯಿತು.

ಇತ್ತೀಚಿನ ವರ್ಷಗಳಲ್ಲಿ ಅನೇಕ ಪಟ್ಟು ಹೆಚ್ಚಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಸುದ್ದಿ ಮತ್ತು ಅಪಾಯಕಾರಿ ಬೆಳವಣಿಗೆಗಳು ವರದಿಯಾಗುತ್ತಿವೆ. ಕಳೆದ ಕೆಲವು ವರ್ಷಗಳಿಂದ ಸಾಮಾಜಿಕ ಮಾಧ್ಯಮಗಳ ಅತಿರೇಕದ ದುರುಪಯೋಗ, ತಿರುಚಿದ ಚಿತ್ರಗಳು ಮತ್ತು ವಿಷಯಗಳನ್ನು ಹಂಚಿಕೊಳ್ಳುವುದು ಹೆಚ್ಚಾಗಿದೆ. ಇವು ಕೇವಲ ವ್ಯಕ್ತಿಯ ಘನತೆಗೆ ಮಾತ್ರ ಬೆದರಿಕೆಯಾಗಿರದೆ, ಅನೈತಿಕವೂ ಆಗಿದ್ದವು. ನಿಂದನೀಯ ಭಾಷೆ, ಮಾನಹಾನಿಕರ ಮತ್ತು ಅಶ್ಲೀಲ ವಿಷಯಗಳ ಬಳಕೆ ಮತ್ತು ಧಾರ್ಮಿಕ ಭಾವನೆಗಳಿಗೆ ಅಗೌರವ ತೋರುವ ಘಟನೆಗಳೂ ಸಹ ಹೆಚ್ಚುತ್ತಿವೆ. ಈ ಕುರಿತು ಕಾಲಕಾಲಕ್ಕೆ ಸಂಸತ್ತು ಮತ್ತು ಅದರ ಸಮಿತಿಗಳು, ನ್ಯಾಯಾಂಗ ಆದೇಶಗಳು ಮತ್ತು ದೇಶದ ವಿವಿಧ ಭಾಗಗಳಲ್ಲಿ ನಾಗರಿಕ ಸಮಾಜದ ಚರ್ಚೆಗಳು ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಕಳವಳ ವ್ಯಕ್ತವಾಯಿತು.

ಫೆಬ್ರವರಿ 25, 2021 ರಂದು, ಫೇಸ್‌ಬುಕ್, ಟ್ವಿಟರ್ ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳು ಮತ್ತು ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್ ಮತ್ತು ಹಾಟ್‌ಸ್ಟಾರ್‌ಗಳಂತಹ ಒಟಿಟಿ ವೇದಿಕೆಗಳಿಗೆ ಸರ್ಕಾರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿತು. ಡಿಜಿಟಲ್ ಮೀಡಿಯಾ ಮತ್ತು ಒಟಿಟಿ ಕುರಿತ ನಿಯಮಗಳು ಆಂತರಿಕ ಮತ್ತು ಸ್ವಯಂ-ನಿಯಂತ್ರಣ ಕಾರ್ಯವಿಧಾನಗಳ ಮೇಲೆ ಹೆಚ್ಚು ಗಮನ ಹರಿಸುತ್ತವೆ, ಆ ಮೂಲಕ ಪತ್ರಿಕೋದ್ಯಮ ಮತ್ತು ಸೃಜನಶೀಲ ಸ್ವಾತಂತ್ರ್ಯವನ್ನು ಎತ್ತಿಹಿಡಿದು, ದೃಢವಾದ ದೂರು ಪರಿಹಾರ ವ್ಯವಸ್ಥೆಯನ್ನು ಒದಗಿಸಲಾಗಿದೆ. ಹೊಸ ನಿಯಮಗಳು ಸೃಜನಶೀಲತೆಯನ್ನು ನಿಗ್ರಹಿಸುವ ಬಗ್ಗೆ ಯಾವುದೇ ತಪ್ಪು ಗ್ರಹಿಕೆಯ ಜನರ ಕಳವಳಗಳನ್ನು ಪರಿಹರಿಸಲು ಪ್ರಯತ್ನಿಸುತ್ತವೆ. ■

## ಜಾಗತಿಕ ಮಾರುಕಟ್ಟೆಗಳಿಗೆ

# ಸ್ಥಳೀಯ ಆಟಿಕೆ

ಆಟಿಕೆಗಳು, ಏಕಕಾಲದಲ್ಲಿ, ಆಟವಾಡುವ ಮತ್ತು ಕಲಿಕೆಯ ಸಾಧನಗಳಾಗಿವೆ. ಅಚ್ಚಳಿಯದ ಛಾಪು ಮೂಡಿಸುವ, ಆಟಿಕೆಗಳು ಮಕ್ಕಳ ಮಾನಸಿಕ ಮತ್ತು ಅರಿವಿನ ಸಾಮರ್ಥ್ಯಗಳನ್ನು ಹೆಚ್ಚಿಸುತ್ತವೆ. ಸಂಪ್ರದಾಯ ಮತ್ತು ಸಂಸ್ಕೃತಿಯ ಬಗ್ಗೆ ಮಕ್ಕಳು ತಿಳಿಯಲು ಆಟಿಕೆಗಳು ನಿರ್ಣಾಯಕ ಮಾಧ್ಯಮವಾಗಿವೆ. ಆರ್ಥಿಕ ದೃಷ್ಟಿಯಿಂದ, ಆಟಿಕೆಗಳು ಉದ್ಯೋಗ ಸೃಷ್ಟಿಯ ಮೂಲವೂ ಆಗಿದೆ. ನವೀನ ಮತ್ತು ಆಧುನಿಕ ಆಟಿಕೆಗಳು ನೆಲೆಕಾಣುತ್ತಿರುವ ಈ ಸಮಯದಲ್ಲಿ, 7 ಲಕ್ಷ ಕೋಟಿ ರೂ. ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಕೊಡುಗೆ ಕೇವಲ ಪ್ರತಿಶತ 0.5ರಷ್ಟಿದೆ. ಆದ್ದರಿಂದ, ಆಟಿಕೆ ರಫ್ತನ್ನು 2024ರ ವೇಳೆಗೆ 2,800 ಕೋಟಿ ರೂ.ಗೆ ಹೆಚ್ಚಿಸಲು ಮತ್ತು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಭಾರತ ಈಗ ಸ್ವಾವಲಂಬಿ ಆಟಿಕೆ ಉದ್ಯಮಕ್ಕಾಗಿ ಅಂಗಳವನ್ನು ಅಣಿಗೊಳಿಸುತ್ತಿದೆ...











'ನಾನು ಆಟಿಕೆ ಮಾಡುವುದು ನನಗೆ ತುಂಬಾ ಇಷ್ಟ. ನಾನು ರಾಜಸ್ಥಾನ ಮತ್ತು ಕೋಲ್ಕತ್ತಾದಲ್ಲಿ ಆಟಿಕೆ ತಯಾರಿಸುವುದನ್ನು ಕಲಿತೆ. ನಮ್ಮ ಆಟಿಕೆಗಳು ತುಂಬಾ ಮೆಚ್ಚುಗೆ ಪಡೆದಿವೆ. ಸ್ಥಳೀಯವಾಗಿ ತಯಾರಿಸುವ ಆಟಿಕೆಗಳ ಬಗೆಗಿನ ಜನರ ಮನೋಭಾವ ತುಂಬಾ ಬದಲಾಗಿದೆ ಮತ್ತು ಈಗ ಅದಕ್ಕೆ ಉತ್ತಮ ಸ್ಪಂದನೆ ಸಿಗುತ್ತಿದೆ" ಎಂದು ಜಾರ್ಖಂಡ್‌ನ ರಾಂಚಿಯ ಶೋಭಾ ಕುಮಾರಿ ಹೇಳುತ್ತಾರೆ. ಅವರ ಆಸಕ್ತಿ ಇಂದು ಆದಾಯದ ಮೂಲವಾಗಿ ಮಾರ್ಪಟ್ಟಿದೆ. ಉತ್ತಮವಾಗಿ ನಡೆಯುತ್ತಿರುವುದನ್ನು ನೋಡಿ ಶೋಭಾ ತಮ್ಮ ಕೌಶಲ್ಯಗಳನ್ನು ಸಲೀನಾ ಕಚ್ಛಾಪ್, ಪ್ರತಿಭಾ ಟೋಪ್ ಮತ್ತು ಇತರರಿಗೆ ಕಲಿಸಿದರು. ಇಂದು ಆ ಗುಂಪು ತಮ್ಮ ಆಟಿಕೆಗಳನ್ನು ಅಮೆರಿಕ ಮತ್ತು ನೆದರ್‌ಲ್ಯಾಂಡ್ಸ್ ಗೆ ರಫ್ತು ಮಾಡುತ್ತಿದೆ ಮತ್ತು ಭಾರತೀಯ ಆಟಿಕೆಗಳಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿಸುತ್ತಿವೆ.





ದೇಶೀಯ ಮರದ ಆಟಿಕೆ ತಯಾರಕ ಸಿ.ವಿ. ರಾಜು ಆಂಧ್ರಪ್ರದೇಶದ ವಿಶಾಖಪಟ್ಟಣಂನ ಏಟಿಕೊಪ್ಪಾಕಾದವರು. ಏಟಿಕೊಪ್ಪಾಕಾದಲ್ಲಿ ಬಹು ಹಿಂದಿನಿಂದಲೂ ಅಂದರೆ ನೂರಾರು ವರ್ಷಗಳಿಂದ ಸಾಂಪ್ರದಾಯಿಕ ಆಟಿಕೆ ತಯಾರಿಸಲಾಗುತ್ತಿದೆ. ಒಂದು ಕಾಲದಲ್ಲಿ, ಏಟಿಕೊಪ್ಪಾಕಾ ಆಟಿಕೆಗಳು ವಿಶ್ವಾದ್ಯಂತ ಪ್ರಸಿದ್ಧವಾಗಿದ್ದವು. ಈ ಪ್ರಾಚೀನ ಮೆರುಗೆಣ್ಣೆ ಲೇಪಿತ ಕಾಷ್ಠ ಕಲೆಯ ಆಟಿಕೆಗಳ ವಿಶೇಷತೆಯೆಂದರೆ ಅವುಗಳನ್ನು ಮರದಿಂದ ಮಾಡಲಾಗುತ್ತದೆ ಮತ್ತು ಅವು ಹರಿತವಾದ ಅಂಚುಗಳನ್ನು ಹೊಂದಿರುವುದಿಲ್ಲ. ಅಂಚುಗಳು ದುಂಡಾಗಿದ್ದು, ಮಕ್ಕಳಿಗೆ ಗಾಯವಾಗುವ ಸಾಧ್ಯತೆ ಕಡಿಮೆ ಮಾಡುತ್ತದೆ. ಅಲ್ಲದೆ, ಈ ಆಟಿಕೆಗಳಲ್ಲಿ ಯಾವುದೇ ರಾಸಾಯನಿಕಗಳನ್ನು ಬಳಸಲಾಗುವುದಿಲ್ಲ. ನಶಿಸುತ್ತಿರುವ ಕಲೆಯನ್ನು ಪುನರುಜ್ಜೀವಗೊಳಿಸಲು, ರಾಜು ತನ್ನ ಗ್ರಾಮದ ಕುಶಲಕರ್ಮಿಗಳೊಂದಿಗೆ ಹೊಸ ಆಂದೋಲನವನ್ನು ಪ್ರಾರಂಭಿಸಿದ್ದಾರೆ. ಈ ಸಾಂಪ್ರದಾಯಿಕ ಆಟಿಕೆಗಳು ಭೌಗೋಳಿಕ ಸೂಚನಾ ನೋಂದಾವಣೆಯಿಂದ ಭೌಗೋಳಿಕ ಸೂಚಕ (ಜಿಐ) ಟ್ಯಾಗ್ ಅನ್ನು ಪಡೆದಿವೆ. ರಾಜು ಅವರ ಉಪಕ್ರಮಗಳು ಗತ ಸಂಪ್ರದಾಯವನ್ನು ಪುನರುಜ್ಜೀವಗೊಳಿಸುವುದಲ್ಲದೆ 150ಕ್ಕೂ ಹೆಚ್ಚು ಕುಟುಂಬಗಳಿಗೆ ಜೀವನೋಪಾಯವನ್ನು ಒದಗಿಸುತ್ತಿವೆ.

"ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸ್ವಾವಲಂಬಿ ಭಾರತಕ್ಕಾಗಿ ಕರೆ ನೀಡಿದ ತರುವಾಯ, ನಾವು ಆಟಿಕೆಗಳನ್ನು ತಯಾರಿಸಲು ನಿರ್ಧರಿಸಿದ್ದೇವೆ, ಈ ಮುನ್ನ ಆಮದು ಮಾಡಿಕೊಳ್ಳಲಾಗುತ್ತಿತ್ತು. ಲಾಕ್‌ಡೌನ್ ಸಮಯದಲ್ಲಿ ಆಳವಾದ ಸಂಶೋಧನೆಯ ನಂತರ, ನಾವು ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಆಟಿಕೆಗಳನ್ನು ತಯಾರಿಸಲು ಪ್ರಾರಂಭಿಸಿದ್ದೇವೆ. ನಮ್ಮ ಗುರಿ ಆಮದನ್ನು ಕಡಿಮೆ ಮಾಡುವುದು ಮತ್ತು ಆಟಿಕೆ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಗಳನ್ನಾಗಿ ಮಾಡುವುದಾಗಿದೆ "ಎಂದು ಅದಿತಿ ಟಾಯ್ಸ್ ಪ್ರೈವೇಟ್ ಲಿಮಿಟೆಡ್‌ನ ಪ್ರಧಾನ ವ್ಯವಸ್ಥಾಪಕ ಹಿಮಾಂಶು ವೋರಾ ಹೇಳುತ್ತಾರೆ. ಆಟಿಕೆ ಉತ್ಪಾದನಾ ಸಂಸ್ಥೆ ಶೇಕಡಾ 100ರಷ್ಟು ಮೇಡ್ ಇನ್ ಇಂಡಿಯಾ ಆಟಿಕೆಗಳನ್ನು ತಯಾರಿಸುವ ಗುರಿಯನ್ನು ಹೊಂದಿದೆ. ಇದು ಆಮದು ಮಾಡಿದ ಆಟಿಕೆಗಳಿಗೆ ಕಠಿಣ ಸ್ಪರ್ಧೆಯನ್ನು ನೀಡುವ 160ಕ್ಕೂ ಹೆಚ್ಚು ಬಗೆಯ ಆಟಿಕೆಗಳನ್ನು ಉತ್ಪಾದಿಸುತ್ತದೆ. ತಮ್ಮ ಪ್ರಯತ್ನಗಳ ಬಗ್ಗೆ ಮಾತನಾಡಿದ ವೋರಾ, ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ತಾವು ಶೇಕಡಾ 100ರಷ್ಟು ಭಾರತೀಯ ಉತ್ಪನ್ನಗಳನ್ನು ತಯಾರಿಸುತ್ತಿರುವುದಾಗಿ ಹೇಳುತ್ತಾರೆ. "ಭಾರತದ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಸುವುದು, ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ತಮ್ಮ ಉದ್ದೇಶವಾಗಿದೆ. ನಾವು ಶೈಕ್ಷಣಿಕ ಕ್ರೀಡೆಗಳನ್ನು ರೂಪಿಸುವತ್ತ ಶ್ರಮಿಸುತ್ತಿದ್ದೇವೆ. ಲಾಕ್ ಡೌನ್ ಮಾಡಿದ ಕೇವಲ ಮೂರು ತಿಂಗಳಲ್ಲಿ ನಾವು ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದೇವೆ. ನಾವೆಲ್ಲರೂ ಸಾಮೂಹಿಕ ಪ್ರಯತ್ನಗಳನ್ನು ಮಾಡಿದರೆ, ಪ್ರಮುಖ ಬದಲಾವಣೆಗಳನ್ನು ತರಬಹುದು" ಎಂದು ವೋರಾ ಹೇಳುತ್ತಾರೆ. ಕಂಪನಿಯು 1.15 ಕೋಟಿ ರೂ.ಗಳ ಸಾಲವನ್ನು ತೆಗೆದುಕೊಂಡು ಬಿಕ್ಕಟ್ಟನ್ನು ಅವಕಾಶವನ್ನಾಗಿ ಪರಿವರ್ತಿಸಿತು. ಅವರ ಮೂರನೇ ಘಟಕವು ಕ್ರಿಯಾಶೀಲವಾಗಿದೆ ಮತ್ತು ದೂರದಿಂದಲೇ ನಿಯಂತ್ರಿಸುವ ಕಾರುಗಳು ಮತ್ತು ವೈದ್ಯರ ಸಲಕರಣೆಗಳಂಥ ಆಟಿಕೆಗಳನ್ನು ಉತ್ಪಾದಿಸುತ್ತಿದೆ. ಆಮದು ಮಾಡಿದ ಆಟಿಕೆಗಳಿಗಿಂತ ಇವರ ಉತ್ಪನ್ನಗಳು ಅಗ್ಗವಾಗಿದೆ.







ಇವು ಕೇವಲ ಕಥೆಗಳಲ್ಲ, ಆದರೆ ಭಾರತದಲ್ಲಿನ ಆಟಿಕೆ ವಲಯದ ಬದಲಾವಣೆಯ ಚಿತ್ರಣವಾಗಿದೆ. ಅಭಿನವ್ ಬ್ಯಾನರ್ಜಿ ಅವರು ದೆಹಲಿಯ ಝುಂಡೇವಾಲನ್‌ನ ಹೆಸರಾಂತ ಮಾರುಕಟ್ಟೆಗೆ ಹೋದಾಗ, ಅವರು ಈ ಬದಲಾವಣೆಯನ್ನು ಕಂಡರು. ಈ ಹಿಂದೆ ಮಾರುಕಟ್ಟೆಯಲ್ಲಿ ಕೇವಲ ಆಮದು ಆಟಿಕೆಗಳು ಮಾತ್ರ ಕಾಣಸಿಗುತ್ತಿತ್ತು. ಆದರೆ, ಕಳೆದ ಬಾರಿ ಭೇಟಿ ನೀಡಿದಾಗ, ವಿಸ್ತೃತ ಶ್ರೇಣಿಯ ಮೇಡ್ ಇನ್ ಇಂಡಿಯಾ ಆಟಿಕೆಗಳನ್ನು ನೋಡಿದ್ದಾಗಿ ತಿಳಿಸುತ್ತಾರೆ. ಕೇವಲ ಆಟಿಕೆ ತಯಾರಕರಷ್ಟೇ ಅಲ್ಲ, ಖರೀದಿಸುವವರೂ ಕೂಡ ಭಾರತದಲ್ಲಿ ತಯಾರಾದ ಆಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದಾರೆ ಮತ್ತು ಇಷ್ಟ ಪಡುತ್ತಿದ್ದಾರೆ. ಇದು ಯಾರಾದರೂ ವಾಸ್ತವವಾಗಿ ಕಾಣಬಹುದಾದ ನೈಜ ಬದಲಾವಣೆಯಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2020ರಲ್ಲಿ ಈ ಬದಲಾವಣೆಯ ಬೀಜ ಬಿತ್ತಿದ್ದಾರೆ. ಪ್ರಧಾನಮಂತ್ರಿಯವರು 2020ರ ಆಗಸ್ಟ್ ತಿಂಗಳ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್ ನಲ್ಲಿ, ಇದು ಆಟಿಕೆಗಳಿಗೆ 'ಸ್ಥಳೀಯತೆಗೆ ಧ್ವನಿ'ಯಾಗುವ ಕಾಲವಾಗಿದೆ ಎಂದು ತಿಳಿಸಿದ್ದರು. "ಜಾಗತಿಕ ಆಟಿಕೆ ಉದ್ಯಮವು 7 ಲಕ್ಷ ಕೋಟಿಗಿಂತ ಅಧಿಕವಾಗಿದೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗುತ್ತದೆ. ಇದು ದೊಡ್ಡ ವ್ಯವಹಾರ, ಆದರೆ ಭಾರತದ ಪಾಲು ಇದರಲ್ಲಿ ಅತ್ಯಲ್ಪ. ಪರಂಪರೆ, ಸಂಪ್ರದಾಯ, ವೈವಿಧ್ಯ ಮತ್ತು ಯುವ ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರಕ್ಕಾಗಿ ಈಗ ಒಂದು ಆಲೋಚನೆಯನ್ನು ಮಾಡಿ. ಆಟಿಕೆ (ಜಾಗತಿಕ) ಮಾರುಕಟ್ಟೆಯಲ್ಲಿ ಇಷ್ಟು ಕಡಿಮೆ ಪಾಲು ಇರುವುದು ಒಳ್ಳೆಯದು ಎನಿಸುತ್ತದೆಯೇ? ಖಂಡಿತಾ ಇಲ್ಲ, ಇದನ್ನು ಕೇಳಿದ ನಂತರ ನಿಮಗೂ ಒಳ್ಳೆಯದು ಎನಿಸುವುದಿಲ್ಲ "ಎಂದು ಪ್ರಧಾನಮಂತ್ರಿ ಹೇಳಿದರು. ಭಾರತೀಯ ಆಟಿಕೆ ಮಾರುಕಟ್ಟೆಗಳತ್ತ ಸಮುದಾಯದ ಗಮನವನ್ನು ಸೆಳೆಯಬೇಕಾಗಿದೆ. ಭಾರತೀಯ ಮಾರುಕಟ್ಟೆಗಳು ಈವರೆಗೆ ವಿದೇಶೀ ಆಟಿಕೆಗಳಿಂದ ತುಂಬಿ ತುಳುಕುತ್ತಿವೆ. ಸಾಂಪ್ರದಾಯಿಕ ಮತ್ತು ಸ್ಥಳೀಯ ಆಟಿಕೆಗಳು ಕಣ್ಮರೆಯಾಗುತ್ತಿವೆ. ಇಡೀ ವಿಶ್ವವೇ ಕೊರೊನಾ ವೈರಾಣು ಸಾಂಕ್ರಾಮಿಕದ ವಿರುದ್ಧ ಹೋರಾಡುತ್ತಿರುವಾಗ, ಭಾರತ ಹೇಗೆ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಬೇಕು ಎಂಬುದನ್ನು ತೋರಿಸಿಕೊಟ್ಟಿದೆ, ಮತ್ತು ಕೈಯಲ್ಲಿ ತಯಾರಿಸುವ ಮತ್ತು ಸ್ಥಳೀಯ ಆಟಿಕೆಗಳು ಮುನ್ನೆಲೆಗೆ ಬಂದಿವೆ. ಈಗ, ಭಾರತ ತನ್ನ ಧೈರ್ಯ ಮತ್ತು ಪ್ರತಿಭೆಯಿಂದ ಆಟಿಕೆ ಮಾರುಕಟ್ಟೆಯನ್ನು ಆಳಲು ಅಣಿಯಾಗುತ್ತಿದೆ ಎಂದು ಹೇಳಿದರು.

'ಸ್ಥಳೀಯತೆಗೆ ಧ್ವನಿ' ಮಂತ್ರ ಸ್ಥಳೀಯ ಆಟಿಕೆಗಳ ಬಗೆಗಿನ ಖರೀದಿದಾರರ ಮತ್ತು ಮಾರಾಟಗಾರರ ದೃಷ್ಟಿಕೋನವನ್ನು ಬದಲಾಯಿಸಿದೆ. ಇದು ಟೆರಾಕೋಟಾ, ಅಡಿಕೆ, ಮರ, ಬಿದಿರು ಮತ್ತು ಆಮೆ ಚಿಪ್ಪುಗಳಿಂದ ಮಾಡಿದ ಸಾಂಪ್ರದಾಯಿಕ ಆಟಿಕೆಗಳಿಗೆ ಬೇಡಿಕೆಯನ್ನು ಹೆಚ್ಚಿಸಿದೆ. ಈ ಬದಲಾವಣೆಯ ಗಾಳಿಯು ಕೈಯಿಂದ ಮಾಡಿದ ಆಟಿಕೆಗಳ ಮೇಲೆ ಮಾತ್ರವಲ್ಲದೆ ಸಾಮಾನ್ಯ ಆಟಿಕೆ ಉದ್ಯಮದ ಮೇಲೂ ಪರಿಣಾಮ ಬೀರಿದೆ. ಉತ್ತಮ ಆಟಿಕೆಗಳನ್ನು ತಯಾರಿಸುವಲ್ಲಿ ಪರಿಣತಿಯನ್ನು ಹೊಂದಿರುವ ಹಲವಾರು ನುರಿತ ಕುಶಲಕರ್ಮಿಗಳನ್ನು ಭಾರತ ಹೊಂದಿದೆ. ಗುಜರಾತ್‌ನ ರಾಜ್ ಕೋಟ್ ಸೇರಿದಂತೆ ದೇಶದ ಕೆಲವು ಭಾಗಗಳು; ಕರ್ನಾಟಕದ ರಾಮನಗರ ಜಿಲ್ಲೆಯ ಚನ್ನಪಟ್ಟಣ; ಆಂಧ್ರಪ್ರದೇಶದ ಕೃಷ್ಣದ ಕೊಂಡಪಲ್ಲಿ; ತಮಿಳುನಾಡಿನ ತಂಜಾವೂರು; ಅಸ್ಸಾಂನ ಧುಬ್ರಿ; ಮತ್ತು ಉತ್ತರ ಪ್ರದೇಶದ ವಾರಾಣಸಿಯನ್ನು ಆಟಿಕೆ ಕ್ಲಸ್ಟರುಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಆಟಿಕೆ ವಲಯದಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು ಸರ್ಕಾರದ ಬದ್ಧತೆಯನ್ನು ಅದರ ಉಪಕ್ರಮಗಳಿಂದ ಗ್ರಹಿಸಬಹುದು. ಉದ್ಯಮದ ಪುನಶ್ಚೇತನ ಮತ್ತು ವಿಸ್ತರಣೆಗಾಗಿ ಒಟ್ಟು 15 ಸಚಿವಾಲಯಗಳು ಮತ್ತು ಇಲಾಖೆಗಳು ಕೈಜೋಡಿಸಿವೆ. ಇದು ಭಾರತೀಯ ಆಟಿಕೆ ಉದ್ಯಮವನ್ನು ಸ್ವಾವಲಂಬಿಯನ್ನಾಗಿ ಮಾಡುವ ನಿರ್ಣಯಕ್ಕೆ ನಾಂದಿಯಾಗಿದೆ. ಆದರೆ, ಹಿಂದಿನ ಕೇಂದ್ರ ಸರ್ಕಾರಗಳು ಏನನ್ನೂ ಮಾಡಿರಲಿಲ್ಲವೇ? ಅವರು ಮಾಡಿದ್ದರೆ, ಅದರ ಫಲಿತಾಂಶ ಏನು? ಈ ಹೊಸ ಆರಂಭಕ್ಕೆ ಕಾರಣವೇನು?

### ಇಂದಿನ ಕೌಶಲ, ದುಸ್ಥಿತಿಯ ಹಿಂದಿರುವ ಶ್ರೀಮಂತ ಪ್ರಾಚೀನ ನಾಗರಿಕತೆ

ಯಾವುದೇ ದೇಶದ ಆಟಿಕೆಗಳು ಅದರ ಸಂಸ್ಕೃತಿ ಮತ್ತು ಜೀವನಶೈಲಿಯ ಪ್ರತಿಬಿಂಬವಾಗಿರುತ್ತವೆ. ಆಟಿಕೆಗಳೊಂದಿಗಿನ ಭಾರತದ ಒಡನಾಟವನ್ನು ಹರಪ್ಪಾ ನಾಗರಿಕತೆಗೆ ಮೊದಲೇ ಹುಡುಕಬಹುದು. ಉತ್ಖನನದ ಸಮಯದಲ್ಲಿ, ಆ ಅವಧಿಯ ಆಟಿಕೆಗಳು ಕಂಡುಬಂದಿವೆ, ಅವುಗಳು ದೊಡ್ಡ ವೈವಿಧ್ಯವನ್ನೂ ತೋರಿಸುತ್ತವೆ.



**ಸ್ವಾವಲಂಬಿ ಭಾರತದ ಜೊತೆಗೆ ಭಾರತೀಯ ಆಟಿಕೆಗಳಿಗೆ ಸ್ಥಳೀಯತೆಗೆ ಧ್ವನಿಗೂ ಇದು ಸಕಾಲವಾಗಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ.**



# ಸ್ವಾವಲಂಬಿಯಾಗಲು ಲಕ್ಷ್ಮೀ ಚಂದ್, ವಿಜಯ್ ಮೆಹ್ರಾ ಅವರಿಗೆ ನೆರವಾದ ಆಟಿಕೆ

ದೆಹಲಿಯ ಲಕ್ಷ್ಮೀ ಚಂದ್ ಆಟಿಕೆ ತಯಾರಿಕೆಯಲ್ಲಿನ ತಮ್ಮ ಪಾಲಕರ ಪ್ರಯತ್ನವನ್ನು ಮುಂದುವರಿಸಿದರು. ದೆಹಲಿಯ ರಘುಬೀರ್ ನಗರದ ಜೆಜೆ ಕಾಲೋನಿಯ ನಿವಾಸಿಯಾದ 55 ವರ್ಷದ, ಕೈಯಿಂದ ತಯಾರಿಸುವ ಇವರ ಕಾರುಗಳು, ಟಕ್ -ಟಕ್ ಎಂದೇ ಖ್ಯಾತವಾಗಿವೆ. "ನನ್ನ ಪೋಷಕರು ಕಳೆದ 43 ವರ್ಷಗಳಿಂದ ಈ ಆಟಿಕೆಗಳನ್ನು ತಯಾರಿಸುತ್ತಿದ್ದಾರೆ. ನಾನು ಅವರಿಗೆ ಮೊದಲಿನಿಂದಲೂ ಸಹಾಯ ಮಾಡುತ್ತಿದ್ದೇ. ಆದರೆ ಈ ದಿಕ್ಕಿನಲ್ಲಿ ಬದಲಾದ ಸರ್ಕಾರದ ಗಮನವು, ನಮ್ಮಂತಹ ಕೈಯಿಂದ ಆಟಿಕೆ ತಯಾರಿಸುವವರಿಗೆ ಖಂಡಿತವಾಗಿಯೂ ಸಹಾಯ ಮಾಡುತ್ತದೆ," ಎಂದು ಅವರು ಹೇಳುತ್ತಾರೆ. ತುಂಬಾ ಸರಳವಾಗಿ ಕಾಣುವ, ಮಕ್ಕಳಿಗೆ ಆಕರ್ಷಕವೆನಿಸುವ, ಟಕ್-ಟಕ್ ಆಟಿಕೆಗಳನ್ನು ತಯಾರಿಸುವುದು ಅಷ್ಟು ಸುಲಭವಲ್ಲ. ಆಟಿಕೆ ಪೂರ್ಣಗೊಳ್ಳುವ ಮೊದಲು ಅದು 40 ಕೈಗಳ ಮೂಲಕ ಹಾದು ಬರುತ್ತದೆ. ವರ್ಚುವಲ್ ಮಾಧ್ಯಮದ ಮೂಲಕ ಕುಶಲಕರ್ಮಿಗಳ ಕೌಶಲ್ಯವು ಈಗ ಜಗತ್ತಿಗೆ ಸ್ಪಷ್ಟವಾಗುತ್ತಿದೆ.



ಮನಸ್ಸಿದ್ದರೆ ಮಾರ್ಗ. ಈ ಗಾದೆ ನಿಜವೆಂದು ಸಾಬೀತುಪಡಿಸುತ್ತಾ, ಹಿಮಾಚಲ ಪ್ರದೇಶದ ಕಾಂಗ್ರಾದ ವಿಜಯ್ ಮೆಹ್ರಾ ನಶಿಸುತ್ತಿರುವ ಆಟಿಕೆ ತಯಾರಿಸುವ ಕಲೆಯನ್ನು ಪುನರುಜ್ಜೀವಗೊಳಿಸುತ್ತಿದ್ದಾರೆ. ಬಿದಿರಿನಿಂದ ಆಟಿಕೆಗಳನ್ನು ತಯಾರಿಸುವ ಮೂಲಕ, ಮೆಹ್ರಾ ಕೇವಲ ಸ್ವಾವಲಂಬಿಗಳಾಗುವುದಲ್ಲದೆ, ಸ್ವಯಂ ಉದ್ಯೋಗವನ್ನು ಸೃಷ್ಟಿಸುವಲ್ಲಿ ಇತರರಿಗೆ ಸಹಾಯ ಮಾಡುತ್ತಿದ್ದಾರೆ. "ಬಿದಿರು ಸುಲಭವಾಗಿ ಸಿಗುತ್ತವೆ. ಈ ಆಟಿಕೆಗಳು ಸಹ ಉತ್ತಮ ಲಾಭವನ್ನು ನೀಡುತ್ತಿವೆ. ನಾನು ಇಲ್ಲಿಯವರೆಗೆ 150 ಜನರಿಗೆ ತರಬೇತಿ ನೀಡಿದ್ದೇನೆ "ಎಂದು ಮೆಹ್ರಾ ಹೇಳುತ್ತಾರೆ.



ಆಧುನಿಕ ಯುಗದಲ್ಲೂ, ಸಂಪನ್ಮೂಲದ ಕೊರತೆಯ ಕಾರಣಕ್ಕೆ ಮಕ್ಕಳನ್ನು ಆಟಿಕೆ ಮತ್ತು ಸಂತೋಷದಿಂದ ದೂರ ಇಡಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿ ಅನಾದಿಕಾಲದಿಂದಲೂ ಆಟಿಕೆಗಳು ಎಲ್ಲ ಕುಟುಂಬದ ಅಂಗವಾಗಿದೆ. ಅದು ಶ್ರೀಮಂತ ಕುಟುಂಬವೇ ಆಗಿರಲಿ, ಅಥವಾ ಬಡ ಕುಟುಂಬವೇ ಆಗಿರಲಿ, ಆಟಿಕೆಗಳು ಮಗುವಿನ ಜೀವನದ ಅವಿಭಾಜ್ಯ ಅಂಗವಾಗಿದೆ. ಪಾಲಕರು ತಮ್ಮ ಆದಾಯ ಏನೇ ಇರಲಿ, - ದುಬಾರಿ ಅಥವಾ ಅಗ್ಗ -ತಮ್ಮ ಮಕ್ಕಳಿಗೆ ಆಟಿಕೆಗಳನ್ನು ಕೊಡಿಸುತ್ತಾರೆ. ಭಾರತದಾದ್ಯಂತ, ಆಟಿಕೆಗಳು ಜೀವನದ ಮತ್ತು ಸಂಪ್ರದಾಯದ ನಿರ್ಣಾಯಕ ಭಾಗವಾಗಿವೆ. ಇಂದಿಗೂ, ಮಕ್ಕಳಿಗೆ ಆಟಿಕೆಗಳು ಇಲ್ಲದಿದ್ದರೆ ಅವರ ಸಂಭ್ರಮ ಅಪೂರ್ಣವಾಗುತ್ತದೆ. ದಕ್ಷಿಣ ಭಾರತದಲ್ಲಿ, ದಸರಾ ಸಮಯದಲ್ಲಿ ಗೊಂಬೆಗಳು ಮತ್ತು ಪ್ರತಿಮೆಗಳನ್ನು ಪ್ರದರ್ಶಿಸುವ ಮೂಲಕ 'ಬೊಂಬೆ ಹಬ್ಬ' ಅಥವಾ 'ಬೊಂಬೆಗಳ ದರ್ಬಾರ್' ಆಚರಿಸಲಾಗುತ್ತದೆ. ಬೊಂಬೆಗಳನ್ನು ವಿವಿಧ ವಿಷಯಗಳ ಆಧಾರದ ಮೇಲೆ ಪ್ರದರ್ಶಿಸಲಾಗುತ್ತದೆ. ಹೀಗೆ ಪ್ರದರ್ಶಿಸಲಾಗುವ ಎಲ್ಲ ಬೊಂಬೆಗಳೂ ಗ್ರಾಮೀಣ ಕಲಾವಿದರಿಂದ ಮಣ್ಣಿನಲ್ಲಿ ಇಲ್ಲವೇ ಮರದಿಂದ ಮಾಡಿದ್ದಾಗಿರುತ್ತವೆ. ಬೊಂಬೆಗಳಿಗೆ ಉಜ್ವಲ ಬಣ್ಣವನ್ನು ಹಚ್ಚಲಾಗುತ್ತದೆ. ಭಾರತೀಯ ಆಟಿಕೆಗಳ ಸಂಘದ ತಾಂತ್ರಿಕ ಸಮಿತಿಯ ಸಂಚಾಲಕ ಮನು ಗುಪ್ತ ಪ್ರಕಾರ, ಜಿಐ ಟ್ಯಾಗ್ ಪಡೆದ, ಸಾಂಪ್ರದಾಯಿಕ ಆಟಿಕೆ ತಯಾರಿಸುವ 12 ಕ್ಲಸ್ಟರ್ ಹೊಂದಿರುವ ವಿಶ್ವದ ಏಕೈಕ ದೇಶ ಭಾರತವಾಗಿದೆ. "ಇದರೊಂದಿಗೆ, 20 ಸಾಂಪ್ರದಾಯಿಕ ಆಟಿಕೆ ಸಮೂಹಗಳಿವೆ. ಭಾರತೀಯ ಆಟಿಕೆಗಳು 5,000ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿವೆ. ಆಟಿಕೆ ತಯಾರಿಸುವವರು ಸಂಘಟಿತರಾಗುವುದು ಮುಖ್ಯವೆನಿಸುತ್ತದೆ" ಎಂದು ಗುಪ್ತಾ ಹೇಳುತ್ತಾರೆ.

**ಭಾರತೀಯ ಆಟಿಕೆಗಳಿಗೆ 5000 ವರ್ಷಗಳ ಇತಿಹಾಸವಿದೆ. ಆದಾಗ್ಯೂ, ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಆಟಿಕೆಗಳ ಕೊಡುಗೆ ನಗಣ್ಯ.**

ಭಾರತವು ವಿವಿಧತೆಯಲ್ಲಿ ಏಕತೆಯ ನೀತಿಯನ್ನು ಹೊಂದಿರುವ ದೇಶವಾಗಿರುವುದರಿಂದ, ಅದರ ಆಟಿಕೆಗಳು ಅದರ ವೈವಿಧ್ಯಮಯ ಸಂಸ್ಕೃತಿಯನ್ನು ಸಹ ಪ್ರತಿಬಿಂಬಿಸುತ್ತವೆ. ಅದು ಉತ್ತರವೇ ಆಗಿರಲಿ ಅಥವಾ ದಕ್ಷಿಣವೇ ಆಗಿರಲಿ ಇಲ್ಲ ಈಶಾನ್ಯವೇ ಇರಲಿ, ಈ ಪ್ರದೇಶದ ಆಟಿಕೆಗಳು ಸ್ಥಳೀಯ ಸಂಪ್ರದಾಯದ ಪ್ರತಿಬಿಂಬವನ್ನು ಹೊಂದಿರುತ್ತವೆ.



# ಮಗುವಿನ ಆರೋಗ್ಯದ ಕಾಳಜಿ

- 2009-10ರಲ್ಲಿ, ವಿಜ್ಞಾನ ಮತ್ತು ಪರಿಸರ ಕೇಂದ್ರ ಪ್ರಮುಖ ಬ್ರಾಂಡ್ಗಳ ಆಟಿಕೆಗಳಲ್ಲಿರುವ ಥ್ಯಾಲೇಟ್ಗಳ ಕುರಿತಂತೆ ಅಧ್ಯಯನ ನಡೆಸಿತು. ಮಾನವರಿಗೆ ಅಪಾಯಕಾರಿಯಾದ ಥ್ಯಾಲೇಟ್ ಅಂಶ ಆಮದು ಆಟಿಕೆಗಳಲ್ಲಿರುವುದು ಪತ್ತೆಯಾಯಿತು
- ವರದಿಯ ರೀತ್ಯ, ಆಟಿಕೆ ತಯಾರಕರು, ಪ್ಲಾಸ್ಟಿಕ್ ಆಟಿಕೆಗಳನ್ನು ಮೆದು ಮತ್ತು ತಾಳಿಕೆಯಾಗುವಂತೆ ಮಾಡಲು ಥ್ಯಾಲೇಟ್‌ಗಳನ್ನು ಬಳಸುತ್ತಾರೆ. ಈ ರಾಸಾಯನಿಕವು ವಿಶೇಷವಾಗಿ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ತುಂಬಾ ವಿಷಕಾರಿಯಾಗಿದೆ.
- ಅಮೆರಿಕ ಮತ್ತು ಯುಕೆಯಲ್ಲಿ ಥ್ಯಾಲೇಟ್ ಗಳ ಬಳಕೆಯನ್ನು ನಿಷೇಧಿಸಲಾಗಿದೆ. ಇದಕ್ಕೆ ತೆರೆದುಕೊಳ್ಳುವುದರಿಂದ ಮಕ್ಕಳಲ್ಲಿ ಸಂತಾನೋತ್ಪತ್ತಿ ಅಸ್ವಸ್ಥತೆ, ಅಸ್ತಮಾ ಮತ್ತು ಅಲರ್ಜಿ ಉಂಟಾಗುತ್ತದೆ.
- 2007ರಲ್ಲಿ, ಅಮೆರಿಕದ ಸಂಸ್ಥೆಯಾದ ಮ್ಯಾಟಲ್ ತಯಾರಿಸಿದ 8 ಲಕ್ಷ ಆಟಿಕೆಗಳಲ್ಲಿ ಮಾಡಲಾಗಿದ್ದ ಮಿತಿಮೀರಿದ ಸೀಸದ ಬಣ್ಣದ ಬಳಕೆ, ಮಕ್ಕಳಿಗೆ ಹಾನಿಕಾರಕ ಎಂದು ಅದನ್ನು ಹಿಂದಕ್ಕೆ ಪಡೆಯಲಾಯಿತು
- ಇಂತಹ ಅನೇಕ ಘಟನೆಗಳ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಬಂದಿದ್ದಾಗ್ಯೂ, ಅಂದಿನ ಸರ್ಕಾರಗಳು ಕೈಗೊಂಡಿರುವ ಕ್ರಮಗಳು ಸಾಲದಾಗಿವೆ.
- ಈ ಆಟಿಕೆಗಳು ಮಕ್ಕಳ ಚರ್ಮಕ್ಕೆ ಹಾನಿಯುಂಟು ಮಾಡುತ್ತವೆ ಎಂದು ಫಲಿತಾಂಶ ಹೇಳಿದೆ. ಕೇವಲ ಶೇ.33ರಷ್ಟು ಆಟಿಕೆಗಳು ಮಾತ್ರ ಈ ಪರೀಕ್ಷೆಯಲ್ಲಿ ಪಾಸ್ ಆಗಿವೆ.



- 2019ರಲ್ಲಿ ಭಾರತೀಯ ಗುಣಮಟ್ಟ ಮಂಡಳಿ (ಕ್ಯು.ಸಿ.ಐ.) ಎನ್.ಸಿ.ಆರ್. ಮಾರುಕಟ್ಟೆಯಲ್ಲಿ ಲಭ್ಯವಿರುವ 121 ವಿವಿಧ ಬಗೆಯ ಆಟಿಕೆಗಳನ್ನು ಪರೀಕ್ಷಿಸಿತ್ತು.
- ಹಲವು ಆಟಿಕೆಗಳು ಥ್ಯಾಲೇಟ್ ಮತ್ತು ಭಾರಲೋಹ, ಇತ್ಯಾದಿಗಳ ಅಂಗೀಕಾರಾರ್ಹ ಮಟ್ಟದ ಗುಣಮಟ್ಟದ ಮಾನಕಗಳನ್ನು ಪೂರೈಸಲು ವಿಫಲವಾದವು.



**41.3 %** ಮಾದರಿಗಳು ಯಾಂತ್ರಿಕ ಗುಣಲಕ್ಷಣಗಳಲ್ಲಿ ವಿಫಲವಾಗಿವೆ.

**3.3 %** ಮಾದರಿಗಳು ಥ್ಯಾಲೇಟ್‌ಗಳ ಸ್ವೀಕಾರಾರ್ಹ ಮಟ್ಟದಲ್ಲಿ ವಿಫಲವಾಗಿವೆ.

**12.4 %** ಮಾದರಿಗಳು ಯಾಂತ್ರಿಕ ಮತ್ತು ಥ್ಯಾಲೇಟ್ ಪರೀಕ್ಷೆಯಲ್ಲಿ ವಿಫಲವಾಗಿವೆ.

**7.4 %** ಮಾದರಿಗಳು ದಹನ ಪರೀಕ್ಷೆಯಲ್ಲಿ ವಿಫಲವಾಗಿವೆ.

**2.5%** ಮಾದರಿಗಳು ಯಾಂತ್ರಿಕ ಮತ್ತು ಉರಿಯುವ ಪರೀಕ್ಷೆಯಲ್ಲಿ ವಿಫಲವಾಗಿವೆ

**ಕ್ಯುಸಿಐ ಈ ಆಟಿಕೆಗಳಲ್ಲಿ ಭಾರ ಲೋಹ ಒಳಗೊಂಡಿರುವುದೂ ಸೇರಿದಂತೆ ಯಾಂತ್ರಿಕ ಮತ್ತು ಬೌದ್ಧಿಕ ಸುರಕ್ಷತೆ ಅಂಶಗಳ ಪರೀಕ್ಷೆ ಮಾಡಿತ್ತು.**

**ಆಟಿಕೆಗಳು ಅಪಾಯಕಾರಿ ರಾಸಾಯನಿಕ ಒಳಗೊಂಡಿವೆ ಎಂಬುದನ್ನು ಫಲಿತಾಂಶ ತೋರಿಸಿತು.**

### ಹೊಸ ಆಶೋತ್ತರಗಳಿಗೆ ಮೂಡಿದ ಗರಿ

ಭಾರತೀಯ ಆಟಿಕೆಗಳು ಶ್ರೀಮಂತ ಸಾಂಸ್ಕೃತಿಕ ನೆಲೆಗಳನ್ನು ಹೊಂದಿವೆ. ಆದಾಗ್ಯೂ, ಇದು ಸೂಕ್ತ ವೇದಿಕೆಯ ಕೊರತೆ ಎದುರಿಸಿತ್ತು. ಭಾರತೀಯ ಆಟಿಕೆಗಳಿಗೆ ವೇದಿಕೆ ಒದಗಿಸಲು ಕೇಂದ್ರ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸಾಂಪ್ರದಾಯಿಕ ಆಟಿಕೆಗಳನ್ನು ಅನುಶೋಧನೆ ಮತ್ತು ತಂತ್ರಜ್ಞಾನದೊಂದಿಗೆ ಸಂಪರ್ಕಿಸಿ, ತಿಂಗಳ ಅವಧಿಯ ಟಾಯ್ ಕಥಾನ್ ಅನ್ನು ಆಯೋಜಿಸಲಾಗಿತ್ತು. ಅಲ್ಲದೆ, ಭಾರತದ ಮೊದಲ ಆಟಿಕೆ ಮೇಳವನ್ನು ಫೆಬ್ರವರಿಯಲ್ಲಿ ಆಯೋಜಿಸಲಾಗಿತ್ತು. ಈ ಮೇಳದ ಯಶಸ್ಸನ್ನು ಕಾನ್ಪುರ್ ದಲ್ಲಾಗಲೀ ಅಥವಾ ರಾಜಸ್ಥಾನದಲ್ಲಾಗಲೀ ಅಳೆಯಬಹುದು, ಈ ಮೇಳವು ಆಟಿಕೆ ತಯಾರಿಕೆಯಲ್ಲಿ ತೊಡಗಿರುವ ಜನರಿಗೆ ಹೊಸ ಭರವಸೆಯನ್ನು ನೀಡಿದೆ. ಇಂತಹ ಉಪಕ್ರಮವು ದೇಶಾದ್ಯಂತದ ಸ್ಥಳೀಯ ತಯಾರಕರನ್ನು ಉತ್ತೇಜಿಸುತ್ತಿದೆ ಎಂದು ರಾಜಸ್ಥಾನದ ರಾಜೇಂದ್ರ ಕುಮ್ಹಾರ್ ಹೇಳುತ್ತಾರೆ. “ಸ್ವಾವಲಂಬಿ ಭಾರತ ಮತ್ತು ‘ಸ್ಥಳೀಯತೆಗೆ ಧ್ವನಿ’ ಉಪಕ್ರಮಗಳ ಅಡಿಯಲ್ಲಿ, ಸಾಂಪ್ರದಾಯಿಕ ಆಟಿಕೆ ತಯಾರಕರಿಗೆ ಅನುಕೂಲವಾಗಲಿದೆ.

# ಜಾಗತಿಕ ಆಟಿಕೆ ಮಾರುಕಟ್ಟೆಗೆ ಭಾರತದ ಕೊಡುಗೆ

**85%**

ಜಾಗತಿಕವಾಗಿ ರಫ್ತಾಗುವ ಆಟಿಕೆಗಳಲ್ಲಿ ಚೀನ ಶೇ.8.5ರಷ್ಟು ಪಾಲು ಹೊಂದಿದೆ. ಐರೋಪ್ಯ ಒಕ್ಕೂಟ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

**₹7 ಲಕ್ಷ ಕೋಟಿ**

ಜಾಗತಿಕ ಆಟಿಕೆ ಕೈಗಾರಿಕೆಯ ಒಟ್ಟು ಮೌಲ್ಯವಾಗಿದೆ. 2025ರ ಹೊತ್ತಿಗೆ ಇದು 9.5 ಲಕ್ಷ ಕೋಟಿ ರೂ. ತಲುಪುವ ನಿರೀಕ್ಷೆ ಇದೆ.

**0.5%**

ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಪಾಲು – ಇದು ಕೇವಲ 45 ಕೋಟಿ ರೂ. ಮಾತ್ರ

- ಪ್ರತಿವರ್ಷ, 3500 ರಿಂದ 4500 ಕೋಟಿ ರೂ. ಮೌಲ್ಯದ ಆಟಿಕೆಗಳು ಭಾರತದಲ್ಲಿ ಮಾರಾಟವಾಗುತ್ತವೆ. ದೇಶೀಯ ಆಟಿಕೆಗಳ ಕೊಡುಗೆ ಶೇ.15 ಮಾತ್ರವಾಗಿದ್ದು, ಉಳಿದಿದ್ದು ಆಮದಾಗುತ್ತವೆ.
- ಲೆಗೋ ಮತ್ತು ಮೇಟೆಲ್ ಈ ಎರಡೂ ಜಾಗತಿಕವಾಗಿ ಅತಿ ದೊಡ್ಡ ಬ್ರಾಂಡ್‌ಗಳಾಗಿವೆ. ಹಲವು ಅಗ್ರ ಆಟಿಕೆ ಬ್ರಾಂಡ್‌ಗಳು ಚೀನಾದಲ್ಲಿ ತಮ್ಮ ಘಟಕ ಹೊಂದಿವೆ.
- ಜಾಗತಿಕ ಮಾರುಕಟ್ಟೆ ಶೇಕಡ 5ರಷ್ಟು ಬೆಳೆಯುವ ನಿರೀಕ್ಷೆಯಿದ್ದರೆ, ಭಾರತೀಯ ಮಾರುಕಟ್ಟೆ ಶೇ.10-15ರಷ್ಟು ವೃದ್ಧಿಸುವ ಸಾಧ್ಯತೆ ಇದೆ. ಈ ನಿರೀಕ್ಷಿತ ವೃದ್ಧಿಯೊಂದಿಗೆ, ಆಟಿಕೆ ಉದ್ಯಮದಲ್ಲಿ ಭಾರತ ತನ್ನ ಕೊಡುಗೆಯನ್ನು ಹೆಚ್ಚಿಸುವ ಸಮಯ ಬಂದಿದೆ.



**ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ 2024ರ ಹೊತ್ತಿಗೆ ಭಾರತದ ಪಾಲನ್ನು 2800 ಕೋಟಿ ರೂ. ಗೆ ಹೆಚ್ಚಿಸುವ ಗುರಿಯನ್ನು ಕೇಂದ್ರ ಹೊಂದಿದೆ.**

ನಮ್ಮ ಸಾಂಪ್ರದಾಯಿಕ ಆಟಿಕೆಗಳು ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ನೆರವಾಗುತ್ತವೆ ಎಂಬುದೂ ಭಾರತಕ್ಕೆ ಮಹತ್ವದ್ದಾಗಿದೆ. ನಾವು ದೇಶವನ್ನು ವಿದೇಶಗಳ ಆಟಿಕೆಗಳಿಂದ ರಕ್ಷಿಸಬೇಕು" ಎಂದು ಕುಮಾರ್ ಹೇಳುತ್ತಾರೆ.

ಈ ಆಟಿಕೆ ಮೇಳ ಇದೇ ರೀತಿಯ ವಿಶ್ವಾಸವನ್ನು ಮಧ್ಯಪ್ರದೇಶದ ಇಂದೋರ್ ನ ಆಟಿಕೆ ತಯಾರಕ ಜಿತೇಂದರ್ ಗೂ ನೀಡಿದೆ. ಆಟಿಕೆಗಳನ್ನು ತಯಾರಿಸಲು ಮರುಬಳಕೆಯ ಚರ್ಮ ಬಳಸುವ ಜಿತೇಂದರ್ ತಮ್ಮಂತ ಕಲಾವಿದರಿಗೆ ಪ್ರತಿಭೆಯನ್ನು ಪ್ರದರ್ಶಿಸಲು, ಸ್ಥಳೀಯ ಉತ್ಪನ್ನಗಳನ್ನು ಮುಖ್ಯವಾಹಿನಿಗೆ ಸಮರ್ಥ ರೀತಿಯಲ್ಲಿ ತರಲು ಮೇಳ ಒಂದು ವೇದಿಕೆ ಕಲ್ಪಿಸಿತ್ತು ಎಂದು ಹೇಳುತ್ತಾರೆ.

### ಆರೋಗ್ಯಪೂರ್ಣ ಬಾಲ್ಯಕ್ಕೆ ಸ್ಥಳೀಯ ಆಟಿಕೆ

ಆಟಿಕೆಗಳು ಮಕ್ಕಳ ಮೊದಲ ಗೆಳೆಯ. ಅವು ಮಕ್ಕಳಿಗೆ ಮನರಂಜನೆ ನೀಡುವುದಷ್ಟೇ ಅಲ್ಲ, ಅವರಿಗೆ ಸಾಕಷ್ಟು ಕಲಿಸುತ್ತವೆ ಕೂಡ. ಇದೆಲ್ಲವೂ ತಿಳಿದ ಸಂಗತಿಯಾಗಿದೆ. ಆದಾಗ್ಯೂ, ವಿದೇಶೀ ಆಟಿಕೆಗಳಿಂದ ತುಂಬಿರುವ ಮಾರುಕಟ್ಟೆಯಲ್ಲಿ ಭಾರತೀಯ ಆಟಿಕೆಗಳು ಕಳೆದುಹೋಗಿವೆ. ಈ ಆಮದು ಆಟಿಕೆಗಳು ಭಾರತೀಯ





## ಉತ್ತರ ಪ್ರದೇಶ



ವಾರಾಣಸಿ ಸಾಂಪ್ರದಾಯಿಕ ಆಟಿಕೆಗಳಿಗೆ ಹೆಸರಾಗಿದೆ. ಸಹರಾನ್ಪುರ್ ಮತ್ತು ಗ್ರೇಟರ್ ನೋಯಿಡಾ ಅಂತಾರಾಷ್ಟ್ರೀಯ ನಿಯಮಗಳನ್ನು ಪೂರೈಸುವ ಆಟಿಕೆ ತಯಾರಿಕೆಗೆ ಅಣಿಯಾಗಿವೆ.

ವಾರಾಣಸಿ | ಗ್ರೇಟರ್ ನೋಯಿಡಾ | ಸಹರಾನ್ ಪುರ



## ಮಧ್ಯಪ್ರದೇಶ

ಇಂದೋರ್ ನ 1000 ಎಕರೆ ಭೂಮಿಯನ್ನು ಗುರುತಿಸಲಾಗಿದೆ: ಬುದ್ನಿ ಭೋಪಾಲ್ ಬಳಿ ಇರುವ ಪ್ರಯೋಜನ ಪಡೆಯಲಿದೆ.

ಇಂಧೋರ್ | ಭೋಪಾಲ್ | ಬುದ್ನಿ





## ಆಂಧ್ರಪ್ರದೇಶ



ಏಟಿಕೊಪ್ಪಾಕಾ ಮತ್ತು ಕೊಂಡಪಲ್ಲಿ ಮರದ ಆಟಿಕೆಗಳಿಗೆ ಹೆಸರಾಗಿದ್ದು, ಗ್ರಾಮೀಣ ಭಾರತ ಪ್ರತಿಬಿಂಬಿಸುತ್ತವೆ.

ಏಟಿಕೊಪ್ಪಾಕಾ | ಕೊಂಡಪಲ್ಲಿ | ಕಡಪ



## ಗುಜರಾತ್



ತನ್ನ ವ್ಯಾಪಾರಕ್ಕೆ ಹೆಸರಾಗಿರುವ ಪ್ರಗತಿಪರ ಗುಜರಾತ್ ಆಟಿಕೆಯ ತಯಾರಿಕಾ ತಾಣವಾಗಲು ಸಿದ್ಧವಾಗುತ್ತಿದೆ

ಪಟಾನ್ | ಸಾಗರ್ಪುರ್



## ಬಿಹಾರ



ಸಿಕ್ಕಿ ಹುಲ್ಲಿನಿಂದ ಮಾಡುವ ಆಟಿಕೆಗಳು ವಿಶೇಷವಾಗಿ ಗುರುತಿಸಿಕೊಂಡಿವೆ

ದರ್ಭಾಂಗ | ಸಿಕ್ಕಿ



## ತೆಲಂಗಾಣ

ಮೃದುವಾದ ಮರದಿಂದ ಪ್ರಾಣಿಗಳು ಮತ್ತು ಪಕ್ಷಿಗಳ ಆಟಿಕೆಗಳನ್ನು ನಿರ್ಮಲ್ ನಲ್ಲಿ ಮಾಡಲಾಗುತ್ತಿದ್ದು, 400 ವರ್ಷಗಳ ಶ್ರೀಮಂತ ಪರಂಪರೆಯನ್ನು ಹೊಂದಿದೆ.

ನಿರ್ಮಲ್



## ಲಡಾಖ್



ಕೇಂದ್ರಾಡಳಿತ ಪ್ರದೇಶದಲ್ಲಿನ ಆಟಿಕೆಯ ಕ್ಲಸ್ಟರ್‌ನೊಂದಿಗೆ, ಸರ್ಕಾರ ಸ್ಥಳೀಯ ಆಟಿಕೆಗಳಿಗೆ ಜಾಗತಿಕ ಪರಿಚಯ ಮಾಡಿಸಲು ಸಜ್ಜಾಗಿದೆ.

ಲಡಾಖ್



## ಪುದುಚೇರಿ

ಪುದುಚೇರಿಯ ಪ್ರಕೃತಿ ಸ್ನೇಹಿಯಾದ ಆಟಿಕೆಗಳು ಜಾಗತಿಕ ಜನಪ್ರಿಯತೆ ಪಡೆಯಲು ಸಜ್ಜಾಗಿವೆ. ಇಲ್ಲಿನ ಆಟಿಕೆ ಕೈಗಾರಿಕೆಗಳು ಸಾಂಪ್ರದಾಯಿಕವಾಗಿ ಮಣ್ಣನ್ನು ಪ್ರಾಥಮಿಕ ಸಾಮಗ್ರಿಯಾಗಿ ಬಳಸುತ್ತವೆ.

ಪುದುಚೇರಿ



## ಹಿಮಾಚಲ ಪ್ರದೇಶ

ಜನಪ್ರಿಯ ಪ್ರವಾಸಿ ತಾಣ, ಹಿಮಾಚಲ ಪ್ರದೇಶದ ಆಟಿಕೆಗಳಿಗೆ ಜಾಗತಿಕ ಖ್ಯಾತಿಯೂ ಇದೆ.

ಶಿಮ್ಲಾ



## ತ್ರಿಪುರಾ

ಬಿದಿರಿನಿಂದ ಮಾಡುವ ಆಟಿಕೆಗಳು ತ್ರಿಪುರಾದ ವಿಶೇಷತೆಯಾಗಿದೆ.

ಅಗರ್ತಲಾ



## ರಾಜಸ್ಥಾನ



ರಾಜಸ್ಥಾನದ ಲ್ಯಾಕ್ ಆಟಿಕೆಗಳು ಮತ್ತು ಬೊಂಬೆಗಳು ವಿಶ್ವದಾದ್ಯಂತ ಪ್ರಸಿದ್ಧವಾಗಿವೆ. ಅವುಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಗಮನ ಹರಿಸಲಾಗಿದೆ.

ಚಿತ್ತೋರಗಢ | ಉದಯ್ ಪುರ | ಕಟ್‌ಪುತಲಿ ನಗರ್





## ನಾಗಾಲ್ಯಾಂಡ್

ಸಾಂಸ್ಕೃತಿಕವಾಗಿ ಶ್ರೀಮಂತವಾದ ನಾಗಾಲ್ಯಾಂಡ್ ಆಟಿಕೆ ತಯಾರಿಕೆಯೊಂದಿಗೆ ಹೊಸ ಗಾಥೆ ಬರೆಯುತ್ತಿದೆ.

ನಾಗಾಲ್ಯಾಂಡ್



## ಜಾರ್ಖಂಡ್

ಜಾರ್ಖಂಡ್‌ನ ಮರದ ಮತ್ತು ಮಣ್ಣಿನ ಆಟಿಕೆಗಳು ಜಾಗತಿಕ ಆಕರ್ಷಣೆಗೆ ಸಿದ್ಧವಾಗಿವೆ.

ಧನ್‌ಬಾದ್



## ಕರ್ನಾಟಕ



ಚನ್ನಪಟ್ಟಣ ಭಾರತದ ಪ್ರಥಮ ಆಟಿಕೆ ಕ್ಲಸ್ಟರ್. ಇಲ್ಲಿನ ಆಟಿಕೆಗಳು ಎಲ್ಲೆಡೆ ಹೆಸರುವಾಸಿಯಾಗಿವೆ

ಚನ್ನಪಟ್ಟಣ | ಕಿನ್ನಾಳ



## ಕೇರಳ

ಕೇರಳದ ವಾಣಿಜ್ಯ ರಾಜಧಾನಿಯೆಂದು ಹೆಸರಾಗಿರುವ ಎರ್ನಾಕುಲಂ ಈಗ ಆಟಿಕೆ ತಯಾರಿಕೆಯ ತಾಣವಾಗಿಯೂ ಹೆಸರಾಗಿದೆ.

ಎರ್ನಾಕುಲಂ



## ಒಡಿಶಾ

ಮಯೂರ್ ಭಂಜ್ ಕಂಚು ಮತ್ತು ಲೋಹದ ಕರಕುಶಲ ವಸ್ತುಗಳಿಗೆ ಹೆಸರಾಗಿದೆ. ಇದನ್ನು ಈಗ ಆಟಿಕೆಯ ತಾಣವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಮಯೂರ್ ಭಂಜ್



## ಸಿಕ್ಕಿಂ



60 ವರ್ಷಗಳಿಗೂ ಹೆಚ್ಚು ಕಾಲದಿಂದ ಮೃದು ಆಟಿಕೆಗಳ ಸಂಪ್ರದಾಯ ಹೊಂದಿರುವ ಸಿಕ್ಕಿಂ, ವಿಶ್ವದ ಗಮನ ಸೆಳೆಯಲು ಸಜ್ಜಾಗಿದೆ.

## ಮಹಾರಾಷ್ಟ್ರ

ಸಾವಂತ್ ವಾಡಿ



ವಲಯದ ಮರದ ಆಟಿಕೆಗಳು ಜನಪ್ರಿಯವಾಗಿವೆ. ಆಟಿಕೆ ಕ್ಲಸ್ಟರ್ ನೊಂದಿಗೆ, ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ.

## ಅಸ್ಸಾಂ



ಅಸ್ಸಾಂ ಟೆಡ್ಡಿ ಬೇರ್ ಉತ್ಪಾದನಾ ತಾಣವಾಗಿದೆ. ಆಟಿಕೆ ಕ್ಲಸ್ಟರ್ ನೊಂದಿಗೆ, ಕೈಗಾರಿಕೆ ಹೊಸ ಅಸ್ಮಿತೆ ಪಡೆಯಲಿದೆ.

## ತಮಿಳುನಾಡು

ತಂಜಾವೂರು



ತಂಜಾವೂರು ಬೊಂಬೆಗಳು ನರ್ತಿಸುವ ಬೊಂಬೆ ಎಂದೇ ಖ್ಯಾತವಾಗಿದ್ದು, ಮಕ್ಕಳು ಮತ್ತು ವಯಸ್ಕರಿಗೆ ಅಚ್ಚುಮೆಚ್ಚು.



# ಸರ್ಕಾರದ ಉಪಕ್ರಮಗಳು

- ವಾಣಿಜ್ಯ ಸಚಿವಾಲಯ ಹಾಗೂ ಕೈಗಾರಿಕೆ ಮತ್ತು ಆಂತರಿಕ ವಾಣಿಜ್ಯ ಉತ್ತೇಜನ ಇಲಾಖೆಯ ದತ್ತಾಂಶದ ಪ್ರಕಾರ, ಭಾರತದಲ್ಲಿನ 400 ಎಂ.ಎಸ್.ಎಂ.ಇ.ಗಳು ಆಟಿಕೆ ತಯಾರಿಕೆಯಲ್ಲಿ ತೊಡಗಿಕೊಂಡಿವೆ. ಈ ಪೈಕಿ ಶೇ.75 ಸೂಕ್ಷ್ಮ, ಶೇ.22 ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಾಗಿದ್ದರೆ, ಶೇ.3ರಷ್ಟು ಬೃಹತ್ ಘಟಕಗಳಿವೆ.

- ಸರ್ಕಾರ ಎರಡೂ ಬದಿಯ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಮೊದಲನೆಯದು, ಸ್ಥಳೀಯ ಆಟಿಕೆ ಕೈಗಾರಿಕೆಯ ಸುಧಾರಣೆ ಮತ್ತು ಎರಡನೆಯದು, ಅವುಗಳಿಗೆ ಉತ್ತಮ ಮಾರುಕಟ್ಟೆಯನ್ನು ಒದಗಿಸುವುದು ಮತ್ತು ಆ ಮೂಲಕ ಅವರು ಭಾರತೀಯ ಮಾರುಕಟ್ಟೆಯಲ್ಲಿನ ವಿದೇಶೀ ಆಟಿಕೆಗಳ ವಿರುದ್ಧ ಸ್ಪರ್ಧಿಸುವಂತೆ ಮಾಡುವುದು. ಜನವರಿ - ಫೆಬ್ರವರಿಯಲ್ಲಿ, ಟಾಯ್ ಕಥಾನ್ ಅನ್ನು ಮೊದಲ ಬಾರಿಗೆ ಭಾರತದಲ್ಲಿ ಆಯೋಜಿಸಲಾಗಿತ್ತು. ಇದರ ತರುವಾಯ, ದೇಶದ ಪ್ರಥಮ ಆಟಿಕೆ ಮೇಳವನ್ನೂ ಫೆಬ್ರವರಿ 27ರಿಂದ ಮಾರ್ಚ್ 4ರವರೆಗೆ ಹಮ್ಮಿಕೊಳ್ಳಲಾಗಿತ್ತು.

- ಈ ಆಟಿಕೆಗಳು ಮಕ್ಕಳ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂಬುದನ್ನು ಖಾತ್ರಿಪಡಿಸಲು, ಭಾರತೀಯ ಮಾನಕ ಸಂಸ್ಥೆ (ಬಿ.ಐ.ಎಸ್.)ಪ್ರಮಾಣೀಕರಣ ಕಡ್ಡಾಯಗೊಳಿಸಲಾಗಿದೆ. ಕರಕುಶಲ ಮತ್ತು ಭಾರತದಲ್ಲಿ ತಯಾರಿಸಲಾದ ಜಿಐ ಆಟಿಕೆಗಳಿಗೆ ಈ ಪ್ರಮಾಣೀಕರಣದಿಂದ ವಿನಾಯಿತಿ ನೀಡಲಾಗಿದೆ.

- ವಿದೇಶೀ ಆಟಿಕೆಗಳ ಮೇಲಿನ ಆಮದು ಸುಂಕವನ್ನು ಹೆಚ್ಚಿಸಲಾಗಿದೆ. ಇದು ಸ್ಥಳೀಯವಾಗಿ ಉತ್ಪಾದಿಸಲಾಗುವ ಆಟಿಕೆಗಳಿಗೆ ರಕ್ಷಣೆ ನೀಡುತ್ತದೆ.



ಆಟಿಕೆ ಉದ್ಯಮಕ್ಕೆ ಅನಾರೋಗ್ಯಕರವಷ್ಟೇ ಅಲ್ಲ, ಮಕ್ಕಳ ಆರೋಗ್ಯಕ್ಕೂ ಹಾನಿಕಾರಕವಾಗಿವೆ.

ಸುಮಾರು ಶೇ.67ರಷ್ಟು ಆಮದು ಆಟಿಕೆಗಳು ಭಾರತೀಯ ಗುಣಮಟ್ಟ ಮಂಡಳಿ (ಕ್ಯು.ಸಿ.ಐ.) ಸಮೀಕ್ಷೆಯಲ್ಲಿ ವಿಫಲವಾಗಿವೆ. ಇದರ ಜೊತೆಗೆ, ಭಾರತೀಯ ಮಾರುಕಟ್ಟೆಗಳಲ್ಲಿ ಶೇ.85ರಷ್ಟು ಆಮದು ಆಟಿಕೆಗಳಾಗಿದ್ದು, ಬಹುತೇಕ ನೆರೆಯ ರಾಷ್ಟ್ರಗಳಿಂದ ಬರುತ್ತವೆ. ವರದಿಯ ಪ್ರಕಾರ ಶೇ.45ರಷ್ಟು ಮೃದು ಆಟಿಕೆಗಳು (ಸಾಫ್ಟ್ ಟಾಯ್) ಕ್ಯಾನ್ಸರ್‌ಗೆ ಕಾರಣವಾಗುವ ಥಾಲೇಟ್‌ಗಳ ಅಂಗೀಕಾರಾರ್ಹ ಮಟ್ಟದ ಪರೀಕ್ಷೆಯಲ್ಲಿ ವಿಫಲವಾಗಿವೆ. ಆಮದು ಆಟಿಕೆಗಳು ಭಾರತದ ಲೋಹಗಳಾದ ಆರ್ಸೆನಿಕ್ ಮತ್ತು ಸೀಸವನ್ನು ಹೊಂದಿದ್ದು, ಇವು ವಿಷಯುಕ್ತ ಎಂದು ವರದಿ ಹೇಳಿದೆ. ಇಂಥ ಸನ್ನಿವೇಶದಲ್ಲಿ, ಸಾಂಪ್ರದಾಯಿಕ ಆಟಿಕೆಗಳು ಕೇವಲ ಸಮಾಜ ಮತ್ತು ಸಂಸ್ಕೃತಿಯ ರಕ್ಷಣೆಗಷ್ಟೇ ಅಲ್ಲ, ಉತ್ತಮ ಆರೋಗ್ಯಕರ ಪರಿಸರ ಮತ್ತು ಮಕ್ಕಳಿಗೂ ಅತ್ಯಂತ ಮಹತ್ವದ್ದಾಗುತ್ತವೆ.

## ಜಾಗತಿಕ ಮಾರುಕಟ್ಟೆಗೆ ಲಗ್ಗೆ ಇಡಲು ಸಿದ್ಧವಾದ ಭಾರತೀಯ ಆಟಿಕೆಗಳು

ಈ ದಿನಾಂಕದವರೆಗೆ, ಜಾಗತಿಕ ಆಟಿಕೆ ಕೈಗಾರಿಕೆ 7 ಲಕ್ಷ ಕೋಟಿ ರೂ. ಮೌಲ್ಯದ್ದಾಗಿದೆ, ಆದರೆ ಭಾರತದ ಪಾಲು ಇದರಲ್ಲಿ ಕೇವಲ ಶೇ.05ರಷ್ಟು. 2025ರ ಹೊತ್ತಿಗೆ, ಮಾರುಕಟ್ಟೆ 9.5 ಲಕ್ಷ ಕೋಟಿ ರೂ. ತಲುಪುವ ನಿರೀಕ್ಷೆ ಇದೆ. ಸುಮಾರು ಶೇ.85ರಷ್ಟು ಭಾರತೀಯ ಆಟಿಕೆಯ ಬೇಡಿಕೆ ಆಮದಿನ ಮೇಲೆ ಅವಲಂಬಿತವಾಗಿದ್ದು, ಸ್ಥಳೀಯ ಕೊಡುಗೆ ಕೇವಲ ಶೇ.15ರಷ್ಟು. ಜಾಗತಿಕವಾಗಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗವನ್ನು ಭಾರತ ಹೊಂದಿರುವ ಕಾರಣ ಸ್ಥಳೀಯ ಉತ್ಪನ್ನಗಳ ಕೊಡುಗೆ ಮಹತ್ವದ್ದಾಗಿದೆ. ಈ ಜನಸಂಖ್ಯೆಯು ಸ್ಥಳೀಯ ತಯಾರಕರಿಗೆ ಕೇವಲ ಸವಾಲಷ್ಟೇ ಅಲ್ಲ ಅವಕಾಶವೂ ಆಗಿದೆ.

ಭಾರತೀಯ ಆಟಿಕೆ ತಯಾರಕರಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪಾಲನ್ನು 2800 ಕೋಟಿ ರೂ.ಗೆ ತೆಗೆದುಕೊಂಡು




ಹೋಗುವ ಸಾಮರ್ಥ್ಯವಿದೆ. ಭಾರತೀಯ ಆಟಿಕೆಗಳನ್ನು ಜಾಗತಿಕ ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು, ಸ್ವಾವಲಂಬಿ ಭಾರತದೊಂದಿಗೆ ಸ್ಥಳೀಯತೆಗೆ ಧ್ವನಿಯಾಗಿ ಮಂತ್ರವೂ ಸೇರಿದರೆ ಮಹತ್ವದ ಪಾತ್ರ ನಿರ್ವಹಬಹುದಾಗಿದೆ.

### ಭಾರತದ ಪ್ರಥಮ ಆಟಿಕೆ ಮೇಳ ಮತ್ತು ಟಾಯ್ ಕಥಾನ್

ಭಾರತದಲ್ಲಿ ಆಟಿಕೆ ಉದ್ಯಮದ ಪುನಶ್ಚೇತನವು ಹಲವಾರು ಕಾರಣಗಳಿಂದಾಗಿ ನಿರ್ಣಾಯಕವಾಗಿದೆ. ಆಟಿಕೆಗಳ ಮಹತ್ವವನ್ನು ಅರಿತು ಸರ್ಕಾರ, ಮೊದಲ ಬಾರಿಗೆ ಚಿತ್ರಣವನ್ನೇ ಸುಧಾರಿಸಲು ಕ್ರಮ ಕೈಗೊಂಡಿವೆ. ಆಟಿಕೆ ಕಲಾವಿದರು ಮತ್ತು ಕೈಗಾರಿಕೆಗಳಿಗೆ ತಮ್ಮ ಪ್ರತಿಭೆ ಮತ್ತು ಕಲೆಯನ್ನು ಪ್ರದರ್ಶಿಸಲು ಒಂದು ವೇದಿಕೆ ಕಲ್ಪಿಸುವುದೂ ಸೇರಿದಂತೆ ಸರ್ಕಾರ, ಹಲವಾರು ಕ್ರಾಂತಿಕಾರಿ ಕ್ರಮಗಳನ್ನು ಕೈಗೊಂಡಿದೆ.

ಭಾರತಕ್ಕೆ ಆಟಿಕೆಗಳ ಜಾಗತಿಕ ತಾಣವಾಗಿ ಅಭಿವೃದ್ಧಿ ಹೊಂದಲು ನೆರವಾಗುವ ಉದ್ದೇಶದಿಂದ, ಆಟಿಕೆ ಮೇಳವನ್ನು ಆಯೋಜಿಸಲಾಗಿದೆ. ಇದು ಖರೀದಿದಾರರು, ಮಾರಾಟಗಾರರು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ವಿನ್ಯಾಸಕರು ಸೇರಿದಂತೆ ಎಲ್ಲಾ ಬಾಧ್ಯಸ್ಥರನ್ನು ಒಂದೇ ವೇದಿಕೆಯಲ್ಲಿ ಸುಸ್ಥಿರ ನಂಟು ಬೆಸೆಯಲು ಮತ್ತು ಉದ್ಯಮದ ಒಟ್ಟಾರೆ ಅಭಿವೃದ್ಧಿಗೆ ಸಂವಾದವನ್ನು ಉತ್ತೇಜಿಸಲು ಒಗ್ಗೂಡಿಸಿತು. ಉದ್ಯಮವನ್ನು ಜಾಗತಿಕ ಮಾರುಕಟ್ಟೆಗೆ ಅಣಿಗೊಳಿಸುವುದೂ ಇದರ ಉದ್ದೇಶವಾಗಿತ್ತು. ಫೆಬ್ರವರಿ 27 ಮತ್ತು ಮಾರ್ಚ್ 4 ರ ನಡುವೆ ಆಯೋಜಿಸಲಾಗಿದ್ದ ಭಾರತದ ಮೊದಲ ಆಟಿಕೆ ಮೇಳದಲ್ಲಿ 1,200ಕ್ಕೂ ಹೆಚ್ಚು ಪ್ರದರ್ಶಕರು ಭಾಗಿಯಾಗಿದ್ದರು. ಆರಂಭದಲ್ಲಿ, ಆಟಿಕೆ ಮೇಳ ಮಾರ್ಚ್ 2 ರವರೆಗೆ ನಿಗದಿಯಾಗಿತ್ತು, ಆದಾಗ್ಯೂ, ಜನರ ಬೇಡಿಕೆಯ ಮೇರೆಗೆ ಇದನ್ನು ಎರಡು ದಿನಗಳವರೆಗೆ ವಿಸ್ತರಿಸಲಾಯಿತು. 2021ರಲ್ಲಿ ಸಹ ಸರ್ಕಾರವು ಟಾಯ್ ಕಥಾನ್ ಅನ್ನು ಆಯೋಜಿಸಿತ್ತು.

ಜನವರಿ 5ರಿಂದ ಫೆಬ್ರವರಿ 25ರವರೆಗೆ ನಡೆದ, ಟಾಯ್ ಕಥಾನ್ ಭಾರತೀಯ ಮೌಲ್ಯ ವ್ಯವಸ್ಥೆಯನ್ನು ಆಧರಿಸಿ ನವೀನ ಆಟಿಕೆಗಳ ಪರಿಕಲ್ಪನೆ ರೂಪಿಸುವ ಗುರಿಯನ್ನು ಹೊಂದಿತ್ತು, ಇದು

**ಆಟಿಕೆ ಮಕ್ಕಳನ್ನು ಅಮಿತ ಸಂತೋಷದ ಜಗತ್ತಿಗೆ ಕರೆದೊಯ್ಯುತ್ತದೆ... ಭಾರತೀಯ ಕ್ರೀಡೆ ಮತ್ತು ಆಟಿಕೆಗಳ ವಿಶೇಷತೆಯೆಂದರೆ ಅವುಗಳು ಜ್ಞಾನ, ವಿಜ್ಞಾನ, ಮನರಂಜನೆ ಮತ್ತು ಮನೋವಿಜ್ಞಾನವನ್ನು ಒಳಗೊಂಡಿರುತ್ತವೆ.**

**ಪ್ರಧಾನಮಂತ್ರಿ ನರೇಂದ್ರ ಮೋದಿ**



ಮಕ್ಕಳಲ್ಲಿ ಸಕಾರಾತ್ಮಕ ನಡವಳಿಕೆ ಮತ್ತು ಉತ್ತಮ ಮೌಲ್ಯವನ್ನು ಬೆಳೆಸುತ್ತವೆ. ಈ ಟಾಯ್ ಕಥನ್ ಗಾಗಿ 12 ಲಕ್ಷಕ್ಕೂ ಹೆಚ್ಚು ಯುವಕರು, ಶಿಕ್ಷಕರು ಮತ್ತು ತಜ್ಞರು ನೋಂದಾಯಿಸಿಕೊಂಡಿದ್ದರು. 7,000ಕ್ಕೂ ಹೆಚ್ಚು ಹೊಸ ವಿಚಾರಗಳನ್ನು ಇಲ್ಲಿ ಚರ್ಚಿಸಲಾಯಿತು.

ಸ್ವಾವಲಂಬಿಯಾಗುವ ಹಾದಿಯಲ್ಲಿ ದಾಪುಗಾಲು ಇಡಲು, ಶಿಕ್ಷಣ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಜವಳಿ ಸಚಿವಾಲಯ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಸೂಕ್ಷ್ಮ-ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ (ಎಂಎಸ್ಎಂಇ), ವಾರ್ತಾ ಮತ್ತು ಪ್ರಸಾರ ಸಚಿವಾಲಯ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಸಂಯುಕ್ತವಾಗಿ ಟಾಯ್ ಕಥಾನ್- 2021 ಅನ್ನು ಆಯೋಜಿಸಿತ್ತು.

ಇದು ಒಂದು ವಿಶೇಷ ರೀತಿಯ ಹ್ಯಾಕಥಾನ್ ಆಗಿತ್ತು, ಇಲ್ಲಿ ಶಾಲೆಗಳು ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ವಿನ್ಯಾಸ ತಜ್ಞರು, ಆಟಿಕೆ ತಜ್ಞರು ಮತ್ತು ನವೋದ್ಯಮಗಳು ಒಟ್ಟಾಗಿ ಭಾರತೀಯ ಮೌಲ್ಯ ವ್ಯವಸ್ಥೆ, ಸಂಸ್ಕೃತಿ, ನೀತಿಗಳು, ಸ್ಥಳೀಯ ಜನಪದ ಮತ್ತು ವೀರರನ್ನು ಆಧರಿಸಿದ ಆಟಿಕೆಗಳು ಮತ್ತು ಆಟಗಳನ್ನು ಅಭಿವೃದ್ಧಿಪಡಿಸುವ ವಿಚಾರಗಳನ್ನು ಚರ್ಚಿಸಲು ಒಗ್ಗೂಡಿದ್ದರು.

ಮೇಳವು ಪ್ರಪ್ರಥಮ ಸ್ವರೂಪದ್ದಾಗಿತ್ತು, ಇದು ಎಲ್ಲಾ ವಯಸ್ಸಿನವರಲ್ಲೂ ಕಲಿಕೆಯನ್ನು ಸಂತೋಷದಾಯಕವಾಗಿಸುವಲ್ಲಿ ಆಟಿಕೆಗಳ ಸಾಮರ್ಥ್ಯವನ್ನು ಉತ್ತೇಜಿಸುತ್ತದೆ. ಈ ಮೇಳವು ಎಲೆಕ್ಟ್ರಾನಿಕ್ ಆಟಿಕೆಗಳೊಂದಿಗೆ ವಿನೋದ, ವಿಜ್ಞಾನ, ಆಧುನಿಕ ಮತ್ತು ಸ್ಥಳೀಯ ಶೈಕ್ಷಣಿಕ ಆಟಿಕೆಗಳನ್ನೂ ಬಿಂಬಿಸಿತು. ಈ ಆಟಿಕೆಗಳು ಕೇವಲ ವೈವಿಧ್ಯವನ್ನಷ್ಟೇ ನೀಡದೆ, ಜಾಗತಿಕ ಉತ್ಪನ್ನಗಳೊಂದಿಗೆ ಪೂರ್ಣಗೊಳಿಸುವ ಸಾಮರ್ಥ್ಯವನ್ನೂ ಹೊಂದಿವೆ ಎಂಬುದನ್ನು ಖಚಿತಪಡಿಸಲು, ಸೂಕ್ತ ಪ್ರತಿಭಾ ಪ್ರದರ್ಶನ ಮಾಡಿತು. ಕಲಿಕೆಯನ್ನು ಹೇಗೆ ಸುಲಭ ಮತ್ತು ವಿನೋದಮಯವಾಗಿಸಬಹುದು ಎಂಬುದರ ಕುರಿತು ತಜ್ಞರು ಸಮಾಲೋಚಿಸಿದರು. ವಿನೋದದ ಕಲಿಕೆಯನ್ನು ಉತ್ತೇಜಿಸಲು, ಚರ್ಚೆಗಳನ್ನು ನಡೆಸಲಾಯಿತು. ಇದರಲ್ಲಿ ಹೂಡಿಕೆದಾರರು, ಆಮದುದಾರರು, ಸ್ಥಳೀಯ ಕೈಗಾರಿಕೋದ್ಯಮಿಗಳು ಮತ್ತು ಎಂ.ಎಸ್.ಎಂ,ಇ.ಗಳೂ ಸೇರಿದ್ದವು. 1,000 ಕ್ಕೂ ಹೆಚ್ಚು ಭಾರತೀಯ ಕಂಪನಿಗಳು ಇದರಲ್ಲಿ ಭಾಗವಹಿಸಿದ್ದವು. ಅವರು ಆಟಿಕೆ ತಯಾರಿಕೆಯ ಭಾರತದ ಪ್ರಾಚೀನ ಪ್ರತಿಭೆಯನ್ನು ಜಗತ್ತಿನ ಮುಂದೆ ಪ್ರಸ್ತುತಪಡಿಸಿದರು.

### ಆಟಿಕೆಗಳಲ್ಲಿ ಬೌದ್ಧಿಕ ಕಲ್ಪನೆ

ಆಟಿಕೆಗಳು ಮಕ್ಕಳ ಆಶೋತ್ತರಗಳಿಗೆ ರೆಕ್ಕೆ ಮೂಡಿಸುತ್ತವೆ. ಮನರಂಜನೆಯ ಜೊತೆಗೆ ಆಟಿಕೆಗಳು ಮನಸ್ಸನ್ನು ಚುರುಕುಗೊಳಿಸಿ, ಮನೋಭಾವ ರೂಪಿಸುತ್ತವೆ. ಪ್ರಧಾನ




# ಡಿಜಿಟಲ್ ಗೇಮ್‌ಗಳಲ್ಲಿ ಈಗ ಸ್ವಾವಲಂಬನೆಯತ್ತ ಗಮನ

ಪರೀಕ್ಷಾ ಪೆ ಚರ್ಚಾ ವೇಳೆ ತಾಯಿಯೊಬ್ಬರು ತಮ್ಮ ಪುತ್ರ ಡಿಜಿಟಲ್ ಗೇಮ್ ದಾಸನಾಗಿದ್ದಾನೆ ಏನು ಮಾಡುವುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದರು. ಆಗ ಪ್ರಧಾನಮಂತ್ರಿಯವರು ಕೇಳಿದರು, ನೀವು ಪಬ್ ಜಿ ಬಗ್ಗೆ ಕೇಳುತ್ತಿದ್ದೀರಾ? "ಇದುವೇ ಸಮಸ್ಯೆ ಮತ್ತು ಪರಿಹಾರ. ನಾವು ಮಕ್ಕಳನ್ನು ತಂತ್ರಜ್ಞಾನದಿಂದ ದೂರ ಇಡಲು ಸಾಧ್ಯವಿಲ್ಲ. ಹೀಗಾಗಿ, ಮಕ್ಕಳು ಆಟದ - ತಾಣಗಳಿಂದ ಆಟದ ಮೈದಾನಕ್ಕೆ ಹೋಗುವುದು ಕ್ಷೇಮ" ಎಂದು ಹೇಳಿದ್ದರೆಂಬುದನ್ನು ನಾವು ಸ್ಮರಿಸಬಹುದು.

ಇದು ಡಿಜಿಟಲ್ ಗೇಮ್ಸ್ ಮಾರುಕಟ್ಟೆಯನ್ನು ಮತ್ತು ವ್ಯಸನವನ್ನು ಅರ್ಥ ಮಾಡಿಕೊಳ್ಳಲು ಒಂದು ಉತ್ತಮ ಉದಾಹರಣೆಯಾಗಿದೆ. ಆದಾಗ್ಯೂ, ದುರಂತವೆಂದರೆ, ಶೇ.98 ರಿಂದ 99ರಷ್ಟು ಡಿಜಿಟಲ್ ಮತ್ತು ವರ್ಚುವಲ್ ರಿಯಾಲಿಟಿ ಗೇಮ್ ಗಳು ವಿದೇಶಗಳಿಂದ ಬರುತ್ತಿವೆ. ಹೀಗಾಗಿ ಭಾರತವು ಆಟಿಕೆ ಉದ್ದಿಮೆಗಳೊಂದಿಗೆ ಡಿಜಿಟಲ್ ಗೇಮ್ ವಲಯದಲ್ಲಿ ಭಾರತ ಸ್ವಾವಲಂಬನೆಯನ್ನು ಸಾಧಿಸಲು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಅದರ ಅಸ್ತಿತ್ವ ಸ್ಥಾಪಿಸಲು ಶ್ರಮಿಸುತ್ತಿದೆ. ಪ್ರಧಾನಮಂತ್ರಿಯವರ ಉಪಕ್ರಮದ ಫಲವಾಗಿ 2020ರ ಫೆಬ್ರವರಿಯಲ್ಲಿ ಒಂದು ಸಮಿತಿ ರಚಿಸಲಾಯಿತು. ಡಾ. ಪರಾಗ್ ಮನ್ಕೀಕರ್, ಡಾ. ಉನ್ನತ್ ಶರ್ಮಾ, ಪಂಕಜ್ ಸಪ್ಕಲ್, ಡಾ. ಆರ್ತಿ ಪ್ರಕಾಶ್ ಮತ್ತು ಅವಿ ದಾಸ್ ಈ ತಜ್ಞರ ಸಮಿತಿಯ ಭಾಗವಾಗಿದ್ದರು.

ಸಮಿತಿಯ ಒಬ್ಬ ಸದಸ್ಯರಾದ ಡಾ. ಪರಾಗ್ "ನಮ್ಮ ಹೊಸ ಡಿಜಿಟಲ್ ಗೇಮ್‌ಗಳು ಮಕ್ಕಳಿಗೆ ಭಾರತದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕಲಿಯಲು ನೆರವಾಗುತ್ತವೆ. ನಾವು ಕ್ಯಾಂಡಿ ಕ್ರಷ್ ಸಗಾದಂತಹ ಆಟಗಳ ವಿರುದ್ಧ ಜಾಗತಿಕ ಮಾರುಕಟ್ಟೆಯಲ್ಲಿ ನಮ್ಮ ಹಿಡಿತ ಸಾಧಿಸಬಹುದಾಗಿದೆ.." ಎಂದು ತಿಳಿಸಿದರು.

ಅದೇ ರೀತಿ, ಈ ಹೊತ್ತಿನ ಅವಶ್ಯಕತೆಯಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ ಡಾ. ಉನ್ನತ್ ಪಂಡಿತ್, ಈ ಕ್ಷೇತ್ರದಲ್ಲಿ ತ್ವರಿತವಾಗಿ ಶ್ರಮಿಸುವ ಅಗತ್ಯವಿದೆ ಎಂದು ಹೇಳಿದರು. ಅವರು "ಹೊಸ ಶೋಧದ ಸಹಾಯದಿಂದ ನಾವು ವಿವಿಧ ಕ್ಷೇತ್ರಗಳಲ್ಲಿ ಸ್ವಾವಲಂಬಿಗಳಾಗುವ ಬಗ್ಗೆ ಮಾತನಾಡುತ್ತಿರುವ ರೀತಿಯಲ್ಲೇ, ಡಿಜಿಟಲ್ ಆಟಗಳತ್ತಲೂ ಇದೇ ರೀತಿಯ ಗಮನ ಹರಿಸಬೇಕು." ಎಂದು ತಿಳಿಸಿದರು. ■

## ಇದು ಏಕೆ ಅಗತ್ಯ?

**ಭಾರತದಲ್ಲಿ ಡಿಜಿಟಲ್ ಗೇಮ್ ಮಾರುಕಟ್ಟೆಯ ಬಗ್ಗೆ ಒಂದು ನೋಟ**

ಒಟ್ಟು ಬಳಕೆದಾರರು **26.36** ಕೋಟಿ

ಒಟ್ಟು ಆದಾಯ **81.78** ಕೋಟಿ

## ಮೂರು ಸಾಧ್ಯತೆಗಳ ಬಗ್ಗೆ ಸರ್ಕಾರದ ಗಮನ...

- **ಪೌರಾಣಿಕ ಕತೆಗಳನ್ನಾಧರಿಸಿದ ಆಟಗಳು:** ವಿಶ್ವಾದ್ಯಂತ ಆಡಲಾಗುತ್ತಿರುವ ಡಿಜಿಟಲ್ ಆಟಗಳಲ್ಲಿ ಬಹುತೇಕ ಹಿಂಸಾಚಾರದ ಸ್ವರೂಪದ್ದಾಗಿವೆ. ಆಟದಿಂದ ಕಲಿಯುವುದರ ಬದಲಾಗಿ, ಮಕ್ಕಳು ಅದರ ವ್ಯಸನಕ್ಕೆ ತುತ್ತಾಗುತ್ತಿದ್ದಾರೆ. ಭಾರತ ಪಂಚತಂತ್ರ ಸೇರಿದಂತೆ ಹಲವು ಪೌರಾಣಿಕ ಕಥೆಗಳ ದೀರ್ಘ ಸಂಪ್ರದಾಯವನ್ನು ಹೊಂದಿದೆ. ಈ ವಿಷಯದ ಮೇಲೆ ಆಟವಿದ್ದರೆ, ಮಕ್ಕಳು ಹೊಸತನ್ನು ಕಲಿಯಲು ಅವಕಾಶವಾಗುತ್ತದೆ.
- **ನೈತಿಕ ಶಿಕ್ಷಣ ಆಧಾರಿತ ಆಟಗಳು:** ಭಾರತದಂತಹ ರಾಷ್ಟ್ರದಲ್ಲಿ ದೀರ್ಘಕಾಲದ ಸಂಸ್ಕೃತಿ ಮತ್ತು ನಾಗರಿಕತೆಯ ಪರಂಪರೆಯಿದೆ. ಹೀಗಾಗಿ, ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ತುಂಬುವಂತಹ ಡಿಜಿಟಲ್ ಆಟಗಳನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ. ಅಮೆರಿಕ ಮತ್ತು ಯೂರೋಪ್ ಹೀಗೆ ಮಾಡಲು ಆರಂಭಿಸಿವೆ. 500ಕ್ಕೂ ಹೆಚ್ಚು ಶಾಲೆಗಳಲ್ಲಿ ಅಲ್ಲಿನ ಮಕ್ಕಳಿಗೆ ನೈಜ ಬದುಕಿಗೆ ಸಂಬಂಧಿಸಿದ ಆಟಗಳ ಕಾರ್ಯಯೋಜನೆಗಳನ್ನು ನೀಡುತ್ತಿವೆ. ಇದು ಮಕ್ಕಳಿಗೆ ಹೊಸತು ಮತ್ತು ಉತ್ತಮವಾದ್ದನ್ನು ಕಲಿಯಲು ನೆರವಾಗುತ್ತಿದೆ.
- **ವರ್ಚುವಲ್ ರಿಯಾಲಿಟಿ ಆಟಗಳು:** ವಿವೇಕಾನಂದರು, ವೀರ ಸಾವರ್ಕರ್ ಮತ್ತು ಶಿವಾಜಿ ಅವರನ್ನು ವರ್ಚುವಲ್ ರಿಯಾಲಿಟಿ ಆಟಗಳ ಪಾತ್ರಗಳಾಗಿ ಮಾಡಿದರೆ, ಮತ್ತು ನಿಜ ಜೀವನದಲ್ಲಿ ಅವರ ನಡೆಗಳನ್ನು ಈ ಆಟಗಳಲ್ಲಿ ಸೇರಿಸಿದರೆ, ಮಕ್ಕಳು ಅವರ ಬಗ್ಗೆ ತಿಳಿದುಕೊಳ್ಳುತ್ತಾರೆ ಮತ್ತು ಕಲಿಯುತ್ತಾರೆ.

### ಇದು ಹೇಗೆ ಆರಂಭವಾಗುತ್ತದೆ?

- ಭಾರತದಲ್ಲಿ ತಂತ್ರಾಂಶ ಮತ್ತು ಕ್ರೀಡಾ ಉದ್ಯಮಕ್ಕೆ ಸಂಬಂಧಿಸಿದ ಜನರ ಕೌಶಲ್ಯಗಳನ್ನು ಉತ್ತೇಜಿಸುವುದು.
- ಡಿಜಿಟಲ್ ಮತ್ತು ವರ್ಚುವಲ್ ರಿಯಾಲಿಟಿ ಆಟಗಳ ಕ್ಷೇತ್ರದಲ್ಲಿ ನವೋದ್ಯಮಗಳನ್ನು ಉತ್ತೇಜಿಸುವುದರ ಜೊತೆಗೆ ಅವರ ಆರಂಭಿಕ ಶಕ್ತಿ ಮತ್ತು ಇತರ ಅಗತ್ಯ ನೆರವು ಒದಗಿಸುವುದು.
- ಐಐಟಿ ಬಾಂಬೆಯ ಸಹಾಯದಿಂದ ಡಿಜಿಟಲ್ ಆಟಗಳು, ದೃಶ್ಯ ಪರಿಣಾಮಗಳು, ಅನಿಮೇಷನ್ ಮತ್ತು ಕಾಮಿಕ್ಸ್ ಗಾಗಿ ರಾಷ್ಟ್ರೀಯ ಔನ್ನತ್ಯ ಕೇಂದ್ರ ತೆರೆಯಲಾಗುತ್ತಿದೆ.
- ಡಿಜಿಟಲ್ ಕ್ರೀಡಾ ಉದ್ಯಮಕ್ಕಾಗಿ ಮೂಲಸೌಕರ್ಯಗಳನ್ನು ರಚಿಸುವುದು.



# ಏಳು ದಶಕಗಳ ಕಾಲ ನಿರ್ಲಕ್ಷಿಸಲಾದ ಭಾರತೀಯ ಆಟಿಕೆ ಉದ್ಯಮಕ್ಕೆ ಸ್ವಾವಲಂಬಿಯಾಗಲು ಕೂಡಿಬಂತು ಕಾಲ

**2021ರ ಫೆಬ್ರವರಿ 27ರಂದು ದೇಶದ ಪ್ರಥಮ ಆಟಿಕೆ ಮೇಳವನ್ನು ಉದ್ಘಾಟಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಭಾರತದ ಸಮಾಜ ಮತ್ತು ಸಂಸ್ಕೃತಿಯಲ್ಲಿ ಆಟಿಕೆಗಳ ಮಹತ್ವದ ಬಗ್ಗೆ ಮಾತನಾಡಿದರು. ಅವರು ಭಾರತೀಯ ಆಟಿಕೆ ಉದ್ಯಮವನ್ನು ಸ್ವಾವಲಂಬಿಯಾಗಿಸಲು ಕರೆ ನೀಡಿದರು. ಅವರು ತಮ್ಮ ಭಾಷಣದಲ್ಲಿ ಹೇಳಿದ ಅಂಶಗಳು ಇಲ್ಲಿವೆ:**

- ಭಾರತದ ಈ ಪ್ರಥಮ ಆಟಿಕೆ ಮೇಳ, ಕೇವಲ ಒಂದು ವಾಣಿಜ್ಯ ಅಥವಾ ಆರ್ಥಿಕ ಕಾರ್ಯಕ್ರಮವಲ್ಲ. ಈ ಕಾರ್ಯಕ್ರಮ ದೇಶದ ಪುರಾತನ ಸಂಸ್ಕೃತಿ ಮತ್ತು ಕ್ರೀಡಾ ಮನೋಭಾವ ಬಲಪಡಿಸುವ ಕೊಂಡಿಯಾಗಿದೆ.
- ಆಟಿಕೆಗಳೊಂದಿಗಿನ ಭಾರತದ ಸೃಜನಶೀಲ ಸಂಬಂಧವು ಈ ಭೂಪ್ರದೇಶದ ಇತಿಹಾಸದಷ್ಟು ಪುರಾತನವಾದ್ದು. ಸಿಂಧೂ ಕಣಿವೆ, ಮೊಹೆಂಜೊ-ದಾರೊ ಮತ್ತು ಹರಪ್ಪಾ ನಾಗರಿಕತೆಯಲ್ಲಿ ಆಟಿಕೆಗಳ ಬಗ್ಗೆ ಜಗತ್ತು ಸಂಶೋಧನೆ ನಡೆಸಿದೆ. ಪ್ರಾಚೀನ ಕಾಲದಲ್ಲಿ, ಪ್ರಪಂಚದಾದ್ಯಂತದಿಂದ ಪ್ರವಾಸಿಗರು ಭಾರತಕ್ಕೆ ಬಂದಾಗ, ಅವರು ನಮ್ಮ ಕ್ರೀಡೆಗಳನ್ನು ಅವರೊಂದಿಗೆ ತೆಗೆದುಕೊಂಡು ಹೋದರು. ಇಂದು ಜನಪ್ರಿಯವಾಗಿರುವ ಚೆಸ್ ಅನ್ನು ಈ ಹಿಂದೆ ಭಾರತದಲ್ಲಿ 'ಚತುರಂಗ ಅಥವಾ ಚದುರಂಗ' ಎಂದು ಆಡಲಾಗುತ್ತಿತ್ತು.
- ಪರಿಸರ ವಿಜ್ಞಾನ ಮತ್ತು ಮನೋವಿಜ್ಞಾನ ಎರಡಕ್ಕೂ ಉತ್ತಮವಾದ ಆಟಿಕೆಗಳನ್ನು ತಯಾರಿಸಲು ದೇಶದ ಆಟಿಕೆ ತಯಾರಕರಿಗೆ ನಾನು ಮನವಿ ಮಾಡುತ್ತೇನೆ. ಆಟಿಕೆಗಳಲ್ಲಿ ಕಡಿಮೆ ಪ್ಲಾಸ್ಟಿಕ್ ಬಳಸಿ. ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಬಳಸಿ.
- ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಆಟ ಆಧಾರಿತ ಮತ್ತು ಚಟುವಟಿಕೆ ಆಧಾರಿತ ಶಿಕ್ಷಣವನ್ನು ದೊಡ್ಡ ಪ್ರಮಾಣದಲ್ಲಿ ಸಂಯೋಜಿಸುತ್ತದೆ. ಮಕ್ಕಳಲ್ಲಿ ತಾರ್ಕಿಕ ಮತ್ತು ಸೃಜನಶೀಲ ಚಿಂತನೆಯ ಬೆಳವಣಿಗೆಗೆ ವಿಶೇಷ ಗಮನ ನೀಡುವಂತಹ ಶಿಕ್ಷಣ ವ್ಯವಸ್ಥೆಯಾಗಿದೆ.
- ಆಟಿಕೆಗಳ ಕ್ಷೇತ್ರದಲ್ಲಿ, ಭಾರತವು ಸಂಪ್ರದಾಯ ಮತ್ತು ತಂತ್ರಜ್ಞಾನವನ್ನು ಹೊಂದಿದೆ. ಭಾರತವು ಪರಿಕಲ್ಪನೆಗಳು ಮತ್ತು ಸಾಮರ್ಥ್ಯವನ್ನು ಹೊಂದಿದೆ. ನಾವು ಪರಿಸರ ಸ್ನೇಹಿ ಆಟಿಕೆಗಳ ಕಡೆಗೆ ಮತ್ತೆ ಜಗತ್ತನ್ನು ತಿರುಗಿಸಬಹುದು.
- ಭಾರತದ ಆಟಿಕೆ ಪರಂಪರೆ ಮತ್ತು ಕಲಾವಿದರನ್ನು ಏಳು ದಶಕಗಳಿಂದ ನಿರ್ಲಕ್ಷಿಸಲಾಗಿದೆ. ಈ ನಿರ್ಲಕ್ಷ್ಯದಿಂದಾಗಿ, ವಿದೇಶಿ ಆಟಿಕೆಗಳು ಭಾರತೀಯ ಮಾರುಕಟ್ಟೆಗಳಲ್ಲಿ ಮತ್ತು ನಮ್ಮ ಮನೆಗಳಲ್ಲಿ ತುಂಬಿ ಹೋಗಿವೆ.
- ದೇಶಕ್ಕಾಗಿ ಹೋರಾಡಿದ ನಮ್ಮ ಸ್ವಂತ ಮಹಾನುಭಾವರುಗಳಿಗಿಂತ ಭಾರತೀಯ ಮಕ್ಕಳು ವಿದೇಶಿ ನಾಯಕರ ಬಗ್ಗೆ ಹೆಚ್ಚು ತಿಳಿದಿದ್ದಾರೆ.




ವಿದೇಶಿ ಆಟಿಕೆಗಳ ಈ ಪ್ರವಾಹವು ನಮ್ಮ ಸ್ಥಳೀಯ ವ್ಯಾಪಾರವನ್ನು ನಾಶಪಡಿಸಿದೆ.

- ನಮ್ಮ ಆಟಿಕೆಗಳು ಮಕ್ಕಳಿಗೆ ನಮ್ಮ ಮೌಲ್ಯಗಳು ಮತ್ತು ಬೋಧನೆಗಳನ್ನು ತಿಳಿಸುವಂತಿರಬೇಕು ಮತ್ತು ಅವುಗಳ ಗುಣಮಟ್ಟವು ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿರಬೇಕು. ಈ ನಿಟ್ಟಿನಲ್ಲಿ ದೇಶವು ಅನೇಕ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ. ಗೊಂಬೆಗಳ ಗುಣಮಟ್ಟದ ಪರೀಕ್ಷೆಯನ್ನು ಕಳೆದ ವರ್ಷದಿಂದ ಕಡ್ಡಾಯಗೊಳಿಸಲಾಗಿದೆ. ಆಮದು ಮಾಡಿಕೊಂಡ ಆಟಿಕೆಗಳ ಪ್ರತಿಯೊಂದು ಬ್ಯಾಚ್‌ನಲ್ಲೂ ಮಾದರಿ ಪರೀಕ್ಷೆಯನ್ನು ಅನುಮತಿಸಲಾಗಿದೆ.
- ಭಾರತವು ಈಗ ಆಟಿಕೆ ಉದ್ಯಮವನ್ನು 24 ಪ್ರಮುಖ ಕ್ಷೇತ್ರಗಳಲ್ಲಿ ಶ್ರೇಣೀಕರಿಸಿದೆ. ರಾಷ್ಟ್ರೀಯ ಆಟಿಕೆ ಕ್ರಿಯಾ ಯೋಜನೆಯನ್ನು ಸಹ ಸಿದ್ಧಪಡಿಸಲಾಗಿದೆ. ಆಟಿಕೆ ಉದ್ಯಮವನ್ನು ಸ್ಪರ್ಧಾತ್ಮಕವಾಗಿಸಲು ಮತ್ತು ಆಟಿಕೆಗಳಲ್ಲಿ ಭಾರತ ಸ್ವಾವಲಂಬಿಯಾಗಲು ಮತ್ತು ಭಾರತದ ಆಟಿಕೆಗಳನ್ನು ಜಗತ್ತಿಗೆ ಕೊಂಡೊಯ್ಯಲು 15 ಸಚಿವಾಲಯಗಳು ಮತ್ತು ಇಲಾಖೆಗಳನ್ನು ಇದು ಒಳಗೊಂಡಿದೆ.

ಪ್ರಧಾನಮಂತ್ರಿಯವರ ಪೂರ್ಣ ಭಾಷಣ ಆಲಿಸಲು ಕ್ಯು.ಆರ್. ಕೋಡ್ ಸ್ಕ್ಯಾನ್ ಮಾಡಿ

ಮಂತ್ರಿ ನರೇಂದ್ರ ಮೋದಿ ಅವರು ಆಟಿಕೆಗಳ ಬಗ್ಗೆ ಗುರುದೇವ ರವೀಂದ್ರನಾಥ ಠಾಗೋರ್ ಅವರ ಮಾತುಗಳನ್ನು ಸ್ಮರಿಸಿದರು. ಮಕ್ಕಳ ಕೈ ಸೇರದ ಉತ್ತಮ ಆಟಿಕೆಯೂ ಅಪೂರ್ಣ ಮಕ್ಕಳು ಒಟ್ಟಿಗೆ ಆಡುವಾಗ ಆಟಿಕೆ ಪೂರ್ಣಗೊಳ್ಳುತ್ತದೆ ಎಂದು ಗುರುದೇವ್ ಹೇಳಿದ್ದಾರೆ ಎಂದು ಅವರು ಹೇಳಿದರು. ಗುರುದೇವ್ ಅವರು ತಮ್ಮ ಬಾಲ್ಯದಲ್ಲಿ, ಮನೆಯಲ್ಲಿ ಲಭ್ಯವಿರುವ ಸಾಮಗ್ರಿಗಳೊಂದಿಗೆ ಕಲ್ಪನೆಯನ್ನು ಬಳಸಿಕೊಂಡು ತಮ್ಮದೇ ಆದ ಆಟಿಕೆಗಳನ್ನು ತಯಾರಿಸುತ್ತಿದ್ದರು ಎಂದು ಹೇಳಿದರು. ಆದರೆ, ಒಂದು ದಿನ, ಗುರುದೇವ್ ಅವರ ಸ್ನೇಹಿತರೊಬ್ಬರು ದೊಡ್ಡ ಮತ್ತು ಸುಂದರವಾದ ವಿದೇಶಿ ಆಟಿಕೆ ತಂದರು. ಈಗ, ಅವರ ಎಲ್ಲ ಗಮನವು ಆಟಕ್ಕಿಂತ ಆಟಿಕೆ ತೋರಿಸುವುದರಲ್ಲಿ ಹೆಚ್ಚಿತ್ತು. ಗುರುದೇವ್ ಅವರ ಈ ಕಲ್ಪನೆಯು ಭಾರತೀಯ ಆಟಿಕೆಗಳಿಗೆ ಬೆಂಬಲದ ಆಧಾರವಾಗಿತ್ತು. ಆಟಿಕೆಗಳ ಉಪಸ್ಥಿತಿ ಬಾಲ್ಯವನ್ನು ಅರಳಿಸಬೇಕು ಮತ್ತು ಮುಖದಲ್ಲಿ ನಗು ಮೂಡಿಸಬೇಕು ಎಂದು ಪ್ರಧಾನ ಮಂತ್ರಿ ಒತ್ತಿ ಹೇಳಿದರು. ಆಟಿಕೆಗಳು ಪರಿಸರ ಸ್ನೇಹಿಯಾಗಿರಬೇಕು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ, ಮಕ್ಕಳ ಜೀವನದ ವಿವಿಧ ಆಯಾಮಗಳ ಮೇಲೆ ಆಟಿಕೆಗಳ ಪ್ರಭಾವದ ಬಗ್ಗೆ ಶ್ಲಾಘನೀಯ ಗಮನ ನೀಡಲಾಗಿದೆ. ಆಡುತ್ತಾ ಕಲಿಯುವುದು, ಆಟಿಕೆಗಳನ್ನು ತಯಾರಿಸಲು ಕಲಿಯುವುದು, ಆಟಿಕೆ ಕಾರ್ಖಾನೆಗಳಿಗೆ ಭೇಟಿ ನೀಡುವುದು, ಇವೆಲ್ಲವನ್ನೂ ಪಠ್ಯಕ್ರಮದ ಭಾಗ ಮಾಡಲಾಗಿದೆ.

## ಪಚಿಸಿ



ಸಾಂಪ್ರದಾಯಿಕ ಕ್ರೀಡೆಗೆ ಭಾರತದಲ್ಲಿ ಶ್ರೀಮಂತ ಪರಂಪರೆಯಿದೆ. ನಮ್ಮಲ್ಲಿ ಆಡಲಾಗುವ ಆಟಗಳು ಕೇವಲ ಮನರಂಜನೆಗಾಗಿ ಮಾತ್ರವೇ ಅಲ್ಲ, ಬದಲಾಗಿ ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನೂ ರೂಪಿಸುತ್ತವೆ. ಅಂತಹ ಒಂದು ಮಾನಸಿಕ ಸಾಮರ್ಥ್ಯ ಬೆಳೆಸುವ ಕ್ರೀಡೆ "ಪಚಿಸಿ". ಈ ಕ್ರೀಡೆಯನ್ನು ತಮಿಳಿನಲ್ಲಿ "ಪಲ್ಲಂಗುಳಿ" ಎಂದು, ಕರ್ನಾಟಕದಲ್ಲಿ "ಅಳಿ ಗುಳಿ ಮನೆ" ಎಂದೂ ಮತ್ತು ಆಂಧ್ರಪ್ರದೇಶದಲ್ಲಿ "ವಾಮನ ಗುಂಟ್ಲು" ಎಂದೂ ಆಟಲಾಗುತ್ತದೆ. ಇದು ಹಲವು ಗುಂಡಿಗಳನ್ನು ಒಳಗೊಂಡ ಮಣೆಯಲ್ಲಿ ರಣತಂತ್ರದೊಂದಿಗೆ ಆಡುವ ಆಟವಾಗಿದೆ. ಆಟಗಾರರು ಬೀಜಗಳನ್ನು ಕೈಗೆ ತೆಗೆದುಕೊಂಡು ಆಡುತ್ತಾರೆ. ಈ ಕ್ರೀಡೆ ದಕ್ಷಿಣ ಭಾರತದಿಂದ ಇಡೀ ವಿಶ್ವಕ್ಕೇ ಪಸರಿಸಿದೆ ಎಂದು ಹೇಳಲಾಗುತ್ತದೆ.

## ಆಂಧ್ರಪ್ರದೇಶದ ಏಟಿಕೊಪ್ಪಾಕಾ ಆಟಿಕೆಗಳು



ಆಂಧ್ರಪ್ರದೇಶದ ವಿಶಾಖಪಟ್ಟಣಂನ ಏಟಿಕೊಪ್ಪಾಕಾದಿಂದ ಮೆರುಗೆಣ್ಣೆ ಲೇಪಿತ ಮರದ ಆಟಿಕೆಗಳು ಜನಪ್ರಿಯವಾಗಿವೆ. 400ಕ್ಕೂ ಹೆಚ್ಚು ವರ್ಷಗಳ ಇತಿಹಾಸ ಹೊಂದಿರುವ ಈ ಆಟಿಕೆಗಳನ್ನು ತಯಾರಿಸುವ ಕಲೆಯನ್ನು 'ಲಕ್ಕಪಿಡಥಾಲು' ಎಂದೂ ಕರೆಯಲಾಗುತ್ತಿತ್ತು. ಈ ಮರದ ಆಟಿಕೆಗಳು ಸೊಗಸಾಗಿರುವುದಷ್ಟೇ ಅಲ್ಲ, ರಾಸಾಯನಿಕ ಮುಕ್ತವಾಗಿದ್ದು ಸುಸ್ಥಿರವಾಗಿರುತ್ತವೆ. ಅವು ಭಾರತೀಯ ಮಾರುಕಟ್ಟೆಗಳಲ್ಲಿ ಮತ್ತು ವಿದೇಶಿ ಮಾರುಕಟ್ಟೆಗಳಲ್ಲಿ ಜನಪ್ರಿಯವಾಗಿವೆ. ಏಟಿಕೊಪ್ಪಕ ಆಟಿಕೆಗಳು 2017ರಲ್ಲಿ ಭೌಗೋಳಿಕ ಸೂಚನಾ ನೋಂದಾವಣೆ (ಜಿಐಆರ್) ಯಿಂದ ಭೌಗೋಳಿಕ ಸೂಚಕ (ಜಿಐ) ಟ್ಯಾಗ್ ಅನ್ನು ಪಡೆದಿವೆ.

ಭಾರತದ ಶ್ರೀಮಂತ ಆಟಿಕೆಗಳ ಸಂಪ್ರದಾಯವನ್ನು ಮಕ್ಕಳಿಗೆ ಪರಿಚಯಿಸುವುದು ಇದರ ಉದ್ದೇಶವಾಗಿದೆ.

### ಸಂಪ್ರದಾಯ ಮತ್ತು ಆಧುನಿಕತೆಯ ಮಿಶ್ರಣ

ಸಂಪ್ರದಾಯ ಮತ್ತು ತಂತ್ರಜ್ಞಾನದ ಮಿಶ್ರಣದೊಂದಿಗೆ, ಭಾರತವು, ಯುವಜನರಿಗೆ ಜನಪದವನ್ನು ಅನಿಮೇಷನ್ ಮೂಲಕ ನೀಡುತ್ತಿದೆ. ಇದು ಕಲಿಕೆಯನ್ನು ವಿನೋದವಾಗಿಸುವುದಲ್ಲದೆ, ಭಾರತದ ಶ್ರೀಮಂತ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮಗುವಿಗೆ ಸಹಾಯ ಮಾಡುತ್ತದೆ. ಭಾರತೀಯ ಮಾರುಕಟ್ಟೆಗಳು ಆಮದಾದ ಆಟಿಕೆಗಳಿಂದ ತುಂಬಿವೆ. ಈ ಆಮದು ಮಾಡಿದ ಆಟಿಕೆಗಳು ಆಸಕ್ತಿದಾಯಕವಾಗಿದ್ದರೂ, ಅವು ಯಾವುದೇ ಕಲಿಕೆಗಳನ್ನು ನೀಡುವುದಿಲ್ಲ. ಸಾಂಪ್ರದಾಯಿಕ ಕ್ರೀಡೆಗಳ ಭಾರತವು ಅತ್ಯಂತ ಶ್ರೀಮಂತ ಪರಂಪರೆಯನ್ನು ಹೊಂದಿದೆ ಎಂದು ಪ್ರಧಾನಮಂತ್ರಿ ಹೇಳುತ್ತಾರೆ. "ಉದಾಹರಣೆಗೆ, ನೀವು 'ಪಚಿಸಿ' ಎಂಬ ಆಟದ ಹೆಸರನ್ನು ಕೇಳಿರಬಹುದು. ಈ ಆಟವನ್ನು ತಮಿಳುನಾಡಿನಲ್ಲಿ 'ಪಲ್ಲಂಗುಲಿ' ಎಂದು ಆಡಲಾಗುತ್ತದೆ, ಇದನ್ನು ಕರ್ನಾಟಕದಲ್ಲಿ 'ಅಳಿ ಗುಳಿ ಮನೆ' ಎಂದು ಕರೆಯಲಾಗುತ್ತದೆ ಮತ್ತು ಇದನ್ನು ಆಂಧ್ರಪ್ರದೇಶದಲ್ಲಿ 'ವಾಮನ್ ಗುಂಟ್ಲು' ಎಂದು ಕರೆಯಲಾಗುತ್ತದೆ. ಇದು ಒಂದು ಬಗೆಯ ರಣತಂತ್ರದ ಆಟವಾಗಿದ್ದು, ಇದರಲ್ಲಿ ಅನೇಕ ಗುಂಡಿಗಳ ಮಣೆ ಇರುತ್ತದೆ. ಇದರಲ್ಲಿ ಆಟಗಾರರು ಗೋಲಿ ಅಥವಾ ಬೀಜವನ್ನು ಕೈಯಲ್ಲಿ ಹಿಡಿದು ಆಡುತ್ತಾರೆ. ಈ ಆಟವು ದಕ್ಷಿಣ ಭಾರತದಿಂದ ಆಗ್ನೇಯ ಏಷ್ಯಾಕ್ಕೆ ಮತ್ತು ನಂತರ ಪ್ರಪಂಚದ ಇತರ ಭಾಗಗಳಿಗೆ ಹರಡಿತು ಎಂದು ಹೇಳಲಾಗುತ್ತದೆ... ಇಂದು ಪ್ರತಿ ಮಗುವಿಗೆ ಹಾವು ಮತ್ತು ಏಣಿಗಳ ಆಟದ ಬಗ್ಗೆ ತಿಳಿದಿದೆ. ಆದರೆ, ಇದು ಮತ್ತೊಂದು ಸಾಂಪ್ರದಾಯಿಕ ಭಾರತೀಯ ಆಟವಾಗಿದೆ ಎಂದು ನಿಮಗೆ ತಿಳಿದಿದೆಯೇ, ಇದನ್ನು 'ಮೋಕ್ಷ ಪಟಮ್' ಅಥವಾ 'ಪರಂಪದಂ'... ಎಂದು ಕರೆಯಲಾಗುತ್ತದೆ. ಮನೆಯಲ್ಲಿನ ಹಿರಿಯರು ಮತ್ತು ಅಜ್ಜಿ ತಾತ ಇವರಿಗೆ ನನ್ನ ಮನವಿಯೇನೆಂದರೆ, ನೀವು ಈ ಆಟಗಳನ್ನು ನಿಮ್ಮ ಮುಂದಿನ ಪೀಳಿಗೆಗೆ ಕಲಿಸದಿದ್ದರೆ, ಮತ್ತೆ ಯಾರು ಆ ಕೆಲಸ ಮಾಡಲು ಸಾಧ್ಯ? ಮಕ್ಕಳಿಗೀಗ ಆನ್‌ಲೈನ್ ಆಟಗಳು ಬಂದಿದೆ, ಸಮತೋಲನವನ್ನು ಕಾಪಾಡಲು ಮತ್ತು ಆನ್ ಲೈನ್ ಆಟದಿಂದ ಹೊರಬರಲು, ನಾವು ನಮ್ಮ ಮಕ್ಕಳ ಹಿತದೃಷ್ಟಿಯಿಂದ ನಮ್ಮ ಸಾಂಪ್ರದಾಯಿಕ ಆಟ ಪರಿಚಯಿಸಬೇಕು. ಇಲ್ಲಿ ನಮ್ಮ ನವೋದ್ಯಮಗಳಿಗೆ ಮತ್ತು ನಮ್ಮ ಯುವಜನರಿಗೆ ಒಂದು ಅಪೂರ್ವ ಮತ್ತು ಒಂದು ಬಲವಾದ ಅವಕಾಶವಿದೆ" ಎಂದು ಪ್ರಧಾನಮಂತ್ರಿ 2020 ರ ಜೂನ್ ನಲ್ಲಿ ತಮ್ಮ 'ಮನ್ ಕಿ ಬಾತ್' ಸಂದರ್ಭದಲ್ಲಿ ಹೇಳಿದ್ದರು.

ಸರ್ಕಾರದ ಪ್ರಯತ್ನದ ಫಲವಾಗಿ, ಪುರಾತನ ಸಂಪ್ರದಾಯವನ್ನು ನೂತನ ತಂತ್ರಜ್ಞಾನದೊಂದಿಗೆ ಬೆಸೆಯಲಾಗಿದೆ ಮತ್ತು ಮಕ್ಕಳ ಮನಸೆಳೆಯಲು ಹೊಸ ರೂಪ

## ಪಶ್ಚಿಮ ಬಂಗಾಳದ ಕೃಷ್ಣ ನಗರದ ಮಣ್ಣಿನ ಬೊಂಬೆಗಳು



ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯ ಕೃಷ್ಣನಗರ ತನ್ನ ಕರಕುಶಲ ಮಣ್ಣಿನ ಬೊಂಬೆಗಳಿಗೆ ಹೆಸರಾಗಿದೆ. ಸುಂದರ ಮತ್ತು ಜೀವಕಳೆಯ ಮಣ್ಣಿನ ಗೊಂಬೆಗಳು ಮತ್ತು ಇತರ ಆಟಿಕೆಗಳು ತಮ್ಮ ಆಕರ್ಷಕ ವಿನ್ಯಾಸ ಮತ್ತು ಆಕಾರದಿಂದ ಜನಪ್ರಿಯವಾಗಿವೆ. ಈ ಆಟಿಕೆಗಳು ವಿಶೇಷವಾಗಿದ್ದು, ಸ್ಥಳೀಯ ನದಿಯ ದಂಡೆಯಲ್ಲಿ ಸಿಗುವ ಮಣ್ಣಿನಿಂದ ಮಾಡಿದ್ದಾಗಿದೆ. ಜಗತ್ತಿನ ಆಟಿಕೆ ವಸ್ತುಸಂಗ್ರಹಾಲಯಗಳಲ್ಲಿ ಇವುಗಳನ್ನು ನೋಡಬಹುದಾಗಿದೆ.

## ವಾರಾಣಸಿಯ ಮರದ ಆಟಿಕೆಗಳು



ಉತ್ತರ ಪ್ರದೇಶದ ವಾರಾಣಸಿ ತನ್ನ ಮರದ ಆಟಿಕೆಗಳಿಗೆ ಹೆಸರಾಗಿದೆ. ಮರದ ನೈಸರ್ಗಿಕ ರಂಬೆಗಳಿಂದ ವಿನ್ಯಾಸಗಳನ್ನು ಮಾಡಲಾಗುತ್ತದೆ. ಈ ಆಟಿಕೆಗಳನ್ನು ಯಾವುದೇ ಜೋಡಣೆಗಳಿಲ್ಲದೆ ತಯಾರಿಸಲಾಗುತ್ತದೆ ಮತ್ತು ಮಕ್ಕಳಿಗೆ ಆಕರ್ಷಕ ಹಾಗು ಸುರಕ್ಷಿತವಾಗಿದೆ. ಜಿಐ ಟ್ಯಾಗ್ ಪಡೆದ ನಂತರ, ಇಲ್ಲಿ ಆಟಿಕೆ ಉದ್ಯಮವು ಅನೇಕ ಪಟ್ಟು ಹೆಚ್ಚಾಗಿದೆ. ವಾರಾಣಸಿ ಒಂದು ಕಾಲದಲ್ಲಿ ಭಾರತದ ಅತಿದೊಡ್ಡ ಆಟಿಕೆ ಉತ್ಪಾದನಾ ಕೇಂದ್ರವಾಗಿತ್ತು.

ನೀಡಲಾಗಿದೆ. ಗುಜರಾತ್ ಮತ್ತು ರಾಜಸ್ಥಾನದ ಬೊಂಬೆಯಾಟ ಧಾರ್ಮಿಕ ಕತೆ ಹೇಳಿದರೆ, ಭಾರತೀಯ ಸಂಸ್ಕೃತಿಯನ್ನು ಮಕ್ಕಳಿಗೆ ಪರಿಚಯಿಸಲು ಅನಿಮೇಷನ್ ಬಳಸಲಾಗುತ್ತಿದೆ.

### ಸುರಕ್ಷತೆ ಮತ್ತು ಸ್ವಯಂ ಅವಲಂಬನೆಗೆ ಉಪಕ್ರಮ

ಭಾರತವು ಭಾರತೀಯ ಮೌಲ್ಯ ವ್ಯವಸ್ಥೆಯೊಂದಿಗೆ ಆಟಿಕೆಗಳನ್ನು ತಯಾರಿಸಬೇಕು. ಈ ಆಟಿಕೆಗಳು ಉದ್ಯೋಗವನ್ನು ಸೃಷ್ಟಿಸುತ್ತವೆ, ಮತ್ತು ಅದೇ ಸಮಯದಲ್ಲಿ, ಸಂಸ್ಕೃತಿಯನ್ನು ರಕ್ಷಿಸುತ್ತದೆ. ಮಗುವಿನ ಕೌಶಲ್ಯ ಅಭಿವೃದ್ಧಿಯಲ್ಲಿ ಆಟಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಉತ್ತಮ ಮತ್ತು ಸೂಕ್ತವಾದ ಆಟಿಕೆ ಮಗುವಿಗೆ ಸಾಕಷ್ಟು ಕೌಶಲ್ಯಗಳನ್ನು ನೀಡುತ್ತದೆ.

ಕೊರೊನಾ ವೈರಾಣು ಸಾಂಕ್ರಾಮಿಕ ರೋಗದಿಂದಾಗಿ ಲಾಕ್‌ಡೌನ್‌ನಲ್ಲಿ ಮಕ್ಕಳು ಮನೆಯೊಳಗೆ ಇದ್ದ ಕಾರಣ, ಆಟಿಕೆಗಳ ಪಾತ್ರ ಇನ್ನಷ್ಟು ಮಹತ್ವದ್ದಾಯಿತು. ಆ ಸಮಯದಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗಾಂಧಿನಗರದ ಮಕ್ಕಳ ವಿಶ್ವವಿದ್ಯಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಶಿಕ್ಷಣ ಸಚಿವಾಲಯ ಮತ್ತು ಎಂಎಸ್ಎಂಇ ಸಚಿವಾಲಯದೊಂದಿಗೆ ಮಕ್ಕಳಿಗೆ ಹೊಸ ಆಟಿಕೆಗಳನ್ನು ಹೇಗೆ ದೊರಕುವಂತೆ ಮಾಡಬಹುದು ಮತ್ತು ಭಾರತವು ಹೇಗೆ ಆಟಿಕೆ ಉದ್ಯಮದಲ್ಲಿ ದೊಡ್ಡ ಕೇಂದ್ರವಾಗಬಹುದು ಎಂಬುದರ ಕುರಿತು ಚರ್ಚೆ ನಡೆಸಿದರು. ಭಾರತೀಯ ವೈವಿಧ್ಯವನ್ನು ಉತ್ತೇಜಿಸಲು ದೇಶದ ಹಲವಾರು ಭಾಗಗಳನ್ನು ಆಟಿಕೆ ಕ್ಲಸ್ಟರುಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಭಾರತವು ಮಕ್ಕಳ ದೊಡ್ಡ ಜನಸಂಖ್ಯೆಯನ್ನು ಹೊಂದಿದೆ, ಶ್ರೀಮಂತ ಆಟಿಕೆ ಸಂಸ್ಕೃತಿ ಮತ್ತು ವಿವಿಧ ಆಟಿಕೆಗಳನ್ನು ಸಹ ನೀಡುತ್ತಿದೆ. ಈ ಎಲ್ಲಾ ಅಂಶಗಳು ಭಾರತದ ಪರವಾಗಿದ್ದರೂ, ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಅಲ್ಪ ಕೊಡುಗೆಗೆ ಯಾವುದೇ ಕ್ಷಮೆ ಇರುವುದಿಲ್ಲ. 'ಸ್ಥಳೀಯತೆಗೆ ಧ್ವನಿ' ಎಂಬ ತತ್ವದೊಂದಿಗೆ ಪ್ರಧಾನಮಂತ್ರಿಗಳು ಸ್ವಾವಲಂಬಿ ಆಟಿಕೆ ಉದ್ಯಮಕ್ಕೆ ಸಲಹೆ ನೀಡಿದರು. ಸುಧಾರಿತ ಚಿತ್ರಣಕ್ಕಾಗಿ ತೆಗೆದುಕೊಂಡ ಮೊದಲ ಹಂತಗಳಲ್ಲಿ ನೀತಿ ಸುಧಾರಣೆಗಳು ಸೇರಿವೆ.

ನೂರು ವರ್ಷಗಳ ಹಿಂದೆ, ಅಸಹಕಾರ ಚಳವಳಿಯನ್ನು ಪ್ರಾರಂಭಿಸುವಾಗ, ಮಹಾತ್ಮ ಗಾಂಧಿ ಅವರು, ಇದು ದೇಶವಾಸಿಗಳಿಗೆ ಅವರ ಸ್ವಾಭಿಮಾನ ಮತ್ತು ಅವರ ಶಕ್ತಿಯನ್ನು ಅರಿತುಕೊಳ್ಳುವ ಪ್ರಯತ್ನವಾಗಿದೆ ಎಂದು ಹೇಳಿದ್ದರು. ಈಗ, ಆಟಿಕೆ ಉದ್ಯಮಕ್ಕೆ ತನ್ನ ಬಲವನ್ನು ಅರಿತುಕೊಳ್ಳುವುದು ಮತ್ತು ಸ್ವಾವಲಂಬಿಯಾಗುವ ಸಮಯ.

ಕೊರೊನಾ ವೈರಾಣು ಸಾಂಕ್ರಾಮಿಕದ ವೇಳೆ, ಅತ್ಯಾವಶ್ಯಕವಲ್ಲದ ವಸ್ತುಗಳ ಆಮದು ನಿಷೇಧಿಸಿದಾಗ,

## ಚನ್ನಪಟ್ಟಣ: ಕರ್ನಾಟಕದಲ್ಲಿ ಸುಮಾರು 300 ವರ್ಷಗಳ ಹಳೆಯ ಆಟಿಕೆ ಸಂಪ್ರದಾಯ



ಕರ್ನಾಟಕದ ಚನ್ನಪಟ್ಟಣದ 300 ವರ್ಷ ಪುರಾತನವಾದ ಸಾಂಪ್ರದಾಯಿಕ ಆಟಿಕೆ ತಯಾರಿಕೆ ಸಂಪ್ರದಾಯ ಆ ಹೆಸರಿಂದಲೇ ಖ್ಯಾತವಾಗಿದೆ. ಈ ಪ್ರದೇಶದಲ್ಲಿನ ಆಟಿಕೆ ತಯಾರಿಕೆಯು ಟಿಪ್ಪು ಸುಲ್ತಾನ್ ಕಾಲದ ಮೂಲವನ್ನು ಹೊಂದಿದೆ. ಆಟಿಕೆಗಳು ವಿಶ್ವಾದ್ಯಂತ ಪ್ರಸಿದ್ಧವಾಗಿವೆ ಮತ್ತು ಮಕ್ಕಳ ಪ್ರೀತಿಗೆ ಪಾತ್ರವಾಗಿದೆ.

## ತಂಜಾವೂರು: ನೃತ್ಯ ಬೊಂಬೆಗಳು



ಟೆರಾಕೋಟಾ ವಸ್ತುಗಳಿಂದ ಮಾಡಿದ ಸಾಂಪ್ರದಾಯಿಕ ಭಾರತೀಯ ತೂಗಾಡುವ ತಲೆಯ ಅಥವಾ ರೋಲಿ-ಪಾಲಿ ಆಟಿಕೆಯಾಗಿದೆ. ಇದರ ಉಲ್ಲೇಖ ತಮಿಳು ಸಾಹಿತ್ಯದಲ್ಲಿ ಕಂಡುಬರುತ್ತದೆ. ಇದರ ಮೂಲ ತಮಿಳುನಾಡಿನ ತಂಜಾವೂರಿನಲ್ಲಿದೆ. ಗೊಂಬೆಗಳು ಅದರ ದೇಹಕ್ಕಿಂತ ದೊಡ್ಡದಾದ ತಲೆಯನ್ನು ಹೊಂದಿರುತ್ತವೆ. ಮುಟ್ಟಿದಾಗ ತಲೆ ಅಲುಗಾಡುತ್ತದೆ. ಇವು ಕೇವಲ ಮಕ್ಕಳಲ್ಲಿ ಜನಪ್ರಿಯವಾಗಿರುವುದಷ್ಟೇ ಅಲ್ಲ, ವಯಸ್ಕರು ಸಹ ಅದರ ಅಭಿಮಾನಿಗಳಾಗಿದ್ದಾರೆ. ಈ ಗೊಂಬೆಗಳನ್ನು ಜಿಐ ಟ್ಯಾಗ್ ಮಾಡಲಾಗಿದೆ.

ರಾಂಚಿಯ ಮನೋಜ್ ಕುಮಾರ್, ಭಾರತೀಯ ಆಟಿಕೆಗಳಿಗೆ ಉತ್ತೇಜನ ನೀಡಲು ಅವಕಾಶ ಬಳಸಿಕೊಂಡರು. ಅವರು ಮೃದು ಆಟಿಕೆ ತಯಾರಿಕೆ ಆರಂಭಿಸಿ, ಇತರ ಹಲವರಿಗೆ ಉದ್ಯೋಗ ಒದಗಿಸಿದರು. ಆಮದು ನಿಷೇಧದಿಂದಾಗಿ ಆಟಿಕೆ ಕ್ಷೇತ್ರದತ್ತ ಗಮನ ಹರಿಸಲು ಸರಿಯಾದ ಸಮಯ ಎಂದು ಅವರು ಹೇಳಿದರು. "ನಾನು ಮೃದುವಾದ ಆಟಿಕೆಗಳನ್ನು ತಯಾರಿಸಲು ಪ್ರಾರಂಭಿಸಿದೆ ಮತ್ತು ಅದಕ್ಕಾಗಿ ಕೆಲವು ಕುಶಲಕರ್ಮಿಗಳನ್ನು ನೇಮಿಸಿಕೊಂಡೆ. ಇಂದಿನ ಯುವಕರು ಉದ್ಯೋಗ ಒದಗಿಸುವುದರಲ್ಲಿ ವಿಶ್ವಾಸವಿಟ್ಟಿದ್ದಾರೆ. ಮತ್ತು 'ಸ್ಥಳೀಯತೆಗೆ ಧ್ವನಿ' ಸಂದೇಶವು ಈ ಚಿಂತನೆಗೆ ಪುಷ್ಟಿ ನೀಡಿದೆ. ಈ ಕ್ಷೇತ್ರದಲ್ಲಿ ಯುವಕರ ಪಾಲ್ಗೊಳ್ಳುವಿಕೆ ಎಲ್ಲರಿಗೂ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸುತ್ತದೆ" ಎಂದು ಕುಮಾರ್ ಹೇಳುತ್ತಾರೆ. ಸ್ಮಾರ್ಟ್ ಫೋನ್ ಗಳು ಮತ್ತು ಕಂಪ್ಯೂಟರ್ ಗಳು ಯಥೇಚ್ಛವಾಗಿ ಆಟಗಳನ್ನು ನೀಡುತ್ತಿರುವ ಸಮಯದಲ್ಲಿ, ಆಟಿಕೆ ಮೇಳ ಮತ್ತು ಟಾಯ್ ಕಥಾನ್ ಫಲವಾಗಿ, ಭಾರತೀಯ ಕಂಪ್ಯೂಟರ್ ಆಟಗಳು ಜನಪ್ರಿಯವಾಗುತ್ತಿವೆ. ಉದ್ಯಮಗಳಿಂದ ಹಿಡಿದು ಕೈಗಾರಿಕೆಗಳವರೆಗೆ; ವಿದ್ಯಾರ್ಥಿಗಳು ಶಿಕ್ಷಕರು ಮತ್ತು ವಿನ್ಯಾಸಕರು ಎಲ್ಲರೂ, ಆಟಿಕೆ ವಲಯವನ್ನು ಸ್ವಾವಲಂಬಿಯನ್ನಾಗಿ ಮಾಡುವಲ್ಲಿ ಕೊಡುಗೆ ನೀಡುತ್ತಿದ್ದಾರೆ. ಈ ಸಣ್ಣ ಕೊಡುಗೆಗಳು ಭಾರತೀಯ ಆಟಿಕೆ ಉದ್ಯಮವು ಸ್ವಾವಲಂಬಿಯಾಗಲು ಸಹಾಯ ಮಾಡುತ್ತದೆ. 'ಆಟಿಕೆಗಳಿಗಾಗಿ ತಂಡವನ್ನು ಕಟ್ಟೋಣ ಮತ್ತು ನಾವು ಆಟಿಕೆಗಳನ್ನು ಒಗ್ಗೂಡಿ ತಯಾರಿಸೋಣ' ಸೇರಿದಂತೆ ಸರ್ಕಾರದ ಪ್ರಯತ್ನಗಳು ಆಟಿಕೆ ಉದ್ಯಮಕ್ಕೆ ಹೊಸ ಅಸ್ಮಿತೆ ಮತ್ತು ಔನ್ನತ್ಯವನ್ನು ಹೊಂದಲು ಸಹಾಯ ಮಾಡುತ್ತಿವೆ. ಭಾರತ ತನ್ನ ಸ್ಥಳೀಯ ಆಟಿಕೆಗಳೊಂದಿಗೆ ಜಾಗತಿಕ ಆಟಿಕೆ ಮಾರುಕಟ್ಟೆಗೆ ಲಗ್ಗೆ ಇಡಲು ಸಿದ್ಧವಾಗುತ್ತಿದೆ. ನವ ಭಾರತವು ಹೊಸ ವಿಶ್ವಾಸದಿಂದ ಮುಂದೆ ಸಾಗುತ್ತಿದೆ. ■

**ವಾರ್ತಾ ಮತ್ತು ಪ್ರಸಾರ (ಐ ಅಂಡ್ ಬಿ) ಸಚಿವಾಲಯ ಐಐಟಿ ಬಾಂಬೆ ಸಹಯೋಗದಲ್ಲಿ ಗೇಮಿಂಗ್, ಅನಿಮೇಷನ್‌ನಲ್ಲಿ ಔನ್ನತ್ಯ ಕೇಂದ್ರ ಸ್ಥಾಪಿಸಲಿದೆ.**

# ಬಲವಾದ ಒಕ್ಕೂಟ ವ್ಯವಸ್ಥೆಯೊಂದಿಗೆ ಹೊಸ ಅಭಿವೃದ್ಧಿ ಅವಕಾಶಗಳು

ಜಾಗತಿಕ ಸಾಂಕ್ರಾಮಿಕ ಕೋವಿಡ್-19 ವಿರುದ್ಧ ಭಾರತವು ಯಶಸ್ವಿ ಹೋರಾಟ ನಡೆಸಿದ ರೀತಿ ಮತ್ತು ಅಭಿವೃದ್ಧಿಯ ಹಾದಿಯಲ್ಲಿ ವೇಗವಾಗಿ ಸಾಗುತ್ತಿರುವ ಪರಿ, ಇದು ದೇಶದ ದೃಢವಾದ ಒಕ್ಕೂಟ ವ್ಯವಸ್ಥೆಯ ಬಗ್ಗೆ ಹೇಳುತ್ತದೆ. ಭಾರತದ ಪ್ರಗತಿಯ ಗಾಥೆಯನ್ನು ಹೊಸ ಎತ್ತರಕ್ಕೆ ತೆಗೆದುಕೊಂಡು ಹೋಗಲು, ನೀತಿ ಆಯೋಗ ಆಡಳಿತ ಮಂಡಳಿಯ ಆರನೇ ಸಭೆ 2021ರ ಫೆಬ್ರವರಿ 20 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೃಷಿ, ಉತ್ಪಾದನೆ, ಮಾನವ ಸಂಪನ್ಮೂಲ ಅಭಿವೃದ್ಧಿ, ಆರೋಗ್ಯ ಮತ್ತು ಪೋಷಣೆಯಂತಹ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು, ತಳಮಟ್ಟದಲ್ಲಿ ಸೇವೆಗಳನ್ನು ಒದಗಿಸಲಾಗಿದೆ. ಭಾರತದ ಅಭಿವೃದ್ಧಿ ಪಯಣದ ಬಗ್ಗೆ ಪ್ರಧಾನಮಂತ್ರಿಯವರು ಮಾತನಾಡಿದರು. ಜನ್-ಧನ್ ಖಾತೆಗಳು, ಲಸಿಕೆ ಹಾಕುವುದು, ಉಜ್ವಲಾ ಯೋಜನೆ, ಶೌಚಾಲಯಗಳು ಮತ್ತು ಪಕ್ಕಾ ಮನೆಗಳೊಂದಿಗೆ ಬಡವರ ಸಬಲೀಕರಣದ ಬಗ್ಗೆಯೂ ಅವರು ಮಾತನಾಡಿದರು. ಜಲ ಜೀವನ್ ಯೋಜನೆಯ ಮೂಲಕ ಕೊಳವೆ ಮೂಲಕ ನೀರು ಪ್ರತಿ ಮನೆಗೂ ತಲುಪಿದೆ. ಅಪೌಷ್ಟಿಕತೆಯನ್ನು ತಡೆಯಲಾಗಿದೆ ಮತ್ತು ಭಾರತ್ ನೆಟ್ ಯೋಜನೆಯೊಂದಿಗೆ ಭಾರತದಾದ್ಯಂತ ಇಂಟರ್ನೆಟ್ ಸಂಪರ್ಕ ದೊರೆಯುವಂತೆ ಮಾಡಲಾಗುತ್ತಿದೆ.

**ಆಡಳಿತ ಮಂಡಳಿ ಎಂದರೇನು?**

ನೀತಿ ಆಯೋಗದ ಆಡಳಿತ ಮಂಡಳಿ ಅಂತರ-ಪ್ರಾದೇಶಿಕ, ಇಲಾಖಾವಾರು ಮತ್ತು ಒಕ್ಕೂಟದ ವಿಷಯಗಳ ಬಗ್ಗೆ ಚರ್ಚಿಸುವ ಆಡಳಿತಾತ್ಮಕ ವೇದಿಕೆಯಾಗಿದೆ. ಇದರಲ್ಲಿ ಪ್ರಧಾನಮಂತ್ರಿಗಳು, ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್ ಗಳು ಭಾಗವಹಿಸುತ್ತಾರೆ. ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಮೊದಲ ಬಾರಿಗೆ ಕೇಂದ್ರಾಡಳಿತ ಪ್ರದೇಶವಾಗಿ ಭಾಗವಹಿಸಿದ್ದರಿಂದ ಆರನೇ ಸಭೆ ವಿಶೇಷವಾಗಿತ್ತು. ■



> ದೇಶದ ಪ್ರಗತಿಯ ಸಾರಾಂಶವೆಂದರೆ ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಕೆಲಸ ಮಾಡಿ ನಿರ್ದಿಷ್ಟ ದಿಕ್ಕಿನಲ್ಲಿ ಸಾಗುವುದಾಗಿದೆ. ನಾವು ಸಹಕಾರಿ ಒಕ್ಕೂಟ ವ್ಯವಸ್ಥೆಯನ್ನು ಹೆಚ್ಚು ಅರ್ಥಪೂರ್ಣಗೊಳಿಸಬೇಕು ಮತ್ತು ಸ್ಪರ್ಧಾತ್ಮಕ ಸಹಕಾರಿ ಒಕ್ಕೂಟ ವ್ಯವಸ್ಥೆಯನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಿಸಬೇಕು. ಕೊರೊನಾ ಕಾಲದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಿದ್ದರಿಂದ ಇಡೀ ದೇಶ ಯಶಸ್ಸು ಸಾಧಿಸಿತು ಮತ್ತು ಭಾರತದ ಬಗ್ಗೆ ಸಕಾರಾತ್ಮಕ ಚಿತ್ರಣ ಜಗತ್ತಿನಲ್ಲಿ ಹೇಗೆ ಸೃಷ್ಟಿಯಾಯಿತು ಎಂಬುದನ್ನು ನಾವು ನೋಡಿದ್ದೇವೆ.
>
> **-ಪ್ರಧಾನಮಂತ್ರಿ ನರೇಂದ್ರ ಮೋದಿ**

## ಪ್ರಧಾನಮಂತ್ರಿಯವರ ಭಾಷಣದ ಪ್ರಮುಖ ಅಂಶಗಳು:

- ದೇಶದ ಈ ಅಭಿವೃದ್ಧಿ ಪಯಣದಲ್ಲಿ ದೇಶದ ಖಾಸಗಿ ವಲಯವು ಹೆಚ್ಚಿನ ಉತ್ಸಾಹದಿಂದ ಮುಂದೆ ಬರುತ್ತಿದೆ. ಸರ್ಕಾರವಾಗಿ, ನಾವು ಈ ಉತ್ಸಾಹವನ್ನು ಗೌರವಿಸಬೇಕು ಮತ್ತು ಖಾಸಗಿ ವಲಯಕ್ಕೆ ಆತ್ಮನಿರ್ಭರ ಭಾರತ ಅಭಿಯಾನಕ್ಕೆ ಅವಕಾಶಗಳನ್ನು ಒದಗಿಸಬೇಕು.
- ಆತ್ಮನಿರ್ಭರ ಭಾರತ ಅಭಿಯಾನವು ತನ್ನ ಸ್ವಂತ ಅಗತ್ಯಗಳಿಗಾಗಿ ಮಾತ್ರ ಉತ್ಪಾದಿಸುವುದಲ್ಲದೆ ಜಗತ್ತಿಗೂ ಉತ್ಪಾದಿಸುವಂತಹ ಭಾರತವನ್ನು ಅಭಿವೃದ್ಧಿಪಡಿಸುವ ಮಾರ್ಗವಾಗಿದೆ. ಈ ಉತ್ಪಾದನೆಯು ವಿಶ್ವಕ್ಕೂ ಪರೀಕ್ಷೆಯಾಗಿದೆ
- ನೀತಿ ಚೌಕಟ್ಟು ಹಾಗು ಕೇಂದ್ರ ಮತ್ತು ರಾಜ್ಯಗಳ ನಡುವಿನ ಉತ್ತಮ ಹೊಂದಾಣಿಕೆ ಕೂಡ ಬಹಳ ಮುಖ್ಯವಾಗುತ್ತದೆ. ಇದಕ್ಕೆ ಕರಾವಳಿ ರಾಜ್ಯಗಳು ಅತ್ಯುತ್ತಮ ಉದಾಹರಣೆ. ಮೀನುಗಾರಿಕೆ ಉದ್ಯಮ ಮತ್ತು ನೀಲಿ ಆರ್ಥಿಕತೆಯನ್ನು ಉತ್ತೇಜಿಸಲು ಅಪರಿಮಿತ ಅವಕಾಶಗಳಿವೆ
- ಸರ್ಕಾರವು ವಿವಿಧ ಕ್ಷೇತ್ರಗಳಿಗೆ ಪಿ.ಎಲ್.ಐ ಯೋಜನೆಗಳನ್ನು ಪರಿಚಯಿಸಿದೆ. ಉತ್ಪಾದನೆಯನ್ನು ಹೆಚ್ಚಿಸಲು ಇದೊಂದು ಉತ್ತಮ ಅವಕಾಶವಾಗಿದೆ.

# ಜಾಗತಿಕ ಟೆಲಿಕಾಂ – ಎಲೆಕ್ಟ್ರಾನಿಕ್ ತಾಣವಾಗಲಿರುವ ಭಾರತ

**ಸರ್ಕಾರವು ತೆಗೆದುಕೊಂಡ ಕೆಲವು ನಿರ್ಧಾರಗಳು ಮಕ್ಕಳನ್ನು ರಕ್ಷಿಸುವ ಮತ್ತು ಅವರ ಹಕ್ಕುಗಳನ್ನು ಖಾತ್ರಿಪಡಿಸುವುದರ ಜೊತೆಗೆ ಭಾರತವನ್ನು ಐಟಿ ಯಂತ್ರಾಂಶ, ಟೆಲಿಕಾಂ ಮತ್ತು ಔಷಧಗಳ ಉತ್ಪಾದನಾ ಕೇಂದ್ರವನ್ನಾಗಿ ಮಾಡಲು ಸಹಾಯ ಮಾಡುತ್ತದೆ.**

**ನಿರ್ಣಯಗಳು:** ಐಟಿ ಯಂತ್ರಾಂಶ ವಲಯಕ್ಕೆ ಉತ್ಪಾದನೆ ಸಂಪರ್ಕಿತ ಪ್ರೋತ್ಸಾಹಕ (ಪಿ.ಎಲ್.ಐ.) ಯೋಜನೆಗೆ ಅನುಮೋದನೆ.

**ಪ್ರಯೋಜನಗಳು:**

- ಈ ಯೋಜನೆ ಲ್ಯಾಪ್ ಟಾಪ್‌ಗಳು, ಟ್ಯಾಬ್ಲೆಟ್ ಗಳು, ಆಲ್ ಇನ್ ಒನ್ ಪಿ.ಸಿ.ಗಳು ಮತ್ತು ಸರ್ವರ್ ಸೇರಿದಂತೆ ಐಟಿ ಯಂತ್ರಾಂಶ ಉತ್ಪಾದನೆ ವಲಯದ 5 ಪ್ರಮುಖ ಜಾಗತಿಕ ಕಂಪನಿಗಳಿಗೆ ಮತ್ತು 10 ದೇಶೀಯ ಕಂಪನಿಗಳಿಗೆ ಪ್ರಯೋಜನ ನೀಡಲಿದೆ.
- ಜಾಗತಿಕ ಮೌಲ್ಯ ಸರಪಳಿಗಳೊಂದಿಗೆ ಏಕೀಕರಣದ ಕಾರಣದಿಂದ ಭಾರತವು ಎಲೆಕ್ಟ್ರಾನಿಕ್ಸ್ ಸಿಸ್ಟಮ್ ವಿನ್ಯಾಸ ಮತ್ತು ಉತ್ಪಾದನೆ (ಇ.ಎಸ್.ಎಂ.ಡಿ.) ಯ ಜಾಗತಿಕ ತಾಣವಾಗಿ ಸ್ಥಾನ ಪಡೆಯಲಿದೆ.
- ಪ್ರಸ್ತಾವಿತ ಯೋಜನೆಯ ಒಟ್ಟು ವೆಚ್ಚ 4 ವರ್ಷಗಳಲ್ಲಿ ಸುಮಾರು 7,350 ಕೋಟಿ ರೂ. ಆಗಲಿದೆ. ಈ ಯೋಜನೆಯು 4 ವರ್ಷಗಳಲ್ಲಿ ಅರ್ಹ ಕಂಪನಿಗಳಿಗೆ ಭಾರತದಲ್ಲಿ ಉತ್ಪಾದಿಸಲಾಗುವ ಸರಕುಗಳ ನಿವ್ವಳ ಹೆಚ್ಚಳದ ಮಾರಾಟಕ್ಕೆ ಶೇ. 4 ರಿಂದ 1 ರವರೆಗೆ ಪ್ರೋತ್ಸಾಹಕ ನೀಡಲಿದೆ.

**ನಿರ್ಣಯಗಳು:** ಟೆಲಿಕಾಂ ಮತ್ತು ನೆಟ್ವರ್ಕಿಂಗ್ ಉತ್ಪನ್ನಗಳಿಗೆ ಉತ್ಪಾದನಾ ಸಂಪರ್ಕಿತ ಪ್ರೋತ್ಸಾಹಕ (ಪಿ.ಎಲ್.ಐ.) ಯೋಜನೆಯ ಅನುಮೋದನೆ.

**ಪ್ರಯೋಜನಗಳು:**

- ಟೆಲಿಕಾಂ ಉತ್ಪಾದನೆ ಐದು ವರ್ಷಗಳಲ್ಲಿ 12,195 ಕೋಟಿ ರೂ. ಹಂಚಿಕೆಯೊಂದಿಗೆ ಉತ್ತೇಜನ ಪಡೆದಿದೆ. ಇದು 2 ಲಕ್ಷ ಕೋಟಿ ರೂ.ಗಳ ಉತ್ಪಾದನೆಯನ್ನು ಹೆಚ್ಚಿಸುತ್ತದೆ.
- ಭಾರತವು ಜಾಗತಿಕ ಕಂಪನಿಗಳ ದೊಡ್ಡ ಹೂಡಿಕೆಗಳನ್ನು ಆಕರ್ಷಿಸುವ ಮೂಲಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- ಈ ಯೋಜನೆಯು ದೇಶೀಯ ಪ್ರಮುಖ ಕಂಪನಿಗಳಿಗೆ ಹೊರಹೊಮ್ಮುವ ಅವಕಾಶಗಳನ್ನು ಪಡೆದುಕೊಳ್ಳಲು ಮತ್ತು ರಫ್ತು ಮಾರುಕಟ್ಟೆಯಲ್ಲಿ ದೊಡ್ಡ ಮಾರಾಟಗಾರನಾಗಲು ಪ್ರೋತ್ಸಾಹಿಸುತ್ತದೆ.
- ಈ ಯೋಜನೆಯು 'ಮೇಡ್ ಇನ್ ಇಂಡಿಯಾ' ಟೆಲಿಕಾಂ ಮತ್ತು ನೆಟ್ ವರ್ಕಿಂಗ್ ಉತ್ಪನ್ನಗಳ ರಫ್ತುಗಳ ಉತ್ತೇಜನ ಸಹ ಒಳಗೊಂಡಿರುತ್ತದೆ.
- 50,000 ಕೋಟಿ ರೂ. ಮೌಲ್ಯದ ಟೆಲಿಕಾಂ ಉಪಕರಣಗಳ ಆಮದನ್ನು ಸರಿದೂಗಿಸಲು ಈ ಯೋಜನೆ ಭಾರತಕ್ಕೆ ಸಹಾಯ ಮಾಡುತ್ತದೆ.



- ಭಾರತವು ಸುಮಾರು 2.44 ಲಕ್ಷ ಕೋಟಿ ರೂ.ಗಳ ಉತ್ಪಾದನೆಯನ್ನು 5 ವರ್ಷಗಳಲ್ಲಿ ಸಾಧಿಸಲಿದೆ ಮತ್ತು ರಫ್ತು ಮೌಲ್ಯವನ್ನು 2 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿ, ಮೌಲ್ಯವರ್ಧನೆ ಹೆಚ್ಚಳದೊಂದಿಗೆ ಉತ್ಪಾದನೆಯಲ್ಲಿ ತನ್ನ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲಿದೆ.
- ಈ ಯೋಜನೆಯು 3,000 ಕೋಟಿ ರೂ.ಗಳಿಗಿಂತ ಹೆಚ್ಚಿನ ಹೂಡಿಕೆಯನ್ನು ತರುತ್ತದೆ ಮತ್ತು 40 ಸಾವಿರಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗವನ್ನು ಸೃಷ್ಟಿಸುತ್ತದೆ.

**ನಿರ್ಣಯಗಳು:** ಔಷಧೀಯ ವಲಯಕ್ಕೆ ಉತ್ಪಾದನೆ ಸಂಪರ್ಕಿತ ಪ್ರೋತ್ಸಾಹಕ (ಪಿಎಲ್.ಐ) ಯೋಜನೆಗೆ ಅನುಮೋದನೆ

**ಪ್ರಯೋಜನಗಳು:**

- ದೇಶದಲ್ಲಿ ಉನ್ನತ ಮೌಲ್ಯದ ಉತ್ಪನ್ನಗಳನ್ನು ಉತ್ಪಾದಿಸುವುದನ್ನು ಉತ್ತೇಜಿಸಲು ಮತ್ತು ರಫ್ತಿನಲ್ಲಿ ಮೌಲ್ಯವರ್ಧನೆಯನ್ನು ಹೆಚ್ಚಿಸಲು ಈ ಯೋಜನೆ ಹಣಕಾಸು ವರ್ಷ 2020-21 ರಿಂದ 2028-29 ರವರೆಗಿನ ಅವಧಿಯದಾಗಿರುತ್ತದೆ.
- 2022-23 ರಿಂದ 2027-28 ರವರೆಗೆ ಆರು ವರ್ಷಗಳ ಅವಧಿಯಲ್ಲಿ ಒಟ್ಟಾರೆ ಮಾರಾಟದ ಹೆಚ್ಚಳ 2,94,000 ಕೋಟಿ ರೂ. ಹಾಗೂ ರಫ್ತು ಹೆಚ್ಚಳವು 1,96,000 ಕೋಟಿ ರೂ. ಆಗಲಿದೆ
- ಈ ಯೋಜನೆಯಿಂದ ವಲಯದ ವೃದ್ಧಿಯ ಪರಿಣಾಮವಾಗಿ 20,000 ನೇರ ಮತ್ತು 80,000 ಪರೋಕ್ಷ ಉದ್ಯೋಗ ಸೃಷ್ಟಿಸುವ ನಿರೀಕ್ಷೆ ಇದೆ.

**ನಿರ್ಣಯಗಳು:** ಬಾಲಾರೋಪಿ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2015ರ ತಿದ್ದುಪಡಿಗಳಿಗೆ ಅನುಮೋದನೆ.

**ಪ್ರಯೋಜನಗಳು:**

- ಇದು ಮಕ್ಕಳ ರಕ್ಷಣೆಗಾಗಿ ಇರುವ ಕ್ರಮಗಳನ್ನು ಬಲಪಡಿಸುತ್ತದೆ.
- ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ಹೆಚ್ಚುವರಿ ಜಿಲ್ಲಾಧಿಕಾರಿ ಸೇರಿದಂತೆ ಜಿಲ್ಲಾಧಿಕಾರಿಗಳಿಗೆ ಇದು ದತ್ತು ಆದೇಶಗಳನ್ನು ನೀಡಲು ಅಧಿಕಾರ ನೀಡುತ್ತದೆ.
- ಅದರ ಸುಗಮ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ದಂಡಾಧಿಕಾರಿಗಳಿಗೆ ಕಾಯಿದೆಯಡಿ ಮತ್ತಷ್ಟು ಅಧಿಕಾರ ನೀಡಲಾಗಿದೆ, ಜೊತೆಗೆ ಸಂಕಷ್ಟದಲ್ಲಿರುವ ಮಕ್ಕಳ ಪರವಾಗಿ ಸಮನ್ವಯದ ಪ್ರಯತ್ನಗಳನ್ನು ರೂಢಿಸುತ್ತದೆ.



# ಲಾಕ್‌ಡೌನ್ ನಡುವೆಯೂ ಬಡವರ ಸಬಲೀಕರಣ

**ಮೂರು ವಾರಗಳ ರಾಷ್ಟ್ರವ್ಯಾಪಿ ಲಾಕ್ ಡೌನ್ ಘೋಷಿಸಿದ 48 ಗಂಟೆಗಳಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬಡವರ ಕಲ್ಯಾಣಕ್ಕೆ ಉನ್ನತ ಆದ್ಯತೆ ನೀಡಿ ಮತ್ತು ಅವರ ಜೀವನೋಪಾಯಕ್ಕಾಗಿ.. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ (ಪಿ.ಎಂ.ಜಿ.ಕೆ.ವೈ.) ಆರಂಭಿಸಿದರು...**

ಲಾಕ್ ಡೌನ್ ಘೋಷಣೆಯೊಂದಿಗೆ ಬಡವರಿಗೆ ಜೀವನೋಪಾಯದ ದೊಡ್ಡ ತೊಡಕು ಎದುರಾಯಿತು. ಬಿಹಾರದ ಸಾದರ್‌ನ ಲಾಲೋ ಮಾಂಜಿ, ಮನೋಜ್ ಮಾಂಜಿ ಮತ್ತು ಸುಂದರ್ ಮಾಂಜಿ ಅವರ ಸ್ಥಿತಿಯೂ ಭಿನ್ನವಾಗಿರಲಿಲ್ಲ. ಲಾಕ್‌ಡೌನ್ ಘೋಷಿಸಿದ ತಕ್ಷಣವೇ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ ಆರಂಭಿಸಲಾಯಿತು. ಸಿಂಕಂದರ್ ಪುರ ಗ್ರಾಮದಲ್ಲಿ, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಆರಂಭವಾಯಿತು. ಲಾಲೋ ಅಲ್ಲಿ ಕೂಲಿಯವರಾಗಿದ್ದರು, ಮನೋಜ್ ಮೇಸ್ತ್ರಿಯಾಗಿದ್ದರು ಮತ್ತು ಸುಂದರ್ ಪೇಯಿಂಟರ್ ಆಗಿದ್ದರು. ಅವರು ಗಳಿಕೆ ಆರಂಭಿಸಿದರು ಮತ್ತು ತಮ್ಮ ಕುಟುಂಬದ ಪೋಷಣೆ ಮಾಡಿದರು. ತಮ್ಮ ಮನೆಯ ಬಳಿಯೇ ಉದ್ಯೋಗ ದೊರೆತ ಮೇಲೆ ತಾವು ಜೀವನೋಪಾಯ ಹುಡುಕಿಕೊಂಡು ಹೊರಗೆ ಹೋಗುವುದಾದರೂ ಏಕೆ ಎಂದು ಲಾಲೋ ಕೇಳುತ್ತಾರೆ. ಉತ್ತಮ ಸಂಖ್ಯೆಯ ಜನರಿಗೆ ಉದ್ಯೋಗಗಳು ಇದ್ದರೂ, ಸರ್ಕಾರವು ಮತ್ತಷ್ಟು ಸಹಾಯ ಮಾಡಲು ಬಯಸಿತು. ಅಗತ್ಯವಿರುವ ಪ್ರತಿ ಕುಟುಂಬಕ್ಕೂ ಉಚಿತ ಆಹಾರ ಧಾನ್ಯಗಳನ್ನು ನೀಡಿತು. ಜಾರ್ಖಂಡ್‌ನ ಗಿರಿದಿಹ್‌ನ ರಾಮ್ ಶಂಕರ್ ಠಾಕೂರ್ ಆಗಿರಲಿ ಅಥವಾ ಮಧ್ಯಪ್ರದೇಶದ ಅನುಪ್ಪೂರಿನ ಅನಿತಾ ಆಗಿರಲಿ, ಅವರೆಲ್ಲರೂ ಲಾಕ್‌ಡೌನ್ ಮಧ್ಯೆ ಉಚಿತ ಆಹಾರ ಧಾನ್ಯಗಳನ್ನು ಪಡೆದ 80 ಕೋಟಿ ಜನರಲ್ಲಿ ಸೇರಿದ್ದರು.

ಕೋವಿಡ್ - 19 ಮಾರ್ಚ್ 24, 2020 ರಿಂದ ಮೂರು ವಾರಗಳ ಕಾಲ ಲಾಕ್‌ಡೌನ್ ಅನಿವಾರ್ಯಗೊಳಿಸಿತು, ಇದು ಭಾರತವನ್ನು ಸ್ತಬ್ಧಗೊಳಿಸಿತು. ಇದು ಯಾರೂ ಕೆಲಸಕ್ಕೆ ಹೊರಗೆ ಹೋಗದಂತೆ ಮಾಡಿತು. ದಿನಗೂಲಿಯಿಂದ ನಡೆಯುವ ಕುಟುಂಬಗಳಿಗೆ, ವೃದ್ಧರು ಹಾಗೂ ದಿವ್ಯಾಂಗರಿಗೆ ಇದು ಶೋಚನೀಯವಾಗಿತ್ತು.

2020ರ ಮಾರ್ಚ್ 26ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ 2.76 ಲಕ್ಷ ಕೋಟಿ ರೂ.ಗಳ ಪರಿಹಾರದ ಪ್ಯಾಕೇಜ್ ಅನ್ನು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ (ಪಿಎಂಜಿಕೆವೈ) ಅಡಿ ಘೋಷಿಸಿದರು. ಈ ಕಲ್ಪನೆಯ ಹಿಂದೆ ಬಡವರ ರಕ್ಷಣೆ ಮತ್ತು ಅವರಿಗೆ ಕೊರೊನಾ ವೈರಾಣು ವಿರುದ್ಧ ಹೋರಾಡಲು ನೆರವಾಗುವುದಾಗಿತ್ತು.

ಈ ಯೋಜನೆಯಡಿ, ಅರ್ಹ ಸಾರ್ವಜನಿಕ ವಿತರಣೆ (ಟಿಪಿಡಿಎಸ್)ಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಫಲಾನುಭವಿಗಳಿಗೆ

**ಪಿಎಂಜಿಕೆವೈನ ಸಾಧನೆಗಳು ಮತ್ತು ಮೈಲಿಗಲ್ಲುಗಳು:**

- **2.76 ಲಕ್ಷ ಕೋಟಿ** ರೂ. ಮೌಲ್ಯ
- **80 ಕೋಟಿ** ಜನರಿಗೆ ಉಚಿತ ಆಹಾರ ಧಾನ್ಯ
- **8 ಕೋಟಿ** ಕುಟುಂಬಗಳಿಗೆ ಉಚಿತ ಅಡುಗೆ ಅನಿಲ
- **42 ಕೋಟಿ** ರೈತರು, ಮಹಿಳೆಯರು, ಹಿರಿಯ ನಾಗರಿಕರು, ಬಡವರು ಮತ್ತು ದುರ್ಬಲರಿಗೆ ನೇರ ನಗದು ಸೌಲಭ್ಯ.

**ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್ ಕೇವಲ ಆಹಾರ ನೀಡಿದ್ದಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಿನದನ್ನೂ ಒಳಗೊಂಡಿತ್ತು:** ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್- 19 ವಿರುದ್ಧ ಹೋರಾಡುವ **22 ಲಕ್ಷ** ಆರೋಗ್ಯ ಕಾರ್ಯಕರ್ತರಿಗೆ **50 ಲಕ್ಷ ರೂ.** ವಿಮೆ ವ್ಯಾಪ್ತಿ ನೀಡಲಾಗಿದೆ. ಇದರಲ್ಲಿ ನೈರ್ಮಲ್ಯ ಕಾರ್ಯಕರ್ತರು, ಅರೆ ವೈದ್ಯಕೀಯ ಸಿಬ್ಬಂದಿ ಮತ್ತು ತಂತ್ರಜ್ಞರೂ ಸೇರಿದ್ದಾರೆ.

**ಪಿಎಂ ಗರೀಬ್ ಕಲ್ಯಾಣ ಅನ್ನ ಯೋಜನೆ:** ಆಹಾರ ಧಾನ್ಯ ಸಿಗದ ಕಾರಣಕ್ಕೆ ಸಂಕಷ್ಟ ಪಡುತ್ತಿದ್ದ ಬಡವರನ್ನು ರಕ್ಷಿಸಲು ಯೋಜನೆ. ಆರಂಭದಲ್ಲಿ, 2020ರ ಜೂನ್ ವರೆಗೆ ಯೋಜನೆ ಆರಂಭಿಸಲಾಯಿತು. ನಂತರ ಅದನ್ನು ನವೆಂಬರ್ 2020ರವರೆಗೆ ವಿಸ್ತರಿಸಲಾಯಿತು. ಇದರ ಅಡಿಯಲ್ಲಿ 80 ಕೋಟಿ ವ್ಯಕ್ತಿಗಳಿಗೆ - ಅಂದಾಜು ಭಾರತದ ಒಟ್ಟು ಜನಸಂಖ್ಯೆಯ ಮೂರನೇ ಎರಡರಷ್ಟು- ಉಚಿತವಾಗಿ ಆಹಾರ ಧಾನ್ಯ ಒದಗಿಸಲಾಯಿತು. 5.43 ಲಕ್ಷ, ಮೆಟ್ರಿಕ್ ಟನ್ ಬೇಳೆಕಾಳನ್ನು 18.8 ಕೋಟಿ ಫಲಾನುಭವಿಗಳಿಗೆ 2020ರ ಏಪ್ರಿಲ್ - ಜೂನ್ ನಡುವೆ ವಿತರಿಸಲಾಯಿತು.



ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೆ.ಜಿ.ಯಂತೆ ಉಚಿತವಾಗಿ ಕೇಂದ್ರ ಸಂಗ್ರಹದಿಂದ ಆಹಾರ ಧಾನ್ಯಗಳನ್ನು ಹೆಚ್ಚುವರಿ ಹಂಚಿಕೆಗಾಗಿ ಸರ್ಕಾರವು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ (ಪಿಎಂ - ಜಿಕೆಎವೈ) ಆರಂಭಿಸಿತು. ಈ ಹೆಚ್ಚುವರಿ ಆಹಾರ ಧಾನ್ಯವು ಎನ್.ಎಫ್.ಎಸ್.ಎ. ಕಡ್ಡಾಯ ಅಗತ್ಯದ ಹೊರತಾದುದಾಗಿತ್ತು. ಈ ಯೋಜನೆಯನ್ನು ನವೆಂಬರ್ 2020ರವರೆಗೆ ವಿಸ್ತರಿಸಲಾಯಿತು. 75,000 ಕೋಟಿ ರೂ.ಗೂ ಅಧಿಕ ಮೌಲ್ಯದ 200 ಎಲ್.ಎಂ.ಟಿ.ಗೂ ಅಧಿಕ ಆಹಾರ ಧಾನ್ಯವನ್ನು ಒದಗಿಸಲಾಯಿತು. ■

**ರೈತರಿಗೆ ಪ್ರಯೋಜನ:** ಪಿ.ಎಂ. ಕಿಸಾನ್ ಯೋಜನೆ ಅಡಿಯಲ್ಲಿ 2000 ರೂ.ಗಳ ಮೂರು ಕಂತುಗಳನ್ನು 2020ರ ಡಿಸೆಂಬರ್ ವರೆಗೆ 9 ಕೋಟಿ ರೈತರ ಖಾತೆಗೆ ಜಮಾ ಮಾಡಲಾಗಿದೆ.

**ಬಡವರಿಗೆ ನೆರವು:** ಮೂರು ತಿಂಗಳುಗಳ ಕಾಲ 500 ರೂ. ಪರಿಹಾರವನ್ನು 20.60 ಕೋಟಿ ಪ್ರಧಾನಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ)ಯ ಮಹಿಳಾ ಖಾತೆದಾರರಿಗೆ ನೀಡಲಾಯಿತು. 10,325 ಕೋಟಿ ರೂ.ಗಳನ್ನು ಮೊದಲ ಕಂತಿನಲ್ಲಿ; 10,315 ಕೋಟಿ ರೂ.ಗಳನ್ನು ಎರಡನೇ ಕಂತಿನಲ್ಲಿ ಮತ್ತು 10,312 ಕೋಟಿ ರೂ.ಗಳನ್ನು ಮೂರನೇ ಕಂತಿನಲ್ಲಿ ಅವರ ಖಾತೆಗೆ ಜಮಾ ಮಾಡಲಾಯಿತು. ಇದರ ಜೊತೆಗೆ 2814.5ಕೋಟಿ ರೂ.ಗಳನ್ನು 2.81 ಕೋಟಿ ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಮತ್ತು ದಿವ್ಯಾಂಗ ವ್ಯಕ್ತಿಗಳಿಗೆ ಕಷ್ಟವನ್ನು ಮೆಟ್ಟಿನಿಲ್ಲಲು ತಲಾ 500 ರೂ.ಗಳ ಎರಡು ಕಂತುಗಳ ಹಣ ವಿತರಿಸಲಾಯಿತು. 1.82 ಕೋಟಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರು 4,987.18 ಕೋಟಿ ರೂ. ಆರ್ಥಿಕ ನೆರವು ಪಡೆದರು.

**ಪಿಎಂ ಗರಿಬ್ ಕಲ್ಯಾಣ್ ಯೋಜನೆ ಅಡಿಯಲ್ಲಿ 8.5 ಕೋಟಿ ಬಡ ಕುಟುಂಬಗಳಿಗೆ ಉಚಿತ ಅಡುಗೆ ಅನಿಲ ಸಿಲಿಂಡರ್:** 2020ರ ಏಪ್ರಿಲ್ ಮತ್ತು ಮೇ ನಡುವೆ 8.52 ಕೋಟಿ ಬುಕ್ ಮಾಡಿ ಪ್ರಧಾನಮಂತ್ರಿ ಉಜ್ವಲಾ ಯೋಜನೆ (ಪಿಎಂಯುವೈ) ಸಿಲಿಂಡರ್‌ಗಳನ್ನು ವಿತರಿಸಲಾಯಿತು. ಹೆಚ್ಚುವರಿ 3.27 ಕೋಟಿ ಪಿಎಂಯುವೈ ಉಚಿತ ಸಿಲಿಂಡರ್‌ಗಳನ್ನು ಜೂನ್‌ನಲ್ಲಿ ಫಲಾನುಭವಿಗಳಿಗೆ ವಿತರಿಸಲಾಯಿತು ಮತ್ತು ಜುಲೈ 2020ರಲ್ಲಿ 1.05 ಕೋಟಿ ಮಂದಿಗೆ ವಿತರಿಸಲಾಯಿತು.

**ಸಂಘಟಿತ ವಲಯದಲ್ಲಿ ಕಡಿಮೆ ಆದಾಯ ಗಳಿಸುವವರಿಗೆ ನೆರವು:** 100ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಸಂಸ್ಥೆಗಳಲ್ಲಿ ತಿಂಗಳಿಗೆ 15 ಸಾವಿರ ರೂ.ಗಿಂತ ಕಡಿಮೆ ವೇತನ ಗಳಿಸುವ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಭೀತಿಯಲ್ಲಿದ್ದರು. ಈ ಪ್ಯಾಕೇಜ್ ಅಡಿಯಲ್ಲಿ, ಸರ್ಕಾರವು ಅವರ ಮಾಸಿಕ ವೇತನದ ಶೇಕಡಾ 24 ರಷ್ಟನ್ನು ಅವರ ಪಿಎಫ್ ಖಾತೆಗಳಿಗೆ ಜೂನ್ 2020 ರವರೆಗೆ ಪಾವತಿಸಲು ಪ್ರಸ್ತಾಪಿಸಿತು. ಸರ್ಕಾರವು ಶೇಕಡಾ 24ರಷ್ಟು ಇಪಿಎಫ್ ಕೊಡುಗೆಯಾದ 2,476 ಕೋಟಿ ರೂ.ಗಳನ್ನು 0.43 ಕೋಟಿ ಉದ್ಯೋಗಿಗಳಿಗೆ ವರ್ಗಾಯಿಸಿದೆ. 514.6 ಕೋಟಿ ರೂ. ನಷ್ಟು ಮಾರ್ಚ್ 2020 ರ ಲಾಭವನ್ನು 34.19 ಲಕ್ಷ ಉದ್ಯೋಗಿಗಳಿಗೆ ನೀಡಲಾಗಿದೆ. ಏಪ್ರಿಲ್ ನಲ್ಲಿ 32.87 ಲಕ್ಷ ಉದ್ಯೋಗಿಗಳಿಗೆ 500.8 ಕೋಟಿ ರೂ. ನೀಡಲಾಗಿದೆ. ಅದೇ ರೀತಿ ಮೇ ನಲ್ಲಿ 32.68 ಲಕ್ಷ ಉದ್ಯೋಗಿಗಳಿಗೆ 482.6 ಕೋಟಿ ರೂ. ನೀಡಲಾಗಿದೆ. ಜೂನ್ ನಲ್ಲಿ 32.21 ಲಕ್ಷ ಉದ್ಯೋಗಿಗಳಿಗೆ (491.5 ಕೋಟಿ ರೂ.ನಷ್ಟು), ಜುಲೈ ನಲ್ಲಿ 30.01 ಲಕ್ಷ ಉದ್ಯೋಗಿಗಳಿಗೆ (ರೂ. 461.9 ಕೋಟಿ ರೂ.) ಮತ್ತು ಆಗಸ್ಟ್ ನಲ್ಲಿ 1.7 ಲಕ್ಷ ಉದ್ಯೋಗಿಗಳಿಗೆ (ರೂ. 24.74 ಕೋಟಿ) ಮೊತ್ತ ನೀಡಲಾಗಿದೆ.

**ಇ.ಪಿ.ಎಫ್.ಓ. ಸದಸ್ಯರಿಗೆ ಬಾಕಿ ಉಳಿದಿರುವ ಮರುಪಾವತಿಸಲಾಗದ ಮುಂಗಡದ ಶೇಕಡಾ 75ರಷ್ಟು ಅಥವಾ 3 ತಿಂಗಳ ವೇತನ ಯಾವುದು ಕಡಿಮೆಯೋ ಅದನ್ನು ಪಡೆಯಲು ಅವಕಾಶ:** ಇ.ಪಿ.ಎಫ್.ಓ.ದ ಕನಿಷ್ಠ 36.05 ಲಕ್ಷ ಸದಸ್ಯರು ಇ.ಪಿ.ಎಫ್.ಓ. ಖಾತೆಯಿಂದ ಮರುಪಾವತಿಸಲಾಗದ ರೂ. 9,543 ಕೋಟಿ.ಮುಂಗಡವನ್ನು ಆನ್‌ಲೈನ್‌ನಲ್ಲಿ ಹಿಂಪಡೆಯುವ ಪ್ರಯೋಜನ ಪಡೆದಿದ್ದಾರೆ.





# ದೇಶವನ್ನು ಮುನ್ನಡೆಸುವ
## ಬಜೆಟ್ 2021-22

**ಕೊರೊನಾ ವೈರಾಣು ಸಂಕ್ರಾಮಿಕ ಕಾಲದ ನಂತರದ ಮೊದಲ ಸಾಮಾನ್ಯ ಬಜೆಟ್ ಸರ್ಕಾರದ ಆದ್ಯತೆಗಳನ್ನು ವಿವರಿಸಿದೆ. ಬಜೆಟ್ ಬಗ್ಗೆ ಜನರ ಸಕಾರಾತ್ಮಕ ಪ್ರತಿಕ್ರಿಯೆ ದೇಶದ ಮನಃಸ್ಥಿತಿಯನ್ನು ತಿಳಿಸಿದೆ. ಈಗ, ದೇಶದ ಉನ್ನತ ನಾಯಕತ್ವವು ಬಜೆಟ್‌ನ ಪರಿಣಾಮಕಾರಿ ಅನುಷ್ಠಾನಕ್ಕೆ ಸಜ್ಜಾಗಿದೆ. ಉದ್ದೇಶ ಸ್ಪಷ್ಟವಾಗಿದೆ - ಬಜೆಟ್ ಔಪಚಾರಿಕವಾಗಿ ಉಳಿಯಬಾರದು ಆದರೆ ಅದರ ಪ್ರಯೋಜನಗಳು ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು...**

ಸಂಸತ್ತಿನ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ದೇಶದ ಉನ್ನತ ನಾಯಕತ್ವವು ಬಜೆಟ್ ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದ್ಯತೆ ನೀಡುತ್ತಿರುವಾಗ ಮತ್ತು ಅದನ್ನು ಔಪಚಾರಿಕವಾಗಿ ಪರಿಗಣಿಸದೇ ಇರುವುದು ಇದು ಪ್ರಥಮ ಉದಾಹರಣೆಯಾಗಿದೆ. ಬಜೆಟ್ ಮತ್ತು ಸರ್ಕಾರದ ದೃಷ್ಟಿಕೋನವು ಬೇರುಮಟ್ಟವನ್ನು ತಲುಪುವುದನ್ನು ಖಾತ್ರಿಪಡಿಸಿಕೊಳ್ಳಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿ ವಲಯದೊಂದಿಗೆ ಸಂವಾದವನ್ನು ಪ್ರಾರಂಭಿಸುತ್ತಿದ್ದಾರೆ. ಈ ಉಪಕ್ರಮದ ಪ್ರಮುಖ ಉದ್ದೇಶ ಸರ್ಕಾರದ ಗಾಂಭೀರ್ಯವನ್ನು ವಿಶದಪಡಿಸುವುದು. ದೇಶದ ಅಭಿವೃದ್ಧಿಯಲ್ಲಿ ಪ್ರತಿಯೊಂದು ವಲಯವೂ ತನ್ನ ಪಾತ್ರವನ್ನು ವಹಿಸುತ್ತಿದೆ ಎಂದು ಖಚಿತಪಡಿಸಿಕೊಳ್ಳುವುದು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಜೆಟ್ ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಹಲವಾರು ವೆಬಿನಾರ್‌ಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಒಂದು ಕಡೆ, ಹೂಡಿಕೆ ಮತ್ತು ಆಸ್ತಿ ಮಾನ್ಯೀಕರಣ ಮಹತ್ವವನ್ನು ಅವರು ಒತ್ತಿ ಹೇಳಿದ್ದರೆ, ಮತ್ತೊಂದೆಡೆ, ಆರೋಗ್ಯ, ಮೂಲಸೌಕರ್ಯ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಬಜೆಟ್ ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಿದ್ದಾರೆ. ಕಾರ್ಯತಂತ್ರ ರಹಿತ ಪಿ.ಎಸ್.ಯು. ಗಳನ್ನು ಖಾಸಗೀಕರಣಗೊಳಿಸುವ ಕುರಿತು ಪ್ರಧಾನಮಂತ್ರಿ ಪ್ರತಿಪಾದಿಸಿದ್ದಾರೆ ಮತ್ತು ವ್ಯವಹಾರದಲ್ಲಿರುವುದು ಸರ್ಕಾರದ ಕೆಲಸವಲ್ಲ ಎಂದೂ ಹೇಳಿದ್ದಾರೆ. 'ಹಣಮಾನ್ಯೀಕರಣ ಮತ್ತು ಆಧುನೀಕರಣದ' ಮೂಲಕ ಇಡೀ ಆರ್ಥಿಕತೆಯ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದೂ ತಿಳಿಸಿದ್ದಾರೆ.

ನಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಬಗ್ಗೆ ಮಾತನಾಡಿದ ಅವರು, ಈ ಹಲವು ಉದ್ಯಮಗಳಿಗೆ ತೆರಿಗೆದಾರರ ಹಣದ ಮೂಲಕ ಬೆಂಬಲ ನೀಡಬೇಕಾಗುತ್ತದೆ ಮತ್ತು ಇದರ ಜೊತೆಗೆ ಆರ್ಥಿಕತೆಯ ಮೇಲೆ ದೊಡ್ಡ ಹೊರೆಯೂ ಬೀಳುತ್ತದೆ ಎಂದು ತಿಳಿಸಿದ್ದಾರೆ. ಸರ್ಕಾರ ಯಾವಾಗ ನಿರ್ದಿಷ್ಟ ಆಸ್ತಿಯನ್ನು ಮಾನ್ಯೀಕರಿಸುತ್ತದೋ, ಅದು ಖಾಸಗಿ ವಲಯದಿಂದ ಪರಿವರ್ತಿತವಾಗುತ್ತದೆ. ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಬಲಪಡಿಸಲು ಸರ್ಕಾರ ಮಾರ್ಗಸೂಚಿಯನ್ನೂ ರಚಿಸಿದೆ ಎಂದು ಅವರು ತಿಳಿಸಿದ್ದಾರೆ.



# ಸರ್ಕಾರ ಹೇಗೆ ನಿಧಿಯನ್ನು ರೂಢಿಸುತ್ತದೆ:



'ಕನಿಷ್ಠ ಸರ್ಕಾರ ಮತ್ತು ಗರಿಷ್ಠ ಆಡಳಿತ' ಕಲ್ಪನೆಯನ್ನು ಮುಂದಿಟ್ಟ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶವು ಸರ್ಕಾರದ ನಿಯಂತ್ರಣದಲ್ಲಿ ಸಾಕಷ್ಟು ಬಳಕೆಯಾಗದ ಮತ್ತು ಅಲ್ಪ - ಬಳಕೆಯಾದ ಆಸ್ತಿಗಳನ್ನು ಹೊಂದಿದೆ. ಈ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ರಾಷ್ಟ್ರೀಯ ಆಸ್ತಿ ಹಣಗಳಿಕೆ ಪೈಪ್ ಲೈನ್ ಅನ್ನು ಘೋಷಿಸಿತು. ಇದರ ಅಡಿಯಲ್ಲಿ ತೈಲ, ಅನಿಲ, ಬಂದರುಗಳು, ವಿಮಾನ ನಿಲ್ದಾಣಗಳು ಮತ್ತು ವಿದ್ಯುತ್ ಕ್ಷೇತ್ರಗಳಲ್ಲಿ ಸುಮಾರು 100 ಆಸ್ತಿಗಳನ್ನು ಮಾನ್ಯಗೊಳಿಸುವುದು ಗುರಿಯಾಗಿದೆ. ಈ ಸ್ವತ್ತುಗಳಿಗೆ 2.5 ಲಕ್ಷ ಕೋಟಿ ರೂ.ಗಳ ಹೂಡಿಕೆ ಅವಕಾಶಗಳಿವೆ ಎಂದು ಅಂದಾಜಿಸಲಾಗಿದೆ.

### ಹಣಕಾಸು ಸೇವೆಗಳ ವಲಯದಲ್ಲಿ ಬಜೆಟ್ ನ ಸಮರ್ಥ ಅನುಷ್ಠಾನ ಕುರಿತಂತೆ ಪ್ರಧಾನಮಂತ್ರಿಯವರ ಭಾಷಣ

- ನಮ್ಮ ಮೊದಲ ಆದ್ಯತೆಯೆಂದರೆ ಠೇವಣಿದಾರ ಮತ್ತು ಹೂಡಿಕೆದಾರರು ವಿಶ್ವಾಸ ಮತ್ತು ಪಾರದರ್ಶಕತೆಯ ಅನುಭವ ಪಡೆಯಬೇಕು.
- ದೇಶದ ಹಣಕಾಸು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ದೃಷ್ಟಿಕೋನವು ಬಹಳ ಸ್ಪಷ್ಟವಾಗಿದೆ. ಬಜೆಟ್ ಈ ದೃಷ್ಟಿಯನ್ನು ಮುಂದೆ ತೆಗೆದುಕೊಂಡು ಸಾಗುತ್ತಿದೆ.
- ಸಾಮಾನ್ಯ ಕುಟುಂಬಗಳ ಗಳಿಕೆಯ ಸುರಕ್ಷತೆ, ಬಡವರಿಗೆ ಸರ್ಕಾರದ ಸವಲತ್ತುಗಳನ್ನು ಪರಿಣಾಮಕಾರಿಯಾಗಿ ಮತ್ತು ಸೋರಿಕೆ ಮುಕ್ತವಾಗಿ ತಲುಪಿಸುವುದು ಮತ್ತು ಅಭಿವೃದ್ಧಿಗೆ ಮೂಲಸೌಕರ್ಯ ಹೂಡಿಕೆಯನ್ನು ಉತ್ತೇಜಿಸುವುದು ನಮ್ಮ ಆದ್ಯತೆಗಳಾಗಿವೆ.
- ರೈತರು, ಎಂ.ಎಸ್.ಎಂ.ಇ.ಗಳು ಮತ್ತು ನವೋದ್ಯಮಗಳ ಮೂಲಕ ಆತ್ಮನಿರ್ಭರ ಭಾರತದ ಕನಸು ನನಸಾಗಲಿದೆ.

### ಕೃಷಿ ವಲಯದ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಖಾಸಗಿ ವಲಯದ ಪಾಲ್ಗೊಳ್ಳುವಿಕೆಯನ್ನು ಪ್ರತಿಪಾದಿಸಿದ ಪ್ರಧಾನಮಂತ್ರಿ. ಆಯ್ದ ಭಾಗಗಳು:

- 21ನೇ ಶತಮಾನದ ಭಾರತದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು, ಮೌಲ್ಯವರ್ಧನೆಯ ಜೊತೆಗೆ ಕೊಯ್ಲಿನ ನಂತರದ ಉತ್ಪಾದನೆ ಅಥವಾ ಆಹಾರ ಸಂಸ್ಕರಣಾ ಕ್ರಾಂತಿಯ ಅಗತ್ಯವಿದೆ.
- ಸಂಸ್ಕರಿಸಿದ ಆಹಾರಕ್ಕಾಗಿ ದೇಶದ ಕೃಷಿ ಕ್ಷೇತ್ರವನ್ನು ಜಾಗತಿಕ ಮಾರುಕಟ್ಟೆಗೆ ನಾವು, ವಿಸ್ತರಿಸಬೇಕಾಗಿದೆ.
- ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆಗೆ ಆದ್ಯತೆ ನೀಡಿ ಕೃಷಿ ಸಾಲದ ಗುರಿಯನ್ನು ಸರ್ಕಾರ 16.50 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿದೆ.

## ಜಾಗತಿಕ ವಿಶ್ವಾಸ ಗೆದ್ದ ಭಾರತೀಯ ಆರೋಗ್ಯ ವಲಯ



ಕೊರೊನ ವೈರಾಣು ಸಾಂಕ್ರಾಮಿಕ ಸಮಯದಲ್ಲಿ ಭಾರತ ತನ್ನ ಅನುಭವ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಂತೆ, ದೇಶದ ದೃಢವಾದ ಆರೋಗ್ಯ ಕ್ಷೇತ್ರವನ್ನು ಜಗತ್ತು ಗಣನೆಗೆ ತೆಗೆದುಕೊಂಡಿತು. ಭಾರತದ ಆರೋಗ್ಯ ಕ್ಷೇತ್ರದ ಪ್ರತಿಷ್ಠೆ ಮತ್ತು ಅದರ ಮೇಲಿನ ನಂಬಿಕೆ ಜಾಗತಿಕವಾಗಿ ಹೊಸ ಮಟ್ಟವನ್ನು ತಲುಪಿತು. ಭಾರತೀಯ ವೈದ್ಯರು ಮಾತ್ರವಲ್ಲ ಭಾರತೀಯ ಔಷಧಗಳು ಮತ್ತು ಲಸಿಕೆಗಳು ಹೊಸ ವಿಶ್ವಾಸ ಗಳಿಸಿವೆ.

### ಆರೋಗ್ಯ ವಲಯದಲ್ಲಿ ಸಮರ್ಥವಾಗಿ ಬಜೆಟ್ ಅನುಷ್ಠಾನ ಕುರಿತಂತೆ ಪ್ರಧಾನಮಂತ್ರಿಯವರ ಭಾಷಣ

- ಆರೋಗ್ಯ ವಲಯಕ್ಕೆ 2021-22ರಲ್ಲಿ ಮಾಡಲಾದ ಹಂಚಿಕೆ, ಅಭೂತಪೂರ್ವವಾಗಿದ್ದು, ಇದು ದೇಶದ ಪ್ರತಿಯೊಬ್ಬ ಪ್ರಜೆಗೂ ಉತ್ತಮ ಆರೋಗ್ಯ ಆರೈಕೆ ಒದಗಿಸುವ ಸರ್ಕಾರದ ಬದ್ಧತೆಯನ್ನು ಪ್ರದರ್ಶಿಸುತ್ತದೆ.
- ನಾವು ವೈದ್ಯಕೀಯ ಸಲಕರಣೆಗಳಿಂದ ಔಷಧಗಳವರೆಗೆ, ವೆಂಟಿಲೇಟರ್ ಗಳಿಂದ ಲಸಿಕೆಯವರೆಗೆ, ವೈಜ್ಞಾನಿಕ ಸಂಶೋಧನೆಗಳಿಂದ ನಿಗಾ ಮೂಲಸೌಕರ್ಯದವರೆಗೆ, ವೈದ್ಯರುಗಳಿಂದ ಸೋಂಕು ರೋಗ ತಜ್ಞರವರೆಗೆ ಎಲ್ಲದರ ಬಗ್ಗೆ ಗಮನ ಹರಿಸಬೇಕು.
- ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳ ಜಾಲ ನಿರ್ಮಾಣದಲ್ಲಿ ಖಾಸಗಿ ವಲಯ ಪಿಪಿಪಿ ಮಾದರಿಯನ್ನು ಬೆಂಬಲಿಸುತ್ತದೆ. ಅದು ಪಿಎಂ-ಜೆ.ಎ.ವೈ, ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಅಭಿಯಾನ ಮತ್ತು ನಾಗರಿಕರ ಡಿಜಿಟಲ್ ಆರೋಗ್ಯ ದಾಖಲೆಗಳಲ್ಲಿ ಪಾಲುದಾರಿಕೆ ಹೊಂದಬಹುದು.

ಭಾರತವನ್ನು ಆರೋಗ್ಯಪೂರ್ಣವಾಗಿಡಲು ನಾವು ನಾಲ್ಕು ಹಂತದ ಕಾರ್ಯತಂತ್ರದೊಂದಿಗೆ ಶ್ರಮಿಸುತ್ತಿದ್ದೇವೆ: ರೋಗ ತಡೆ ಮತ್ತು ಯೋಗಕ್ಷೇಮದ ಉತ್ತೇಜನ; ಬಡವರಲ್ಲೇ ಕಡು ಬಡವರಿಗೆ ಅಗ್ಗದ ಮತ್ತು ದಕ್ಷ ಚಿಕಿತ್ಸೆ ಒದಗಿಸುವುದು; ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಆರೈಕೆಯ ವೃತ್ತಿಪರರ ಗುಣಮಟ್ಟ ಮತ್ತು ಪ್ರಮಾಣ ಹೆಚ್ಚಿಸುವುದು; ಮತ್ತು ಸಕಾಲದಲ್ಲಿ ಅಡೆತಡೆಗಳನ್ನು ನಿವಾರಿಸಲು ಅಭಿಯಾನದೋಪಾದಿಯಲ್ಲಿ ಮತ್ತು ಕೇಂದ್ರೀಕೃತ ರೀತಿಯಲ್ಲಿ ಕೆಲಸ ಮಾಡುವುದು.

### ರಕ್ಷಣಾ ಉತ್ಪಾದನೆಯಲ್ಲಿ ವೃದ್ಧಿ



ಭಾರತವು ಶಸ್ತ್ರಾಸ್ತ್ರ ಮತ್ತು ಸೇನಾ ಸಲಕರಣೆಗಳ ತಯಾರಿಕೆಯಲ್ಲಿ ಶತಮಾನಗಳಷ್ಟು ಹಳೆಯ ಅನುಭವ ಹೊಂದಿದೆ. ಈಗ, ಭಾರತ ತನ್ನ ಸಾಮರ್ಥ್ಯ ಮತ್ತು ದಕ್ಷತೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಕಾರ್ಯಪ್ರವೃತ್ತವಾಗಿದೆ. ರಕ್ಷಣೆಗೆ ಸಂಬಂಧಿಸಿದ 100 ಪ್ರಮುಖ ಸರಕುಗಳನ್ನು ಭಾರತ ಪಟ್ಟಿ ಮಾಡಿದ್ದು, ಇದನ್ನು ನೇತ್ಯಾತ್ಮಕ ಪಟ್ಟಿ ಎಂದು ಕರೆಯಲಾಗಿದೆ. ಈ ಸರಕುಗಳನ್ನು ಸ್ಥಳೀಯ ಕೈಗಾರಿಕೆಗಳ ನೆರವಿನಿಂದ ಉತ್ಪಾದಿಸಲಾಗುತ್ತದೆ. ಭಾರತದ ಲಘು ಯುದ್ಧ ವಿಮಾನ ತೇಜಸ್ ಅನ್ನು ಕಡತಗಳಿಗೆ ಸೀಮಿತಗೊಳಿಸುವ ಕಾಲವೊಂದಿತ್ತು, ಆದರೆ ತೇಜಸ್ ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ತನ್ನ ಎಂಜಿನಿಯರ್ ಗಳು ಮತ್ತು ವಿಜ್ಞಾನಿಗಳ ಸಾಮರ್ಥ್ಯಗಳ ಮೇಲೆ ಅವಲಂಬಿಸಿತು. ಈಗ, ತೇಜಸ್ ಆಕಾಶದಲ್ಲಿ ಮನೋಹರವಾಗಿ ಹಾರುತ್ತಿದೆ. ಕೆಲವು ವಾರಗಳ ಹಿಂದೆ, ತೇಜಸ್ ಗೆ 48,000 ಕೋಟಿ ರೂ. ಬೇಡಿಕೆ ಸಲ್ಲಿಸಲಾಗಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ.

### ರಕ್ಷಣಾ ವಲಯದಲ್ಲಿ ಬಜೆಟ್ ಒದಗಣೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತಂತೆ ಪ್ರಧಾನಮಂತ್ರಿ ಭಾಷಣ:

- 2014 ರಿಂದ, ಪಾರದರ್ಶಕತೆ, ಊಹಾತ್ಮಕತೆ ಮತ್ತು ಸುಗಮ ವಾಣಿಜ್ಯದೊಂದಿಗೆ, ನಾವು ರಕ್ಷಣಾ ಕ್ಷೇತ್ರದಲ್ಲಿ ನಿರಂತರವಾಗಿ ಮುಂದೆ ಸಾಗುತ್ತಿದ್ದೇವೆ.
- ಪರವಾನಗಿ ರದ್ದು, ನಿಯಂತ್ರಣಗಳ ತೆರವು, ರಫ್ತು ಉತ್ತೇಜನ, ವಿದೇಶಿ ಹೂಡಿಕೆ ಉದಾರೀಕರಣದಂತಹ ಕ್ರಮಗಳೊಂದಿಗೆ, ನಾವು ಬಲಿಷ್ಠ ಕ್ರಮಗಳನ್ನು ಕೈಗೊಂಡಿದ್ದೇವೆ.
- ರಕ್ಷಣಾ ಕ್ಷೇತ್ರದಲ್ಲಿನ ಸ್ವಾವಲಂಬನೆಯನ್ನು ಸೈನಿಕರ ಮತ್ತು ಯುವಕರ ಸಬಲೀಕರಣವೆಂದು ನೋಡಬೇಕಾಗಿದೆ.
- ಖಾಸಗಿ ವಲಯವು ಉತ್ಪಾದನೆ, ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಮುಂದೆ ಬರಬೇಕೆಂದು ನಾನು ಒತ್ತಾಯಿಸುತ್ತೇನೆ.
- ಎಂ.ಎಸ್.ಎಂ.ಇ.ಗಳು ಇಡೀ ಉತ್ಪಾದನಾ ವಲಯಕ್ಕೆ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿವೆ. ಇಂದು ನಡೆಯುತ್ತಿರುವ ಸುಧಾರಣೆಗಳು ಎಂ.ಎಸ್.ಎಂ.ಇ.ಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡುತ್ತಿವೆ ಮತ್ತು ವಿಸ್ತರಣೆಗೆ ಪ್ರೋತ್ಸಾಹ ನೀಡಲಿವೆ. ■

ಪ್ರಧಾನಮಂತ್ರಿಯವರ ಪೂರ್ಣ ಭಾಷಣ ಆಲಿಸಲು ಕ್ಯು.ಆರ್. ಕೋಡ್ ಸ್ಕ್ಯಾನ್ ಮಾಡಿ



# ಪರಿಸರ ಸಂರಕ್ಷಣೆಗೆ ಭಾರತ ಬದ್ಧ

**ಭೂಮಿಯು ಹವಾಮಾನ ಬದಲಾವಣೆಗೆ ಸಾಕ್ಷಿಯಾಗುತ್ತಿರುವ ಮತ್ತು ಇಡೀ ಭೂಮಂಡಲ ತಾಪಮಾನ, ಬರ, ಪ್ರವಾಹ, ಕಾಡ್ಗಿಚ್ಚು, ಮಳೆ ಮತ್ತು ಹಿಮಪಾತದ ಮಾದರಿಗಳಲ್ಲಿ ಬದಲಾವಣೆಯನ್ನು ದಾಖಲಿಸುತ್ತಿರುವ ಸಮಯದಲ್ಲಿ, 2015 ರ ಪ್ಯಾರಿಸ್ ಒಪ್ಪಂದದ ಪ್ರಕಾರ ಜಾಗತಿಕ ತಾಪಮಾನವನ್ನು 2 ಡಿಗ್ರಿ ಸೆಲ್ಸಿಯಸ್‌ವರೆಗೆ ಕಡಿತಗೊಳಿಸುವ ನ್ಯಾಯಯುತ ಪಾತ್ರವನ್ನು ನಿರ್ವಹಿಸುತ್ತಿರುವ ಏಕೈಕ ರಾಷ್ಟ್ರ ಭಾರತವಾಗಿದೆ. ಮಾರ್ಚ್ 21 ಅನ್ನು ಅಂತರರಾಷ್ಟ್ರೀಯ ಅರಣ್ಯ ದಿನವಾಗಿ ಮತ್ತು ಮಾರ್ಚ್ 22 ಅನ್ನು ಅಂತರರಾಷ್ಟ್ರೀಯ ಜಲ ದಿನವೆಂದು ನಾವು ಆಚರಿಸುತ್ತಿರುವ ಸಂದರ್ಭದಲ್ಲಿ, ಪರಿಸರ ಸಂರಕ್ಷಣೆಯ ಸರ್ಕಾರದ ಪ್ರಯತ್ನಗಳಿಗೆ ನಾವು ಹೇಗೆ ಕೊಡುಗೆ ನೀಡಬಹುದು ಎಂದು ಆಲೋಚಿಸಬೇಕು.**

ಪರಂಪರಾಗತ ಭಾರತೀಯ ಚಿಂತನೆಯು ಯಾವಾಗಲೂ ಪ್ರಕೃತಿಗೆ ದೈವತ್ವದ ಸ್ಥಾನ ನೀಡಿದೆ ಮತ್ತು ಅದನ್ನು ತಮ್ಮ ದೈನಂದಿನ ಅಸ್ತಿತ್ವದ ಒಂದು ಭಾಗವನ್ನಾಗಿ ಮಾಡಿಕೊಂಡಿದೆ. ಜಗತ್ತಿನಾದ್ಯಂತ, ನದಿಗಳನ್ನು ಪೂಜಿಸುವ ಏಕೈಕ ದೇಶ ಭಾರತ. ಸಾಮ್ರಾಟ ಅಶೋಕನಿಂದ ಮಹಾತ್ಮ ಗಾಂಧೀಜಿಯವರೆಗೆ ಭಾರತೀಯ ಸಿದ್ಧಾಂತವು ಯಾವಾಗಲೂ ನೀರಿನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿದೆ. ಫೆಬ್ರವರಿ 23, 2021 ರಂದು "ಅಂತರರಾಷ್ಟ್ರೀಯ ಶಾಂತಿ ಮತ್ತು ಸುರಕ್ಷತೆಗೆ ಹವಾಮಾನ ಸಂಬಂಧಿತ ಅಪಾಯಗಳನ್ನು ಪರಿಹರಿಸುವುದು" ಎಂಬ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಕ್ತ ಚರ್ಚೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಅವರು ಪರಿಸರ ಸಂರಕ್ಷಣೆಯ ಬಗ್ಗೆ ದೇಶದ ಬದ್ಧತೆಯನ್ನು ಒತ್ತಿಹೇಳಲು ಶುಕ್ಲ ಯಜುರ್ವೇದದ ಈ ಶ್ಲೋಕವನ್ನು ಉಲ್ಲೇಖಿಸಿದರು.

ॐ द्यौः शान्तिरन्तरिक्षँ शान्तिः,
पृथ्वी शान्तिरापः शान्तिरोषधयः शान्तिः ।
वनस्पतयः शान्तिर्विश्वे देवाः शान्तिर्ब्रह्म शान्तिः,
सर्वँ शान्तिः, शान्तिरेव शान्तिः, सा मा शान्तिरेधि॥

ಇದರರ್ಥ, ಆಕಾಶ, ಅಂತರಿಕ್ಷ ಎಲ್ಲೆಡೆ ಶಾಂತಿ ನೆಲೆಸಲಿ. ಈ ಭೂಮಿಯ ಎಲ್ಲೆಡೆ ಶಾಂತಿ ನೆಲೆಸಲಿ. ನೀರು ಮತ್ತು ಹಸಿರು, ಮರಗಳು ಮತ್ತು ಸಸ್ಯಗಳಲ್ಲಿ ಶಾಂತಿ ನೆಲೆಸಲಿ. ಇಡೀ ಬ್ರಹ್ಮಾಂಡದಲ್ಲಿ ಶಾಂತಿ ನೆಲೆಯೂರಲಿ. ಶಾಂತಿಯು ಆದಿಸ್ವರೂಪದಲ್ಲೂ ನೆಲೆಸಲಿ. ಎಲ್ಲದರಲ್ಲೂ ಶಾಂತಿ ಮತ್ತು ಶಾಂತಿ ಮಾತ್ರ ನೆಲೆಸಲಿ. ನಮಗೆ ಮತ್ತು ಎಲ್ಲಾ ಜೀವಸಂಕುಲಕ್ಕೆ ಓಂ ಶಾಂತಿ, ಶಾಂತಿ, ಶಾಂತಿ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ವರದಿಯ ಪ್ರಕಾರ, ಪ್ರತಿವರ್ಷ ಸುಮಾರು 38 ಲಕ್ಷ ಜನರು ವಾಯುಮಾಲಿನ್ಯದಿಂದ ಸಾವನ್ನಪ್ಪುತ್ತಿದ್ದಾರೆ. ಭೂಮಿಯ ಮೇಲಿನ ಅರಣ್ಯ ಪ್ರದೇಶವು ಕಡಿಮೆಯಾಗುತ್ತಿದೆ. ಜಲಮೂಲಗಳು ನಶಿಸುತ್ತಿವೆ, ನದಿಗಳು ತಮ್ಮ ಹರಿವಿನ ಹಾದಿಯನ್ನು

# ಪರಿಸರ ಸಂರಕ್ಷಣೆಯ ಹಾದಿಯಲ್ಲಿ ಭಾರತ

**ಪ್ಯಾರಿಸ್ ಒಪ್ಪಂದದ ಐದು ವರ್ಷಗಳ ನಂತರ ಬಿಡುಗಡೆಯಾದ ವರದಿಯ ಪ್ರಕಾರ, ಜಾಗತಿಕ ಹವಾಮಾನ ಬದಲಾವಣೆ ಕಾರ್ಯಕ್ಷಮತೆ ಸೂಚ್ಯಂಕ 2021 ರ ಮೊದಲ 10 ದೇಶಗಳಲ್ಲಿ ಭಾರತ ಸ್ಥಾನವನ್ನು ಪಡೆದುಕೊಂಡಿದೆ. 2014 ರಲ್ಲಿ 31 ನೇ ಸ್ಥಾನದಲ್ಲಿದ್ದ ಭಾರತ, 2021 ರಲ್ಲಿ 10 ನೇ ಸ್ಥಾನ ತಲುಪಿದೆ. ಕಳೆದ ನಾಲ್ಕು ವರ್ಷಗಳಲ್ಲಿ 13 ಸಾವಿರ ಕಿಲೋಮೀಟರ್‌ವರೆಗೆ ಅರಣ್ಯ ಪ್ರದೇಶವನ್ನು ಹೆಚ್ಚಿಸಲು ಮಾಡಿದ ವರ್ಷಗಟ್ಟಲೆ ಕಠಿಣ ಪರಿಶ್ರಮ ಮತ್ತು ಸೂಕ್ತ ಯೋಜನೆಯಿಂದ ಇದನ್ನು ಸಾಧಿಸಲಾಗಿದೆ.**



**ಎರಡು ವರ್ಷಗಳಿಗೊಮ್ಮೆ ಬಿಡುಗಡೆಯಾಗುವ ಭಾರತೀಯ ಅರಣ್ಯ ಸಮೀಕ್ಷೆಯ 2019ರ ವರದಿ ಪ್ರಕಾರ, ಭಾರತದಲ್ಲಿ ಅರಣ್ಯ ಮತ್ತು ಮರಗಳ ವ್ಯಾಪ್ತಿ 8,07,276 ಚದರ ಕಿ.ಮೀ. ಇದು ಭಾರತದ ಒಟ್ಟು ಭೌಗೋಳಿಕ ಪ್ರದೇಶದ ಶೇಕಡಾ 24.56 ಆಗಿದೆ.**

- 2017 ಕ್ಕೆ ಹೋಲಿಸಿದರೆ ದೇಶದಲ್ಲಿ 5,188 ಚದರ ಕಿ.ಮೀ (ಶೇಕಡಾ 0.65) ಅರಣ್ಯ ಮತ್ತು ಮರಗಳ ವ್ಯಾಪ್ತಿ ಹೆಚ್ಚಾಗಿದೆ
- ದೇಶದ ಒಟ್ಟು ಅರಣ್ಯ ಪ್ರದೇಶವು 7,12,249 ಚದರ ಕಿ.ಮೀ ಆಗಿದೆ, ಇದು ಒಟ್ಟು ಭೌಗೋಳಿಕ ಪ್ರದೇಶದ ಶೇಕಡಾ 21.67 ಆಗಿದೆ.
- ಕರ್ನಾಟಕದ ಅರಣ್ಯ ವ್ಯಾಪ್ತಿಯು ಅತಿ ಹೆಚ್ಚು ಅಂದರೆ 1,025 ಚದರ ಕಿ.ಮೀ. ಹೆಚ್ಚಾಗಿದೆ. ನಂತರದ ಸ್ಥಾನದಲ್ಲಿ ಆಂಧ್ರಪ್ರದೇಶ (990 ಕಿಮೀ), ಕೇರಳ (823 ಕಿಮೀ), ಜಮ್ಮು ಮತ್ತು ಕಾಶ್ಮೀರ (371 ಕಿಮೀ) ಮತ್ತು ಹಿಮಾಚಲ ಪ್ರದೇಶ (334 ಕಿಮೀ) ಗಳಿವೆ.
- ಸಾಂಪ್ರದಾಯಿಕ ಮಾಲಿನ್ಯಕಾರಕ ಸೌದೆ ಬಳಕೆಗೆ ಬದಲಾಗಿ ಮನೆಗಳಲ್ಲಿ ಎಲ್‌ಪಿಜಿ ಬಳಕೆಗಾಗಿ ಉಜ್ವಲಾ ಯೋಜನೆಯನ್ನು ಪರಿಚಯಿಸಲಾಯಿತು. ಈ ಯೋಜನೆಯಡಿ ಈವರೆಗೆ 8 ಕೋಟಿ ಎಲ್‌ಪಿಜಿ ಸಂಪರ್ಕಗಳನ್ನು ಒದಗಿಸಲಾಗಿದೆ.
- ಸ್ವಚ್ಛ ಪರಿಸರಕ್ಕಾಗಿ ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮವನ್ನು ಭಾರತದಲ್ಲಿ ಮೊದಲ ಬಾರಿಗೆ 2019 ರಲ್ಲಿ ಪ್ರಾರಂಭಿಸಲಾಯಿತು. 2024 ರ ಹೊತ್ತಿಗೆ ಗಾಳಿಯಲ್ಲಿ ಕಂಡುಬರುವ ಹಾನಿಕಾರಕ ಕಣಗಳಾದ ಪಿಎಂ 2.5 ಮತ್ತು ಪಿಎಂ 10 ಪ್ರಮಾಣವನ್ನು ಶೇ.30 ರಷ್ಟು ಕಡಿಮೆ ಮಾಡುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ.
- ವಾಯುಮಾಲಿನ್ಯವನ್ನು ಕಡಿಮೆ ಮಾಡಲು, ಬಿಎಸ್-4ರ ನಂತರ ಬಿಎಸ್-6 ಮಾನದಂಡವನ್ನು ನೇರವಾಗಿ ಕಾರ್ಯಗತಗೊಳಿಸಲಾಗಿದೆ. ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸಲು ಹೊಸ ನೀತಿಯನ್ನು ರೂಪಿಸಲಾಗಿದೆ.
- ಉಜಾಲ, ಸ್ವಚ್ಛ ಭಾರತ ಮತ್ತು ನಮಾಮಿ ಗಂಗೆಯಂತಹ ಯೋಜನೆಗಳು ಪರಿಸರದ ಜೊತೆಗೆ ನೀರನ್ನು ಸಂರಕ್ಷಿಸಲು ಪ್ರಮುಖವಾಗಿವೆ ಎಂದು ಸಾಬೀತಾಗಿದೆ. ನಮಾಮಿ ಗಂಗೆ ಯೋಜನೆಯಡಿ ಸುಮಾರು 305 ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಯಿತು. ಗಂಗಾ ನದಿಗೆ ಚರಂಡಿಗಳ ನೀರು ಸೇರುವುದನ್ನು ನಿಷೇಧಿಸಲಾಗಿದೆ.
- ಕಾಡುಗಳ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಲು, ವನ್ಯಜೀವಿ ಸಂರಕ್ಷಣಾ ಯೋಜನೆಗಳಿಗೆ ವಿಶೇಷ ಗಮನ ನೀಡಲಾಯಿತು. ಸಾಗರ ವ್ಯವಸ್ಥೆಯ ರಕ್ಷಣೆ ಮತ್ತು ಜಲಚರಗಳನ್ನು ಸಂರಕ್ಷಿಸಲು ಪ್ಲಾಸ್ಟಿಕ್ ನಿರ್ಮೂಲನೆ, ಆಮೆ ನೀತಿ ಮತ್ತು ಪ್ರಾಜೆಕ್ಟ್ ಡಾಲ್ಫಿನ್ ಅನ್ನು ಪರಿಚಯಿಸಲಾಗಿದೆ.

- ಕಾಡುಗಳನ್ನು ಉಳಿಸಲು ಭಾರತವು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಅತ್ಯಂತ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿದೆ. ಅಂತರರಾಷ್ಟ್ರೀಯ ಸೌರ ಒಕ್ಕೂಟದ ಸ್ಥಾಪನೆಯಿಂದ 2022ರ ವೇಳೆಗೆ 175 ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನವನ್ನು ಉತ್ಪಾದಿಸುವ ಗುರಿಯವರೆಗೆ ಈ ಕ್ರಮಗಳು ಇವೆ. ಈ ಗುರಿಯನ್ನು ನಿಗದಿತ ಸಮಯಕ್ಕೂ ಮೊದಲೇ ತಲುಪಬಹುದು.
- ದೇಶದ 31 ನದಿಗಳನ್ನು ಜೋಡಿಸಲು ವಿವರವಾದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.
- ಕಳೆದ ಆರು ವರ್ಷಗಳಲ್ಲಿ ನೀರು ಮತ್ತು ಅರಣ್ಯ ಸಂರಕ್ಷಣೆಗಾಗಿ ತೆಗೆದುಕೊಂಡ ಈ ಎಲ್ಲಾ ಕ್ರಮಗಳು ಸರ್ಕಾರದ ಉಪಕ್ರಮಗಳಿಗೆ ಸಾಕ್ಷಿಯಾಗಿವೆ. ಇದಲ್ಲದೆ, ಪ್ರಧಾನಿ ನರೇಂದ್ರ ಮೋದಿಯವರು ಮಾಮಲ್ಲಾಪುರಂನ ಕಡಲತೀರದಲ್ಲಿ ತ್ಯಾಜ್ಯ ಆಯುವ ಮೂಲಕ ಎಲ್ಲರಿಗೂ ಸೂಕ್ತ ಸಂದೇಶವನ್ನು ನೀಡಿದರು ಮತ್ತು ಇದು ಪ್ರಕೃತಿ ಸಂರಕ್ಷಣೆಗೆ ಸರ್ಕಾರದ ಬದ್ಧತೆಯನ್ನು ಪ್ರತಿಬಿಂಬಿಸಿತು. ಆದ್ದರಿಂದ, ಪರಿಸರ ಸಂರಕ್ಷಣಾ ಉಪಕ್ರಮಕ್ಕೆ ಕೊಡುಗೆ ನೀಡುವುದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿಯಾಗಿದೆ.

ಬದಲಾಯಿಸುತ್ತಿರುವುದರಿಂದ ಪ್ರವಾಹ ಮತ್ತು ನೈಸರ್ಗಿಕ ವಿಪತ್ತುಗಳು ಉಂಟಾಗುತ್ತವೆ ಎಂದು ಇತರ ಹಲವಾರು ವರದಿಗಳು ಮತ್ತು ಸಮೀಕ್ಷೆಗಳು ಹೇಳಿವೆ. ಈ ಬಿಕ್ಕಟ್ಟುಗಳಿಗೆ ಪರಿಹಾರವನ್ನು ಹುಡುಕಲು, ವಿಶ್ವದ 196 ದೇಶಗಳು 2015 ರಲ್ಲಿ ಪ್ಯಾರಿಸ್‌ನಲ್ಲಿ ಸೇರಿದವು. ಹವಾಮಾನ ಬದಲಾವಣೆಯನ್ನು ತಗ್ಗಿಸಲು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಗುರಿಗಳನ್ನು ನಿಗದಿಪಡಿಸಲಾಗಿದೆ. ಈ ಜಾಗತಿಕ ಭೀತಿಯನ್ನು ಎಲ್ಲರೂ ಸೇರಿ ನಿಭಾಯಿಸುವುದು ಇದರ ಉದ್ದೇಶವಾಗಿತ್ತು ಆದರೆ ಐದು ವರ್ಷಗಳ ನಂತರ ವರದಿ ಹೊರಬಂದಾಗ, ಗುರಿಯನ್ನು ಪೂರೈಸಿರುವ ಏಕೈಕ ದೇಶ ಭಾರತವಾಗಿದೆ. ಪರಿಸರ ಸಂರಕ್ಷಣೆಗೆ ಸರ್ಕಾರ ಹಲವಾರು ಉಪಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ, ಜನಸಾಮಾನ್ಯರು ಸಹ ತಮ್ಮ ಕೊಡುಗೆ ನೀಡಬೇಕು. ■

# ಶಾಲೆಗಳ ಮರು ಆರಂಭದಿಂದ ಮಕ್ಕಳ ಮೊಗದಲ್ಲಿ ಸಂತಸ

**ಕೊರೊನಾ ವೈರಸ್ ಸಾಂಕ್ರಾಮಿಕವು 21ನೇ ಶತಮಾನದ ವಿದ್ಯಾರ್ಥಿಗಳಿಗೆ ಹೊಸ ಮತ್ತು ವಿಶಿಷ್ಟ ಅನುಭವವನ್ನು ಕೊಟ್ಟಿದೆ. ಅವರು ತಮ್ಮ ಜೀವಮಾನದಲ್ಲಿ ಈ ಅನುಭವವನ್ನು ಮರೆಯಲು ಸಾಧ್ಯವಿಲ್ಲ. 11 ತಿಂಗಳ ಕಾಲ ಮನೆಯೊಳಗೇ ಕೂತು ಆನ್‌ಲೈನ್ ಅಧ್ಯಯನ ನಡೆಸಿದ ನಂತರ, ಕೋವಿಡ್- 19 ಶಿಷ್ಟಾಚಾರಗಳ ಪಾಲನೆಯೊಂದಿಗೆ ಶಾಲೆಗಳು ಮತ್ತೆ ಆರಂಭವಾದವು. ಜೀವನವು ಮತ್ತೆ ಹಳಿಗೆ ಮರಳಿದೆ. ಈಗ, ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ, ಸ್ನೇಹಿತರೊಂದಿಗೆ ಆಟವಾಡಲು ಮತ್ತು ಆನಂದಿಸಲು ಸಾಧ್ಯವಾಗಿದೆ.**



ಡೆಹ್ರಾಡೂನ್‌ನ ಇಂಡಿಯನ್ ಪಬ್ಲಿಕ್ ವಸತಿ ಶಾಲೆಯ ವಿದ್ಯಾರ್ಥಿನಿ ಜ್ಯೋತಿ, ಕೊರೊನಾ ವೈರಸ್ ಅವಧಿಯನ್ನು ಬಿಹಾರದ ಪಾಟ್ನಾದಲ್ಲಿರುವ ತನ್ನ ಮನೆಯಲ್ಲಿ ಕಳೆದ ನಂತರ ಫೆಬ್ರವರಿ 2021 ರಲ್ಲಿ ಮತ್ತೆ ಶಾಲೆಗೆ ಬಂದಳು. ತನ್ನ ಶಾಲೆಗೆ ಬಂದ ನಂತರ, ಜ್ಯೋತಿ ಹೇಳಿದ್ದು ಹೀಗೆ: "ಮನೆಯೊಳಗೆ ಹೆಚ್ಚು ಸಮಯ ಕಳೆದ ನಂತರ, ಶಾಲೆ ಮತ್ತು ಸ್ನೇಹಿತರು ನಮ್ಮ ಜೀವನದ ಪ್ರಮುಖ ಭಾಗವೆಂದು ನನಗೆ ತಿಳಿಯಿತು. ಕೊರೊನಾ ವೈರಸ್ ಯುಗದಲ್ಲಿ, ಎಲ್ಲವೂ ಸೀಮಿತವಾಗಿತ್ತು ಮತ್ತು ಅಧ್ಯಯನಗಳು ಆನ್‌ಲೈನ್‌ನಲ್ಲಿ ನಡೆಯುತ್ತಿದ್ದವು. ಈಗ, ಹಳೆಯ ದಿನಗಳು ಮತ್ತೆ ಬಂದಿವೆ ಎಂದು ನನಗನಿಸುತ್ತಿದೆ."

ಶಾಲೆಗಳನ್ನು ಮತ್ತೆ ತೆರೆಯಲಾಗಿದ್ದರೂ, ವಿದ್ಯಾರ್ಥಿಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿದೆ. ಫೆಬ್ರವರಿಯಲ್ಲಿ ಜ್ಯೋತಿ ಮತ್ತು ಇತರ ವಿದ್ಯಾರ್ಥಿಗಳು ಶಾಲೆಗೆ ತಲುಪುತ್ತಿದ್ದಂತೆ, ಅವರಿಗೆ ಕೋವಿಡ್- 19 ನೆಗೆಟಿವ್ ವರದಿಯನ್ನು ನೀಡಲು ತಿಳಿಸಲಾಯಿತು. ನಕಾರಾತ್ಮಕ ವರದಿಯನ್ನು ಹೊಂದಿದ್ದರೂ ಸಹ, ಶಾಲೆಯು ಅವಳ ಕೋವಿಡ್- 19 ಪರೀಕ್ಷೆಯನ್ನು ಎರಡು ಬಾರಿ ಖಚಿತಪಡಿಸಿಕೊಂಡಿತು. ವಿದ್ಯಾರ್ಥಿಗಳನ್ನು ಒಂದು ವಾರದವರೆಗೆ ಕ್ವಾರಂಟೈನ್ ನಲ್ಲಿರಿಸಲಾಯಿತು. ಅವರ ಕೋಣೆಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಯಿತು. ಆರಂಭದಲ್ಲಿ ವಿದ್ಯಾರ್ಥಿಗಳಿಗೆ ಇದೆಲ್ಲಾ ಹೊಸದಾಗಿತ್ತು, ಆದರೆ ನಿಧಾನವಾಗಿ ಅವರು ಕೋವಿಡ್- 19 ಶಿಷ್ಟಾಚಾರಗಳಿಗೆ ಹೊಂದಿಕೊಂಡರು ನಾಗಾಲ್ಯಾಂಡ್‌ನ ವಜ್ರದೀಪನ್ ದೂ ಇದೇ ಕಥೆ. 11 ತಿಂಗಳು ಮನೆಯೊಳಗಿದ್ದ ನಂತರ ಹೊರಗೆ ಬಂದಿರುವುದು ಉತ್ತಮ ಅನುಭವ ಎಂದು ಅವನು ಹೇಳುತ್ತಾನೆ. ಹಿಮಾಚಲ ಪ್ರದೇಶದ ಶಾರ್ದೂಲ್, ದೀರ್ಘ ಸಮಯದವರೆಗೆ ಪರದೆಯನ್ನು ನೋಡಿ ಮಂಕು ಕವಿದಿತ್ತು ಎನ್ನುತ್ತಾನೆ. ಈಗ, ಅವನು ಶಾಲೆಯಲ್ಲಿ ಫುಟ್ಬಾಲ್ ಆಡುವ ಮೂಲಕ ಸಂತೋಷವಾಗಿದ್ದಾನೆ.

ಇದು ಬೋರ್ಡಿಂಗ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಕಥೆಯಷ್ಟೇ ಅಲ್ಲ, ಬೇರೆಯವರದು ಸಹ. ಗಾಜಿಯಾಬಾದ್‌ನ ಆಯುಷ್ ಕೆಡಿಯಾ ಮತ್ತೆ ಶಾಲೆಗೆ ಮರಳಿರುವುದು ಸಂತೋಷವಾಗಿದೆ ಎಂದು ಹೇಳುತ್ತಾನೆ. ಬ್ರಿಜ್ ವಿಹಾರದ ಬಾಲ ಭಾರತಿ ಪಬ್ಲಿಕ್ ಶಾಲೆಯ 11ನೇ ತರಗತಿ ವಿದ್ಯಾರ್ಥಿ ಆಯುಷ್ ನಿಯಮಿತ ತರಗತಿಗಳು ತನಗೆ ಸಂತೋಷ ತಂದಿವೆ ಎಂದು ಹೇಳಿದ. "11 ತಿಂಗಳ ನಂತರ ಶಾಲೆ ಮತ್ತೆ ತೆರೆಯುತ್ತಿರುವುದರಿಂದ ನನಗೆ ತುಂಬಾ ಸಂತೋಷವಾಗಿದೆ. ಆನ್‌ಲೈನ್ ತರಗತಿಗಳ ಸಮಯದಲ್ಲಿ ಬಹಳಷ್ಟು ಕಳೆದುಕೊಂಡಿದ್ದೆವು. ಈಗ, ನಾನು ನನ್ನ ಸ್ನೇಹಿತರು ಮತ್ತು ಶಿಕ್ಷಕರನ್ನು ಭೇಟಿ ಮಾಡಬಹುದು. ಇದು ಅಧ್ಯಯನದಲ್ಲಿ

# ಕೊರೊನಾ ನಡುವೆ ಶಾಲೆಗಳಿಗೆ ಹೊಸ ನಿಯಮಗಳು





- ಶಿಕ್ಷಣ ಸಚಿವಾಲಯವು ದೇಶದ ಎಲ್ಲಾ 42,00,000 ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಶಾಲಾ ಮುಖ್ಯಸ್ಥರಿಗೆ ಆನ್‌ಲೈನ್ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ ನಿಷ್ಠಾ (NISHTHA) ವನ್ನು ಜಾರಿಗೆ ತಂದಿದೆ.
- ಸಿಬಿಎಸ್‌ಇ, ಕೇಂದ್ರೀಯ ವಿದ್ಯಾಲಯ (ಕೆವಿ) ಮತ್ತು ಜವಾಹರ್ ನವೋದಯ ವಿದ್ಯಾಲಯ (ಜೆಎನ್‌ವಿ) ಲಾಕ್‌ಡೌನ್ ಪ್ರಾರಂಭವಾದ ಕೂಡಲೇ ತಮ್ಮ ಶಿಕ್ಷಕರ ಆನ್‌ಲೈನ್ ಬೋಧನಾ ಸಾಮರ್ಥ್ಯವನ್ನು ವೃದ್ಧಿಸುವ ಬೃಹತ್ ಕಾರ್ಯವನ್ನು ಕೈಗೊಂಡವು. ಸಾಧ್ಯವಾದಲ್ಲೆಲ್ಲಾ ಆನ್‌ಲೈನ್ ವಿಧಾನಗಳ ಮೂಲಕ ಕಲಿಕೆಯ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಇದನ್ನು ಮಾಡಲಾಗಿದೆ. ಈ ಪ್ರಕ್ರಿಯೆಯಲ್ಲಿ ಭಾರತದಾದ್ಯಂತ ಸಿಬಿಎಸ್‌ಇ 4,80,000 ಶಿಕ್ಷಕರಿಗೆ, ಕೆವಿ 15,855 ಮತ್ತು ಜೆಎನ್‌ವಿ 9,085 ಶಿಕ್ಷಕರಿಗೆ ತರಬೇತಿ ನೀಡಿದವು.
- ಫಿಟ್ ಇಂಡಿಯಾ ಆಂದೋಲನದೊಂದಿಗೆ ಸಹಭಾಗಿತ್ವ ಹೊಂದಿರುವ ಸಿಬಿಎಸ್‌ಇ, ಮಕ್ಕಳ ದೈಹಿಕ ಸ್ವಾಸ್ಥ್ಯಕ್ಕಾಗಿ ಏರ್ಪಡಿಸಲಾದ ದೈಹಿಕ ಚಟುವಟಿಕೆಗಳ ವಿವಿಧ ಆನ್‌ಲೈನ್ ನೇರಪ್ರಸಾರ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುತ್ತದೆ.
- ಸಿಬಿಎಸ್‌ಇ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಒಂಬತ್ತನೇ ತರಗತಿಯ ದ್ವಿತೀಯ ಹಂತದಲ್ಲಿ ದೈಹಿಕ ಚಟುವಟಿಕೆ ತರಬೇತಿ ಎಂಬ ಹೊಸ ವಿಷಯವನ್ನು ಪ್ರಾರಂಭಿಸಿದೆ. ಕೇಂದ್ರೀಯ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಲ್ಲಿ ದೈಹಿಕ ಸಾಮರ್ಥ್ಯದ ಮಹತ್ವವನ್ನು ತಿಳಿಸಲು ಫಿಟ್ನೆಸ್ ತರಬೇತಿ ಮತ್ತು ಯೋಗದ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲಾಯಿತು.
- ವಿದ್ಯಾರ್ಥಿಗಳ ಮಾನಸಿಕ ಸ್ವಾಸ್ಥ್ಯಕ್ಕಾಗಿ, ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವಾಸ್ಥ್ಯಕ್ಕಾಗಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಕುಟುಂಬಗಳಿಗೆ ಮಾನಸಿಕ ಸಾಮಾಜಿಕ ಬೆಂಬಲವನ್ನು ಒದಗಿಸಲು ಶಿಕ್ಷಣ ಸಚಿವಾಲಯವು ವ್ಯಾಪಕವಾದ ಚಟುವಟಿಕೆಗಳನ್ನು ಒಳಗೊಂಡ 'ಮನೋದರ್ಪಣ' ಎಂಬ ಉಪಕ್ರಮವನ್ನು ಕೈಗೊಂಡಿದೆ.
- ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ನೆಟ್‌ವರ್ಕ್ ಕೊರತೆಯಿಂದಾಗಿ ಡಿಜಿಟಲ್ ವಿಭಜನೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಎದುರಿಸಲು, ಸಚಿವಾಲಯವು ಪಿಎಂ ಇ-ವಿದ್ಯಾ ಅಡಿಯಲ್ಲಿ ವ್ಯವಸ್ಥಿತ ಮಾದರಿಯನ್ನು ಪ್ರಾರಂಭಿಸಿತು.
- ಆನ್‌ಲೈನ್‌ನಲ್ಲಿ ದೀಕ್ಷಾ (DIKSHA) ದಲ್ಲಿ ಲಭ್ಯವಿರುವ ವಿಷಯವು ಈಗ ಸ್ವಯಂ ಪ್ರಭಾ ಟಿವಿ ಚಾನೆಲ್ ಮೂಲಕವೂ ಲಭ್ಯವಿದೆ. ಹಾಗೆಯೇ, ಇದು ರೇಡಿಯೊದಲ್ಲಿಯೂ ಲಭ್ಯವಿರುತ್ತದೆ.
- ಉತ್ತಮ ಗುಣಮಟ್ಟದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಒಟ್ಟು 34 ಚಾನೆಲ್‌ಗಳನ್ನು ಮೀಸಲಿಡಲಾಗಿದೆ.
- ಶಿಕ್ಷಣವನ್ನು ತಲುಪಿಸಲು ಬಹುಮಾಧ್ಯಮ ಮಾರ್ಗಗಳಾದ - ದೀಕ್ಷಾ, ಸ್ವಯಂ ಪ್ರಭಾ, ಸಮುದಾಯ ರೇಡಿಯೋ, ಶಿಕ್ಷಾ ವಾಣಿ ಮುಂತಾದವುಗಳನ್ನು ಪಿಎಂ ಇ-ವಿದ್ಯಾ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.
- ಸಿಐಇಟಿ ಎನ್‌ಸಿಇಆರ್‌ಟಿಯು ಹಿಂದಿ, ಇಂಗ್ಲಿಷ್, ಉರ್ದು ಮತ್ತು ಸಂಸ್ಕೃತ ಭಾಷೆಗಳಲ್ಲಿ ಸುಮಾರು 2,000 ಆಡಿಯೋ-ರೇಡಿಯೋ ಕಾರ್ಯಕ್ರಮಗಳನ್ನು ನಿರ್ಮಿಸಿದೆ.

ಮಾತ್ರವಲ್ಲದೆ ಇತರ ಚಟುವಟಿಕೆಗಳಲ್ಲಿಯೂ ಸಹಕಾರಿಯಾಗಿದೆ. ನಾನು ಇದೆಲ್ಲವನ್ನೂ ಕಳೆದುಕೊಂಡಿದ್ದೆ." ಎಂದು ಆತ ಹೇಳುತ್ತಾನೆ.

ಕೊರೊನಾವೈರಸ್ ಸಾಂಕ್ರಾಮಿಕವು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರಿದೆ. ಈಗ, ಸರ್ಕಾರದ ಅನುಮೋದನೆಯ ನಂತರ, ಕೋವಿಡ್-19 ಅಭ್ಯಾಸಗಳನ್ನು ಅನುಸರಿಸುವ ಮೂಲಕ ಶಾಲೆಗಳು ಮತ್ತೆ ತೆರೆದಿವೆ. ಇದು ಪರಿಸ್ಥಿತಿಯನ್ನು ಸಾಮಾನ್ಯ ಸ್ಥಿತಿಗೆ ಕೊಂಡೊಯ್ಯುವುದಲ್ಲದೆ, ಇಷ್ಟು ದಿನ ಮನೆಯೊಳಗಿದ್ದ ಮಕ್ಕಳಿಗೆ ಹೊಸ ಶಕ್ತಿ ಮತ್ತು ಸಂತೋಷವನ್ನು ನೀಡುತ್ತಿದೆ. ಲಾಕ್‌ಡೌನ್ ಸಮಯದಲ್ಲಿ ಮತ್ತು ನಂತರ 11 ತಿಂಗಳವರೆಗೆ ಯಾವುದೇ ಶಾಲೆಗಳು ಇರಲಿಲ್ಲವಾದರೂ, ಶಿಕ್ಷಣ ಮತ್ತು ಕಲಿಕೆಯ ಪ್ರಕ್ರಿಯೆಯ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಶೈಕ್ಷಣಿಕ ವರ್ಷದ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಲಾಗಿತ್ತು. ತರಗತಿಗಳು ಡಿಜಿಟಲ್ ರೂಪದಲ್ಲಿ ನಡೆದವು. ಹೊರಗೆ ಯಾವುದೇ ಓಡಾಟ ಇಲ್ಲದಿದ್ದರೂ ಕಲಿಕೆ ಮುಂದುವರಿಯಿತು. ಡಿಜಿಟಲ್ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ಮತ್ತು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಇ-ಕಲಿಕೆಯನ್ನು ಸಾಧ್ಯವಾಗಿಸಲು, ಸರ್ಕಾರವು ಪಿಎಂ ಇ-ವಿದ್ಯಾ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಡಿಜಿಟಲ್ ಸಂಪರ್ಕದ ಕೊರತೆಯಿರುವ ಪ್ರದೇಶಗಳು ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಡಿಟಿಎಚ್ ಮೂಲಕ ನೀಡಲಾಯಿತು. ■

## ರೋಗಗಳ ವಿರುದ್ಧ ಹೋರಾಟ

# ಒಂದು ಬಾರಿಗೆ ಒಂದು ಲಸಿಕೆ



**ಭಾರತವು ಪ್ರತಿ ವರ್ಷ ಮಾರ್ಚ್ 16 ಅನ್ನು ರಾಷ್ಟ್ರೀಯ ಲಸಿಕಾ ದಿನವಾಗಿ ಆಚರಿಸುತ್ತದೆ. ದೇಶದಲ್ಲಿ ಬಾಯಿ ಮೂಲಕ ಮೊದಲ ಪೋಲಿಯೊ ಲಸಿಕೆ ನೀಡಿದ ದಿನ ಇದು. ಮಾರಣಾಂತಿಕ ರೋಗಗಳಿಂದ ಜನರನ್ನು ರಕ್ಷಿಸುವ ಉದ್ದೇಶದಿಂದ ಭಾರತ ಹಲವಾರು ಲಸಿಕಾ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ದೇಶದಲ್ಲಿ ನಡೆಯುತ್ತಿರುವ ವಿವಿಧ ಲಸಿಕಾ ಕಾರ್ಯಕ್ರಮಗಳ ಒಂದು ನೋಟ ಇಲ್ಲಿದೆ.**

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಕ್ಕಳಲ್ಲಿ ಬದುಕುಳಿಯುವಿಕೆಯನ್ನು ಸುಧಾರಿಸಲು ಲಸಿಕೆ ಕಡಿಮೆ ವೆಚ್ಚದ ಮಾರ್ಗವಾಗಿದೆ. ಆದಾಗ್ಯೂ, ಅನಕ್ಷರತೆ, ಕಳಪೆ ಸಂಪರ್ಕ, ಸಾಮಾಜಿಕ ಕಳಂಕ ಮತ್ತು ಕಷ್ಟಕರವಾದ ಭೌಗೋಳಿಕ ಪ್ರದೇಶಗಳಿಂದಾಗಿ ಸಮಾಜದ ಬಹುಪಾಲು ಜನರು ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸಲು ಹಿಂಜರಿಯುತ್ತಾರೆ. ಇದನ್ನು ನಿವಾರಿಸಲು, ಸರ್ಕಾರವು ಹೆಚ್ಚುವರಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಯಿತು. ಇದರ ಪರಿಣಾಮವೇ ಮಿಷನ್ ಇಂದ್ರಧನುಷ್. ಅಸ್ಸಾಂನ ಧುಬ್ರಿಯಲ್ಲಿ, ನಯನ್ ಇಟ್ಟಿಗೆ ಗೂಡುಗಳಲ್ಲಿ ದಿನಗೂಲಿ ಮಾಡುವವರು ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸಲು ಹೋಗುತ್ತಿರಲಿಲ್ಲ, ಏಕೆಂದರೆ ಅದರಿಂದ ಆ ದಿನದ ಕೂಲಿಯ ನಷ್ಟವಾಗುತ್ತಿತ್ತು. ಪದೇ ಪದೇ ಪ್ರಯತ್ನಿಸಿದ ನಂತರವೂ ಪೋಷಕರು ತಮ್ಮ ಮಕ್ಕಳನ್ನು ಲಸಿಕಾ ಕೇಂದ್ರಕ್ಕೆ ಕರೆತರಲು ಹಿಂಜರಿಯುತ್ತಿದ್ದರು. ಆದ್ದರಿಂದ, ಆರೋಗ್ಯ ಅಧಿಕಾರಿಗಳು ಅವರ ಕೆಲಸದ ಸ್ಥಳದಲ್ಲಿಯೇ ಸೇವೆಯನ್ನು ಒದಗಿಸುವ ಮೂಲಕ ಮಕ್ಕಳಿಗೆ ಲಸಿಕೆ ನೀಡಲು ನಿರ್ಧರಿಸಿದರು. ಸುಮಾರು 30 ಮಕ್ಕಳಿಗೆ ಲಸಿಕೆ ನೀಡಲಾಯಿತು. ಅಸ್ಸಾಂನ ಚಿರಾಂಗ್, ಮೋರಿಗಾಂವ್ ಮತ್ತು ಲಖಿಂಪುರದಲ್ಲಿ ಇದೇ ರೀತಿಯ ಚಿತ್ರಣವಿತ್ತು. ಅದನ್ನು ಮಿಷನ್ ಇಂದ್ರಧನುಷ್ ನಿಂದ ಸುಧಾರಿಸಲಾಗಿದೆ. ಲಖಿಂಪುರದಲ್ಲಿ ನಡೆಸಿದ ವಿಶೇಷ ಅಭಿಯಾನಗಳಿಂದಾಗಿ ಶೇಕಡಾ 99 ರಷ್ಟು ಲಸಿಕಾ ವ್ಯಾಪ್ತಿಯನ್ನು ಸಾಧಿಸಲಾಯಿತು.

ಜನಸಾಮಾನ್ಯರ ಆತಂಕಗಳನ್ನು ಹೋಗಲಾಡಿಸಲು ಮತ್ತು ಲಸಿಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ ದಣಿವರಿಯದೆ ಕೆಲಸ ಮಾಡುತ್ತಿದೆ. ಮಾರ್ಚ್ 16 ರಂದು ರಾಷ್ಟ್ರೀಯ ಲಸಿಕಾ ದಿನವನ್ನು ಆಚರಿಸುತ್ತಿರುವುದೂ ಸಹ ಅಂತಹ ಒಂದು ಉಪಕ್ರಮ. ಆ ದಿನದಂದು ದೇಶದಲ್ಲಿ ಮೊದಲ ಮೌಖಿಕ ಪೋಲಿಯೊ ಲಸಿಕೆ ನೀಡಿದ್ದರಿಂದ ಅದು ಮಹತ್ವದ್ದಾಗಿದೆ. ಪೋಲಿಯೊವನ್ನು ಎದುರಿಸಲು ಮತ್ತು ನಿರ್ಮೂಲನೆ ಮಾಡಲು ಪ್ರಾರಂಭಿಸಲಾದ ವ್ಯಾಪಕವಾದ ಪಲ್ಸ್ ಪೋಲಿಯೊ ಅಭಿಯಾನದ ಅಡಿಯಲ್ಲಿ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಬಾಯಿಯ ಮೂಲಕ ಎರಡು ಹನಿ ಲಸಿಕೆ ನೀಡಲಾಗುತ್ತದೆ.

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ (ಯುಐಪಿ) ಮೂರು ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದರೂ, 2014 ರವರೆಗೆ ಶೇ. 65 ರಷ್ಟು ಮಕ್ಕಳು ಮಾತ್ರ ಅವರ ಜೀವನದ ಮೊದಲ ವರ್ಷದಲ್ಲಿ ಸಂಪೂರ್ಣ ಲಸಿಕೆ ಪಡೆದರು. ಇದರರ್ಥ ಸುಮಾರು 89 ಲಕ್ಷ ಮಕ್ಕಳು ಲಸಿಕೆಗಳಿಂದ ವಂಚಿತರಾಗಿದ್ದಾರೆ. ಲಸಿಕೆ ಹಾಕಿಸದ ಮತ್ತು ಭಾಗಶಃ ಲಸಿಕೆ ಹಾಕಿದ ಮಕ್ಕಳು ಹೆಚ್ಚಾಗಿ ಬಾಲ್ಯದ ಕಾಯಿಲೆಗಳು ಮತ್ತು ಅಂಗವೈಕಲ್ಯಕ್ಕೆ ತುತ್ತಾಗುತ್ತಾರೆ. ಲಸಿಕೆಯ ವ್ಯಾಪ್ತಿಯನ್ನು ಸುಧಾರಿಸುವ ಸಲುವಾಗಿ, ಸರ್ಕಾರವು ವಿವಿಧ ಕಾರ್ಯತಂತ್ರಗಳನ್ನು ಜಾರಿಗೆ ತಂದಿತು. ಮಿಷನ್ ಇಂದ್ರಧನುಷ್ ಅಂತಹ ಒಂದು ಕಾರ್ಯಕ್ರಮವಾಗಿತ್ತು.




ಡಿಸೆಂಬರ್ 2014 ರಲ್ಲಿ ಪ್ರಾರಂಭವಾದ ಮಿಷನ್ ಇಂದ್ರಧನುಷ್, ನಿಗದಿತ ತಿಂಗಳುಗಳಲ್ಲಿ ವಿಶೇಷ ಅಭಿಯಾನಗಳ ಮೂಲಕ ಲಸಿಕಾ ವ್ಯಾಪ್ತಿಯನ್ನು ತ್ವರಿತವಾಗಿ ಹೆಚ್ಚಿಸುವ ಉದ್ದೇಶ ಹೊಂದಿದೆ. ಯುಐಪಿ ಅಡಿಯಲ್ಲಿ ನೀಡಲಾಗುವ ಎಲ್ಲಾ ಲಸಿಕೆಗಳನ್ನು ಎರಡು ವರ್ಷದೊಳಗಿನ ಮಕ್ಕಳಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ನೀಡಲಾಗುವುದು. ಮಿಷನ್ ಇಂದ್ರಧನುಷ್‌ನ ಮೊದಲ ಎರಡು ಹಂತಗಳು ಸಂಪೂರ್ಣ ಲಸಿಕಾ ವ್ಯಾಪ್ತಿಯಲ್ಲಿ ಶೇಕಡಾ 6.7 ರಷ್ಟು ಹೆಚ್ಚಳಕ್ಕೆ ಕಾರಣವಾಯಿತು. ಫೆಬ್ರವರಿ 23, 2021 ರವರೆಗೆ, ಮಿಷನ್ ಇಂದ್ರಧನುಷ್ ಅಡಿಯಲ್ಲಿ 3,76,00,000 ಮಕ್ಕಳಿಗೆ ಲಸಿಕೆ ನೀಡಲಾಗಿದೆ.

## ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ (ಯುಐಪಿ)

- ಯುಐಪಿ ಎನ್ನುವುದು ಗಂಟಲುಮಾರಿ ಮತ್ತು ತೀವ್ರ ಸ್ವರೂಪದ ಬಾಲ್ಯದ ಕ್ಷಯರೋಗದಂತಹ ರೋಗಗಳನ್ನು ಗುರಿಯಾಗಿಸಿ ನೀಡುವ ವಿಸ್ತರಿತ ಲಸಿಕಾ ಕಾರ್ಯಕ್ರಮವಾಗಿದೆ.
- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಒಂದು ಭಾಗವಾದ ಯುಐಪಿ ಅತ್ಯಂತ ಕಡಿಮೆ ವೆಚ್ಚದ ಸಾರ್ವಜನಿಕ ಆರೋಗ್ಯ ಕ್ರಮಗಳಲ್ಲಿ ಒಂದಾಗಿದೆ, ಇದು ಲಸಿಕೆಗಳಿಂದ ತಡೆಗಟ್ಟಬಲ್ಲ ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಕಾರಣವಾಗಿದೆ.

**ದೇಶದಲ್ಲಿ ಲಸಿಕೆಯ ವ್ಯಾಪ್ತಿಯನ್ನು ತ್ವರಿತವಾಗಿ ಹೆಚ್ಚಿಸುವ ಉದ್ದೇಶದಿಂದ, ಯುಐಪಿ ಅಡಿಯಲ್ಲಿ ವಾರ್ಷಿಕವಾಗಿ 2.67 ಕೋಟಿ ನವಜಾತ ಶಿಶುಗಳು ಮತ್ತು 2.9 ಕೋಟಿ ಗರ್ಭಿಣಿಯರಿಗೆ ಲಸಿಕೆ ನೀಡಲಾಯಿತು.**

- ಲಸಿಕೆಯಿಂದ ತಡೆಗಟ್ಟಬಹುದಾದ 12 ರೋಗಗಳ ವಿರುದ್ಧ ಲಸಿಕೆಯನ್ನು ರಾಷ್ಟ್ರೀಯವಾಗಿ ಮತ್ತು ಪ್ರಾದೇಶಿಕವಾಗಿ ಉಚಿತವಾಗಿ ನೀಡಲಾಯಿತು.
- ರಾಷ್ಟ್ರೀಯವಾಗಿ, ಒಂಬತ್ತು ರೋಗಗಳ ವಿರುದ್ಧ ಲಸಿಕೆ ನೀಡಲಾಗುತ್ತದೆ. ಅವುಗಳೆಂದರೆ: ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು, ಪೋಲಿಯೊ, ದಡಾರ, ಜರ್ಮನ್ ದಡಾರ, ತೀವ್ರ ಸ್ವರೂಪದ ಬಾಲ್ಯದ ಕ್ಷಯರೋಗ, ಹೆಪಟೈಟಿಸ್ ಬಿ ಮತ್ತು ಮಿದುಳಿನ ರೋಗ, ಮತ್ತು ಹಿಮೋಫಿಲಸ್ ಇನ್ಫ್ಲುಯೆನ್ಸದಿಂದ ಕಾಣಿಸಿಕೊಳ್ಳುವ ನ್ಯುಮೋನಿಯಾ.

## ಯುಐಪಿಯಡಿ ಹೊಸ ಲಸಿಕೆಗಳ ಪರಿಚಯ

ನ್ಯುಮೋಕೊಕಲ್ ನ್ಯುಮೋನಿಯಾದಿಂದ ಉಂಟಾಗುವ ಶಿಶು ಮರಣ ಮತ್ತು ರೋಗಗಳನ್ನು ಕಡಿಮೆ ಮಾಡಲು ನ್ಯುಮೋಕೊಕಲ್ ಕಾಂಜುಗೇಟ್ ಲಸಿಕೆ (ಪಿಸಿವಿ) ಅನ್ನು 2017 ರಲ್ಲಿ ಪ್ರಾರಂಭಿಸಲಾಯಿತು. ಪ್ರಸ್ತುತ ಕೇವಲ ಐದು ರಾಜ್ಯಗಳಿಗೆ ಮಾತ್ರ ಸೀಮಿತವಾದ ಈ 'ಮೇಡ್ ಇನ್ ಇಂಡಿಯಾ' ಲಸಿಕೆಯನ್ನು ವಾರ್ಷಿಕವಾಗಿ **50,000**ಕ್ಕೂ ಹೆಚ್ಚು ಮಕ್ಕಳ ಸಾವು ತಪ್ಪಿಸಲು ದೇಶಾದ್ಯಂತ ನೀಡಲಾಗುವುದು ಎಂದು 2021-22ರ ಬಜೆಟ್ ನಲ್ಲಿ ಪ್ರಕಟಿಸಲಾಗಿದೆ.



- ನಿಷ್ಕ್ರಿಯಗೊಳಿಸಿದ ಪೋಲಿಯೊ ಲಸಿಕೆ (ಐಪಿವಿ) ಯನ್ನು ಯುಐಪಿ ಯಲ್ಲಿ ಜಾಗತಿಕ ಪೋಲಿಯೋ ನಿರ್ಮೂಲನಾ ತಂತ್ರದ ಭಾಗವಾಗಿ ಟಿಒಪಿವಿಗೆ ಸಂಬಂಧಿಸಿದ ಅಪಾಯವನ್ನು ಬಿಒಪಿವಿಗೆ ತಗ್ಗಿಸಲು 2015 ರ ನವೆಂಬರ್‌ನಲ್ಲಿ ಪರಿಚಯಿಸಲಾಯಿತು.
- ರೋಟಾವೈರಸ್ ಅತಿಸಾರದಿಂದ ಉಂಟಾಗುವ ಮರಣ ಮತ್ತು ರೋಗಗಳನ್ನು ಕಡಿಮೆ ಮಾಡಲು ರೋಟಾವೈರಸ್ ಲಸಿಕೆ (ಆರ್‌ವಿವಿ) ಯನ್ನು ಮಾರ್ಚ್ 2016 ರಲ್ಲಿ ಪರಿಚಯಿಸಲಾಯಿತು.
- ದಡಾರವನ್ನು ನಿರ್ಮೂಲನೆ ಮಾಡಲು ಮತ್ತು ರುಬೆಲ್ಲಾ (ಜರ್ಮನ್ ದಡಾರ) ನಿಯಂತ್ರಣಕ್ಕಾಗಿ 2017 ರಲ್ಲಿ ದಡಾರ ರುಬೆಲ್ಲಾ (ಎಮ್‌ಆರ್) ಲಸಿಕೆಯನ್ನು ಪರಿಚಯಿಸಲಾಯಿತು.
- ವಯಸ್ಕಾದವರಲ್ಲಿ ಗಂಟಲುಮಾರಿ ವಿರುದ್ಧ ಕ್ಷೀಣಿಸುತ್ತಿರುವ ರೋಗನಿರೋಧಕ ಶಕ್ತಿಯನ್ನು ಸೀಮಿತಗೊಳಿಸಲು ಯುಐಪಿಯಲ್ಲಿ ಟಿಟಿ ಲಸಿಕೆ ಬದಲಿಗೆ ಧನುರ್ವಾಯು ಮತ್ತು ವಯಸ್ಕರ ಗಂಟಲುಮಾರಿ ಲಸಿಕೆ (ಟಿಡಿ) ಯನ್ನು ನೀಡಲಾಗುತ್ತಿದೆ. ■

**"ಜಗತ್ತಿನಾದ್ಯಂತ ಶೇಕಡಾ 60 ರಷ್ಟು ಮಕ್ಕಳಿಗೆ ನೀಡುವ ಜೀವ ಉಳಿಸುವ ಲಸಿಕೆಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂಬ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡುತ್ತಾನೆ"**
**-ಪ್ರಧಾನಿ ನರೇಂದ್ರ ಮೋದಿ**

# ಕೋವಿಡ್ ಲಸಿಕೆ: ಈಗ ಸಾರ್ವಜನಿಕರ ಸರದಿ

**ಕೊರೊನಾ ವೈರಸ್ ಸಾಂಕ್ರಾಮಿಕ ವಿರುದ್ಧದ ಹೋರಾಟದಲ್ಲಿ ಭಾರತದ ಪಾತ್ರ ಅತ್ಯಂತ ಪ್ರಮುಖವಾದುದೆಂದು ವಿಶ್ವ ಆರೋಗ್ಯ ಸಂಸ್ಥೆ ಪರಿಗಣಿಸಿದೆ. ಮೊದಲ ಹಂತದಲ್ಲಿ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ಹಾಕಿದ ನಂತರ, ಈಗ 2021 ರ ಮಾರ್ಚ್ 1 ರಿಂದ ಜನಸಾಮಾನ್ಯರಿಗೆ ಲಸಿಕೆ ನೀಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಲಸಿಕೆ ಹಾಕಿಸಿಕೊಂಡು ಜನರಿಗೆ ಸಂದೇಶ ನೀಡಿದರು.**

ಕೊರೊನಾ ವೈರಸ್ ವಿರುದ್ಧ ಭಾರತದ ಸಮರವನ್ನು ಇಡೀ ಜಗತ್ತು ಶ್ಲಾಘಿಸಿದೆ. ಈ ಹೋರಾಟ ಈಗ ನಿರ್ಣಾಯಕ ಹಂತವನ್ನು ತಲುಪಿದೆ. ಜನವರಿ 16, 2021 ರಂದು ಪ್ರಾರಂಭವಾದ ಕೊರೊನಾವೈರಸ್ ಲಸಿಕಾ ಅಭಿಯಾನದ ಮೊದಲ ಹಂತದಲ್ಲಿ, 1.43 ಕೋಟಿ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಯಿತು. ಮಾರ್ಚ್ 1, 2021 ರಿಂದ ಮುಂದಿನ ಹಂತದ ಅಭಿಯಾನದಲ್ಲಿ 60 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು 45 ರಿಂದ 59 ವರ್ಷ ವಯಸ್ಸಿನ ಸಹ ಅಸ್ವಸ್ಥತೆಗಳಿರುವರಿಗೆ ಲಸಿಕೆ ನೀಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಲಸಿಕೆ ಪಡೆಯುವ ಮೂಲಕ ಎರಡನೇ ಹಂತಕ್ಕೆ ಚಾಲನೆ ನೀಡಿದರು. ದೇಶಾದ್ಯಂತ ಕನಿಷ್ಠ 12,000 ಸರ್ಕಾರಿ ಆಸ್ಪತ್ರೆಗಳು ಲಸಿಕೆಯನ್ನು ಜನರಿಗೆ ಉಚಿತವಾಗಿ ನೀಡುತ್ತವೆ. ಸಮಾನ ಸಂಖ್ಯೆಯ ಖಾಸಗಿ ಆಸ್ಪತ್ರೆಗಳು ದಿನದ 21 ಗಂಟೆಯೂ ಲಸಿಕೆ ನೀಡಲು ಅನುಮತಿ ನೀಡಲಾಗಿದ್ದು, ಲಸಿಕೆಗೆ 250 ರೂ. ಬೆಲೆ ನಿಗದಿಪಡಿಸಲಾಗಿದೆ. ಇದರ ಮಧ್ಯೆ, ಅರುಣಾಚಲ ಪ್ರದೇಶವು ಕೊರೊನಾ ವೈರಸ್ ಮುಕ್ತವಾಗಿದೆ. ಫೆಬ್ರವರಿ 28 ರವರೆಗೆ ರಾಜ್ಯದಲ್ಲಿ 16,836 ಕೊರೊನಾ ವೈರಸ್ ಪ್ರಕರಣಗಳು ವರದಿಯಾಗಿದ್ದವು. ಮಾರ್ಚ್ 1 ರೊಳಗೆ ಎಲ್ಲಾ ರೋಗಿಗಳು ಚೇತರಿಸಿಕೊಂಡಿದ್ದಾರೆ. ವೈರಾಣು ಸೋಂಕಿನಿಂದಾಗಿ ರಾಜ್ಯದಲ್ಲಿ ಕನಿಷ್ಠ 56 ಜನರು ಸಾವನ್ನಪ್ಪಿದ್ದಾರೆ.




ಭಾರತದಲ್ಲಿ ಎರಡು- ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್ ನ ಕೊವಾಕ್ಸಿನ್ - ಲಸಿಕೆಗಳನ್ನು ನೀಡಲಾಗುತ್ತಿದೆ. ಲಸಿಕೆಗಳ ಬಗ್ಗೆ ಜನರ ಮನಸ್ಸಿನಲ್ಲಿ ಕೆಲವು ಅನುಮಾನಗಳಿವೆ. ಆದರೆ, ಪ್ರಧಾನ ಮಂತ್ರಿಯವರು ಲಸಿಕೆ ತೆಗೆದುಕೊಂಡು ಮಾದರಿಯಾದರು ಮತ್ತು ಲಸಿಕೆಯ ಬಗ್ಗೆ ಹಿಂಜರಿಕೆಯನ್ನು ಕಡಿಮೆ ಮಾಡಿದರು. ಅವರು ಮಾರ್ಚ್ 1 ರಂದು ಬೆಳಗ್ಗೆ ಏಮ್ಸ್ ಗೆ ಭೇಟಿ ನೀಡಿದರು. ಪುದುಚೇರಿ ಮೂಲದ ಪಿ.ನಿವೇದಾ ಅವರು ಲಸಿಕೆಯನ್ನು ಪ್ರಧಾನಿಯವರಿಗೆ ನೀಡಿದರು. ಪ್ರಧಾನಿಯವರು ಅಸ್ಸಾಂನ ಸಾಂಪ್ರದಾಯಿಕ 'ಗಮುಚಾ'ವನ್ನು ಧರಿಸಿದ್ದರು.

"ಏಮ್ಸ್ ನಲ್ಲಿ ಕೋವಿಡ್- 19 ಲಸಿಕೆಯ ಮೊದಲ ಡೋಸ್ ತೆಗೆದುಕೊಂಡೆ. ಕೋವಿಡ್-19 ವಿರುದ್ಧದ ಜಾಗತಿಕ ಹೋರಾಟವನ್ನು ಬಲಪಡಿಸಲು ನಮ್ಮ ವೈದ್ಯರು ಮತ್ತು ವಿಜ್ಞಾನಿಗಳು ತ್ವರಿತ ಸಮಯದಲ್ಲಿ ಹೇಗೆ ಕೆಲಸ ಮಾಡಿದ್ದಾರೆ ಎಂಬುದು ಗಮನಾರ್ಹವಾಗಿದೆ. ಅರ್ಹರಾದ ಎಲ್ಲರೂ ಲಸಿಕೆ ತೆಗೆದುಕೊಳ್ಳುವಂತೆ ನಾನು ಮನವಿ ಮಾಡುತ್ತೇನೆ. ನಾವೆಲ್ಲಾ ಒಟ್ಟಾಗಿ, ಭಾರತವನ್ನು ಕೋವಿಡ್- 19 ರಿಂದ ಮುಕ್ತಗೊಳಿಸೋಣ"

- ಪ್ರಧಾನ ಮಂತ್ರಿ ನರೇಂದ್ರ ಮೋದಿ

## ಕೋವಿಡ್- 19 ಇನ್ನೂ ಹೋಗಿಲ್ಲ, ನಿರ್ಲಕ್ಷ್ಯ ಬೇಡ

**1,80,05,503** ಒಟ್ಟು ಲಸಿಕೆ ನೀಡಲಾಗಿದೆ

**21,99,40,742** ಪರೀಕ್ಷೆಗಳನ್ನು ನಡೆಸಲಾಗಿದೆ

**1,76,319** ಒಟ್ಟು ವರದಿಯಾದ ಪ್ರಕರಣಗಳು

**1,08,39,894** ಒಟ್ಟು ಚೇತರಿಸಿಕೊಂಡ ಪ್ರಕರಣಗಳು

**97.01%**

**ಮರಣ ಪ್ರಮಾಣ: 1.41%** ಎಲ್ಲಾ ಅಂಕಿ-ಅಂಶಗಳು ಮಾರ್ಚ್ 4, 2021 ರವರೆಗೆ

### ಲಸಿಕೆ ಮೈತ್ರಿ

ಭಾರತವು 48 ದೇಶಗಳಿಗೆ 4.61 ಕೋಟಿ ಡೋಸ್ ಕೊರೊನಾ ವೈರಸ್ ಲಸಿಕೆಗಳನ್ನು ನೀಡಿದೆ. ಇತರ ದೇಶಗಳು ಭಾರತದಿಂದ ಕಲಿಯಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

- ಮಾರ್ಚ್ 3, 2021 ರವರೆಗೆ 'ಲಸಿಕೆ ಮೈತ್ರಿ' ಅಡಿಯಲ್ಲಿ, 48 ದೇಶಗಳಿಗೆ 4 ಕೋಟಿ 61 ಲಕ್ಷ 66 ಸಾವಿರ ಲಸಿಕೆಗಳನ್ನುನೀಡಲಾಗಿದೆ. ಈ ಪೈಕಿ 71.25 ಲಕ್ಷ ಲಸಿಕೆಗಳನ್ನು ಉಡುಗೊರೆಯಾಗಿ ನೀಡಲಾಗಿದೆ.
- ಲಸಿಕೆ ಸಮತೆಯನ್ನು ಬೆಂಬಲಿಸುವ ಮತ್ತು ಕೋವಿಡ್ - 19 ಲಸಿಕೆಗಳನ್ನು ವಿಶ್ವದಾದ್ಯಂತದ ದೇಶಗಳೊಂದಿಗೆ ಹಂಚಿಕೊಳ್ಳುವ ಭಾರತದ ಬದ್ಧತೆಯನ್ನು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಶ್ಲಾಘಿಸಿದ್ದಾರೆ, ಇತರ ರಾಷ್ಟ್ರಗಳು ಈ ಮಾದರಿಯನ್ನು ಅನುಸರಿಸಲಿ ಎಂದು ಅವರು ಆಶಿಸಿದ್ದಾರೆ.

## ‘ಮೂರು ಸ್ವಯಂ’ ಗಳ ಮಂತ್ರ ನೀಡಿದ ಪ್ರಧಾನಿ:

# ಸ್ವಯಂ ಜಾಗೃತಿ, ಆತ್ಮ ವಿಶ್ವಾಸ ಮತ್ತು ನಿಸ್ವಾರ್ಥ






ವಿಶ್ವಭಾರತಿ ವಿಶ್ವವಿದ್ಯಾಲಯ ಮತ್ತು ಐಐಟಿ ಖರಗ್‌ಪುರದ ಘಟಿಕೋತ್ಸವದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು, ಆತ್ಮವಿಶ್ವಾಸ, ನಿಸ್ವಾರ್ಥದಿಂದ ಮುನ್ನಡೆಯುವಂತೆ ಮತ್ತು ದೇಶ ಮೊದಲು ಎಂಬ ಆಲೋಚನೆಯೊಂದಿಗೆ ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ದೇಶ ಮೊದಲು ಎಂಬ ಕಲ್ಪನೆಯೊಂದಿಗೆ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವು ನಿಮಗೆ ಕೆಲವು ಪರಿಹಾರಗಳನ್ನು ನೀಡುವುದರಿಂದ ಅಂತಹ ಯಾವುದೇ ನಿರ್ಧಾರದಿಂದ ದೂರ ಸರಿಯಬೇಡಿ ಎಂದು ಅವರು ವಿದ್ಯಾರ್ಥಿಗಳಿಗೆ ಹೇಳಿದರು. ರಾಷ್ಟ್ರೀಯ ಶಿಕ್ಷಣ ನೀತಿಯು ಸ್ವಾವಲಂಬಿ ಭಾರತದತ್ತ ಪಯಣದಲ್ಲಿ ಒಂದು ಮೈಲಿಗಲ್ಲು ಎಂದು ಅವರು ಬಣ್ಣಿಸಿದರು. ಘಟಿಕೋತ್ಸವದಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯದ ಸುಮಾರು 2,535 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ■

### ವಿಶ್ವಭಾರತಿ ಘಟಿಕೋತ್ಸವದಲ್ಲಿ ಪ್ರಧಾನ ಮಂತ್ರಿಯವರು ಮಾಡಿದ ಭಾಷಣದ ಪ್ರಮುಖ ಅಂಶಗಳು

ಏಕ ಭಾರತ-ಶ್ರೇಷ್ಠ ಭಾರತಕ್ಕೆ ಬಂಗಾಳವೇ ಸ್ಫೂರ್ತಿ. **2047** ರಲ್ಲಿ ಭಾರತ ಸ್ವಾತಂತ್ರ್ಯದ 100 ವರ್ಷಗಳ ಆಚರಣೆಗೆ, ವಿಶ್ವ-ಭಾರತಿಯ **25** ದೊಡ್ಡ ಗುರಿಗಳು ಯಾವುವು. ಇದೊಂದು ದೂರದೃಷ್ಟಿಯ ದಾಖಲೆಯಾಗಬಹುದು.

ಮುಂದಿನ ಐದು ವರ್ಷಗಳಲ್ಲಿ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಮೂಲಕ **50,000 ಕೋಟಿ** ರೂ.ಗಳನ್ನು ಸಂಶೋಧನೆಗಾಗಿ ಖರ್ಚು ಮಾಡಲು ಈ ವರ್ಷದ ಬಜೆಟ್ ನಲ್ಲಿ ಪ್ರಸ್ತಾಪಿಸಲಾಗಿದೆ.

- 21ನೇ ಶತಮಾನದಲ್ಲಿ ಭಾರತವು ಜ್ಞಾನ ಆರ್ಥಿಕತೆಯನ್ನು ಸೃಷ್ಟಿಸುವತ್ತ ಸಾಗುತ್ತಿದೆ. ಭಾರತದ ಜ್ಞಾನ ಮತ್ತು ಅಸ್ಮಿತೆಯನ್ನು ವಿಶ್ವದ ಮೂಲೆ ಮೂಲೆಗೂ ಪಸರಿಸುವಲ್ಲಿ ವಿಶ್ವ ಭಾರತಿಗೆ ಬಹು ದೊಡ್ಡ ಪಾತ್ರವಿದೆ.
- ಮೊದಲ ಬಾರಿಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಲಿಂಗ ಸೇರ್ಪಡೆ ನಿಧಿಯನ್ನು ಒದಗಿಸುತ್ತದೆ.
- ಹಳ್ಳಿಗರು, ಕುಶಲಕರ್ಮಿಗಳು ಮತ್ತು ರೈತರನ್ನು ವಿದ್ಯಾರ್ಥಿಗಳು ಸ್ವಾವಲಂಬಿಗಳನ್ನಾಗಿ ಮಾಡ ಬೇಕಾಗಿದೆ. ಅವರ ಉತ್ಪನ್ನಗಳನ್ನು ದೊಡ್ಡ ಮಾರುಕಟ್ಟೆಗಳಿಗೆ ಕೊಂಡೊಯ್ಯಲು ಸರಪಣಿಯನ್ನು ಸೃಷ್ಟಿಸಿ.

### ಐಐಟಿ ಖರಗ್‌ಪುರದಲ್ಲಿ ಪ್ರಧಾನ ಮಂತ್ರಿಯವರ ಭಾಷಣದ ಪ್ರಮುಖ ಅಂಶಗಳು

ಸರ್ಕಾರವು ನಕ್ಷೆ ಮತ್ತು ಭೂ ಮೇಲ್ಮೈ ದತ್ತಾಂಶವನ್ನು (ಜಿಯೋಸ್ಪೇಷಿಯಲ್ ಡೇಟಾ) ನಿಯಂತ್ರಣದಿಂದ ಮುಕ್ತಗೊಳಿಸಿದೆ. ಈ ಕ್ರಮವು ದೇಶದ ಯುವ ನವೋದ್ಯಮ ಮತ್ತು ಅನುಶೋಧಕರಿಗೆ ಹೊಸ ಸ್ವಾತಂತ್ರ್ಯವನ್ನು ಒದಗಿಸುತ್ತದೆ.

ಭಾರತ ಈ ವರ್ಷ ಸ್ವಾತಂತ್ರ್ಯದ **75ನೇ ವರ್ಷ**ವನ್ನು ಆಚರಿಸಿಕೊಳ್ಳಲಿದೆ. ಐಐಟಿ ಖರಗ್‌ಪುರ ಅಭಿವೃದ್ಧಿಪಡಿಸಿರುವ **75 ದೊಡ್ಡ** ಆವಿಷ್ಕಾರಗಳು ಮತ್ತು ಪರಿಹಾರಗಳನ್ನು ಸಂಕಲಿಸುವಂತೆ ನಿಮ್ಮನ್ನು ಕೋರುತ್ತೇನೆ.

- ಪದವಿಯ ನಂತರ ನೀವು ಹೊಸ ಜೀವನವನ್ನು ಪ್ರಾರಂಭಿಸಬೇಕು, ಹಾಗೆಯೇ ನೀವು ದೇಶದಲ್ಲಿ ಲಕ್ಷಾಂತರ ಜನರನ್ನು ಪರಿವರ್ತಿಸಬಲ್ಲ ಒಂದು ನವೋದ್ಯಮವಾಗಬೇಕು.
- ಒಬ್ಬ ಎಂಜಿನಿಯರ್ ಆಗಿ, ವಿಷಯಗಳನ್ನು ಅಭಿವೃದ್ಧಿಪಡಿಸಬಲ್ಲ ಅಂತರ್ಗತ ಸಾಮರ್ಥ್ಯ ನಿಮ್ಮೊಳಗಿದೆ.
- ಐಐಟಿ ಖರಗ್‌ಪುರ ಮಾಹಿತಿ ತಂತ್ರಜ್ಞಾನ, ಆಧುನಿಕ ನಿರ್ಮಾಣ ತಂತ್ರಜ್ಞಾನ ಮತ್ತು ಕೋವಿಡ್- 19 ರಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿದೆ.
- ಪ್ರಧಾನಮಂತ್ರಿ ಸಂಶೋಧನಾ ಫೆಲೋ ಯೋಜನೆ ಸಂಶೋಧನೆಗೆ ಹೊಸ ಅರ್ಥ ಕಲ್ಪಿಸಿದೆ.

ಪ್ರಧಾನ ಮಂತ್ರಿಯವರ ಸಂಪೂರ್ಣ ಭಾಷಣವನ್ನು ಕೇಳಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

# ಒತ್ತಡ ನಿವಾರಕಗಳಾಗಿ ಆಟಿಕೆಗಳು!

ಮಕ್ಕಳ ಕೋಮಲ ಮನಸ್ಸಿನ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಆಟಿಕೆಗಳು ಮುಖ್ಯ. ಇವು ಒತ್ತಡವನ್ನು ನಿವಾರಿಸುವ ಸಾಧನಗಳೂ ಆಗಿವೆ. ಆಟಿಕೆ ತಯಾರಿಕೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಆಟಿಕೆಗಳಿಗೆ ಹೊಸ ಆಯಾಮವನ್ನು ನೀಡುತ್ತದೆ, ಆಟಿಕೆ ಉದ್ಯಮವನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸುವತ್ತ ಸರ್ಕಾರ ಗಮನ ಹರಿಸಿದೆ.

## ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳಿಂದ ವಿಶಿಷ್ಟ ಆಟಿಕೆಗಳ ತಯಾರಿಕೆ



ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿರುತ್ತಾನೆ. ನವದೆಹಲಿಯ ಹಳೆ ಜೆಎನ್‌ಯು ಕ್ಯಾಂಪಸ್‌ನ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಭಾರತದ ಮೊದಲ ಆಟಿಕೆ ಮೇಳದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶ ದೊರಕಿತು. ಆ ಮೇಳದಲ್ಲಿ, ವಿದ್ಯಾರ್ಥಿಗಳು ಆಟಿಕೆ ತಯಾರಿಕೆಯ ವಿಭಿನ್ನ ವಿಧಾನಗಳನ್ನು ಪ್ರದರ್ಶಿಸಿದರು, ಅದು ವಿಭಿನ್ನ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಿತು. ಆಟಿಕೆ ತಯಾರಿಕೆಯಲ್ಲಿ ತೊಡಗಿಸಿಕೊಂಡ ವಿದ್ಯಾರ್ಥಿಯೊಬ್ಬ, ಈ ಆಟಿಕೆಗಳ ಸಹಾಯದಿಂದ ವಿಷಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು ಎಂದು ಹೇಳಿದ. “ಈ ಆಟಿಕೆ ಮೂಲಕ ಕಲಿಯುವುದರಿಂದ ಭಾರತೀಯ ಪರಂಪರೆ ಮತ್ತು ಸಂಸ್ಕೃತಿಯ ಬಗ್ಗೆ ನಮಗೆಲ್ಲರಿಗೂ ಅರಿವು ಮೂಡುತ್ತದೆ. ಈ ಪ್ರಕ್ರಿಯೆಯು ವಿನೋದಮಯವಾಗಿರುವುದು ಮಾತ್ರವಲ್ಲ, ಮಾಹಿತಿಯುಕ್ತವೂ ಆಗಿದೆ” ಎಂದು ವಿದ್ಯಾರ್ಥಿ ಹೇಳಿದರು. ಇನ್ನೂ ಕೆಲವು ವಿದ್ಯಾರ್ಥಿಗಳು ದೂರ ನಿಯಂತ್ರಣ ಆಟಿಕೆಗಳನ್ನು ತಯಾರಿಸಿದ್ದಾರೆ. “ಈ ನಾಲ್ಕು ಚಕ್ರಗಳ ದೂರ ನಿಯಂತ್ರಣ ಆಟಿಕೆಗಳ ತಯಾರಿಕೆಯಲ್ಲಿ ಭೌತಶಾಸ್ತ್ರದ ಸಿದ್ಧಾಂತಗಳನ್ನು ಅನ್ವಯಿಸಲಾಗಿದೆ” ಎಂದು ಅವರು ಹೇಳುತ್ತಾರೆ. ಶಾಲೆಯಲ್ಲಿನ ಪರಿಸರದ ಬಗ್ಗೆ ಸಂತಸ ವ್ಯಕ್ತಪಡಿಸಿದ ಸುದೀಪ್ ಬಾಜಪೇಯಿ, ವಿದ್ಯಾರ್ಥಿಗಳು ಮಾತ್ರವಲ್ಲ, ಶಾಲೆಯ ಒಟ್ಟಾರೆ ವಾತಾವರಣವೂ ಹಿತಕರವಾಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು. “ಇದು ಕೇಂದ್ರ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಶಿಕ್ಷಣ ನೀತಿಯ ಮೊದಲ ಅಧ್ಯಾಯವಾಗಿದೆ. ಈಗ ವಿದ್ಯಾರ್ಥಿಗಳು ವಿಷಯಗಳನ್ನು ವೇಗವಾಗಿ ಮತ್ತು ವಿನೂತನ ರೀತಿಯಲ್ಲಿ ಕಲಿಯುತ್ತಾರೆ ಎಂದು ನನಗೆ ನಂಬಿಕೆ ಇದೆ” ಎಂದು ಅವರು ಹೇಳಿದರು. ಆಟಿಕೆ ಮೇಳವು ಹೊಸ ಭರವಸೆ ಮತ್ತು ಹೊಸ ಕಲಿಕೆಯ ಹೊಸ ಯುಗಕ್ಕೆ ನಾಂದಿ ಹಾಡುತ್ತದೆ.

## ಕೊರೊನಾ ವೈರಸ್ ಬಗ್ಗೆ ಜಾಗೃತಿ ಮೂಡಿಸಲು ವಿಶಿಷ್ಟ ಹಾವು ಮತ್ತು ಏಣಿ ಆಟ



ಆವಿಷ್ಕಾರಿ ಮನಸ್ಸುಗಳು ಸಾಮಾನ್ಯ ಕೆಲಸಗಳನ್ನು ಸಹ ವಿಭಿನ್ನ ರೀತಿಯಲ್ಲಿ ಮಾಡುತ್ತವೆ. ಮಧ್ಯಪ್ರದೇಶದ ಇಂದೋರ್ ನಿವಾಸಿ ಸಮೀರ್ ಕುಮಾರ್, ಕೊರೊನಾ ವೈರಸ್ ಸೋಂಕಿನಿಂದ ರಕ್ಷಣೆ ಪಡೆಯುವ ಬಗ್ಗೆ ಜಾಗೃತಿ ಮೂಡಿಸಲು ಒಂದು ಅನನ್ಯ ಮಾರ್ಗವನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಹಾವು ಮತ್ತು ಏಣಿ ಆಟವನ್ನು ತಮ್ಮ ಸೃಜನಶೀಲತೆಯಿಂದ ಮತ್ತಷ್ಟು ಆಸಕ್ತಿದಾಯಕವಾಗಿಸಿದ್ದಾರೆ. ಅವರ ಹಾವು ಮತ್ತು ಏಣಿ ಆವೃತ್ತಿಯಲ್ಲಿ, ಆಟಗಾರರು ತಮ್ಮನ್ನು ಹಾವುಗಳಿಗೆ ಬದಲಾಗಿ, ಕೊರೊನಾ ವೈರಸ್‌ನಿಂದ ಉಳಿಸಿಕೊಳ್ಳಬೇಕಾಗುತ್ತದೆ. ಇದು ಕೊರೊನಾ ವೈರಸ್‌ನಿಂದ ಜನರು ತಮ್ಮನ್ನು ರಕ್ಷಿಸಿಕೊಳ್ಳಲು ಮಾಡಬೇಕಾದ ಮತ್ತು ಮಾಡಬಾರದ ಕ್ರಮಗಳ ಬಗ್ಗೆ ಹೇಳುತ್ತದೆ. ತಮ್ಮ ಆಟದ ಮೂಲಕ, ಸಮೀರ್ ಭಾರತದ ಮೊದಲ ಆಟಿಕೆ ಮೇಳಕ್ಕೆ ಪ್ರವೇಶ ಪಡೆದರು. ಅವರ ಆಟ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. “ಕೊರೊನಾ ವೈರಸ್‌ನಿಂದ ರಕ್ಷಣೆಗಾಗಿ ಮುಖಗವಸು, ಸ್ಯಾನಿಟೈಸರ್ ಬಳಕೆ ಮತ್ತು ಸಾಮಾಜಿಕ ಅಂತರವನ್ನು ಪಾಲಿಸುವ ಬಗ್ಗೆ ಆಟವು ಹೇಳುತ್ತದೆ. ಜಾಗೃತಿ ಮೂಡಿಸಲು ನಾನು ಈ ಆಟವನ್ನು ರೂಪಿಸಿದ್ದೇನೆ.” ಎಂದು ಸಮೀರ್ ಹೇಳುತ್ತಾರೆ. ಸ್ಪರ್ಶರಹಿತ ಫ್ರೆಶ್ನರ್ ಮತ್ತು ನ್ಯೂಮ್ಯಾಟಿಕ್ ಟ್ರೈನಿಂಗ್ ಕಿಟ್ ಅನ್ನು ಸಹ ಸಮೀರ್ ಅಭಿವೃದ್ಧಿಪಡಿಸಿದ್ದಾರೆ, ಇದು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ■

RNI No. :
DELKAN/2020/78828
March: 16-31, 2021

# ನ್ಯೂ ಇಂಡಿಯಾ ಸಮಾಚಾರ
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NOU (S)-91/2020-22 posting at BPC, Meghdoot Bhawan, New Delhi - 110 001 on 13-17 advance Fornightly (Publishing Date March 5, 2021, Pages - 44)





“ಪ್ರತಿ ಮಗುವಿಗೂ ಹಾವು ಮತ್ತು ಏಣಿ ಆಟದ ಬಗ್ಗೆ ಗೊತ್ತು. ಆದರೆ, ಇದು “ಮೋಕ್ಷ ಪಟಮ್” ಅಥವಾ “ಪರಮಪದಮ್” ಎಂದು ಕರೆಯಲಾಗುವ ಮತ್ತೊಂದು ಸಾಂಪ್ರದಾಯಿಕ ಭಾರತೀಯ ಆಟವಾಗಿದೆ ಎಂಬುದು ನಿಮಗೆ ಗೊತ್ತೇ?”

- ಪ್ರಧಾನಿ ನರೇಂದ್ರ ಮೋದಿ

| ಸಂಪಾದಕ | ಮುದ್ರಕರು ಮತ್ತು ಪ್ರಕಾಶಕರು | ಪ್ರಕಾಶಕರು | ಮುದ್ರಣ: |
| --- | --- | --- | --- |
| ಜೈದೀಪ್ ಭಟ್ನಾಗರ್<br>ಪ್ರಧಾನ ಮಹಾನಿರ್ದೇಶಕರು,<br>ಪಿಐಬಿ, ನವದೆಹಲಿ | ಸತ್ಯೇಂದ್ರ ಪ್ರಕಾಶ್,<br>ಪ್ರಧಾನ ಮಹಾನಿರ್ದೇಶಕರು,<br>ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯೂನಿಕೇಷನ್ ಪರವಾಗಿ | ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯೂನಿಕೇಷನ್<br>2ನೇ ಮಹಡಿ, ಸೂಚನಾ ಭವನ,<br>ನವದೆಹಲಿ – 110003 | ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವಿಸಸ್ ಪ್ರೈ. ಲಿಮಿಟೆಡ್<br>ಎಫ್‌ಬಿಡಿ–ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ,<br>ನವದೆಹಲಿ–ಫರೀದಾಬಾದ್ ಬಾರ್ಡರ್<br>ಎನ್‌ಹೆಚ್–1 ಫರೀದಾಬಾದ್–121003 |